ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮಾರ್ಚ್ 12 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 321 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕುಡಿಯುವ ನೀರು ಸಮಸ್ಯೆ ನಿರ್ವಹಣೆಗೆ ಮುಂದಿನ ವಾರ ಟಾಸ್ಕ್‌ಫೋರ್ಸ್ ರಚನೆ

ಗ್ರಾಪಂ ಸಿಬ್ಬಂದಿ ವೇತನ ಪರಿಷ್ಕರಣೆ ಸಂಬಂಧವೂ ಸೂಕ್ತ ಕ್ರಮ

ಬೆಂಗಳೂರು, ಮಾ. 11(ಕೆಎಂಶಿ)– ಕುಡಿಯುವ ನೀರಿನ ಸಮಸ್ಯೆ ನಿರ್ವಹಣೆಗೆ ಮುಂದಿನ ವಾರ ಟಾಸ್ಕ್‌ಫೋರ್ಸ್ ರಚನೆ ಮಾಡುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.



ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ದುರ್ಯೋಧನ ಐಹೊಳೆ ಮತ್ತು ಸಿ.ಸಿ. ಪಾಟೀಲ್ ಪ್ರಸ್ತಾವಗಳಿಗೆ ಉತ್ತರಿಸಿದ ಅವರು, ನೀರಿನ ಮೂಲಗಳು ಇಲ್ಲದ ಕಡೆ ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಅವಕಾಶವಿಲ್ಲ. ಇಂತಹ ಪ್ರಕರಣಗಳ ಬಗ್ಗೆ ನಿರ್ದಿಷ್ಟ ಮಾಹಿತಿ ನೀಡಿದರೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿ ಪೂರ್ಣಗೊಂಡ ಬಳಿಕ ಗ್ರಾಮ ಪಂಚಾಯತ್‌ಗೆ ಹಸ್ತಾಂತರಗೊಂಡಿರುವ ಕಡೆ ನಿರ್ವಹಣೆ ಕೂಡ ಮುಖ್ಯವಾಗಿದೆ. ಓವರ್‌ಹೆಡ್ ಟ್ಯಾಂಕ್‌ಗಳ ನಿರ್ಮಾಣಕ್ಕೆ ಈ ವರ್ಷದ ಬಜೆಟ್‌ನಲ್ಲಿ ಒಂದು ಸಾವಿರ ಕೋಟಿ ರೂ. ಮೀಸಲಿರಿಸಲಾಗಿದೆ. ವಿದ್ಯುತ್ ಸಂಪರ್ಕಕ್ಕೆ ಸಮುದಾಯ ಆಧಾರಿತವಾಗಿ ವೆಚ್ಚ ಭರಿಸಬೇಕು. ಕರ್ನಾಟಕದಲ್ಲಿ ರಾಜ್ಯ ಸರ್ಕಾರವೇ ತನ್ನ ಬೊಕ್ಕಸದಿಂದ ವಿದ್ಯುತ್ ಸಂಪರ್ಕ ಕಲ್ಪಿಸುತ್ತಿದೆ. ಇದಕ್ಕಾಗಿ ನಿನ್ನೆಯಷ್ಟೇ 16 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ■6ನೇ ಪುಟಕ್ಕೆ

ಭಾಗಮಂಡಲದ ಬಳಿ ಕುಡಿದ ಮತ್ತಿನಲ್ಲಿ ಮಹಿಳೆ ಸೇರಿ ಇಬ್ಬರ ಹತ್ಯೆ: ಆರೋಪಿ ಬಂಧನ

ಮಡಿಕೇರಿ, ಮಾ.11–ಕುಡಿದ ಮತ್ತಿನಲ್ಲಿ ಸಹೋದರ ಸಂಬಂಧಿಗಳ ನಡುವೆ ನಡೆದ ಗಲಾಟೆ ಮಹಿಳೆ ಸೇರಿ ಇಬ್ಬರ ಹತ್ಯೆಯಲ್ಲಿ ಅಂತ್ಯಗೊಂಡಿದೆ. ಈ ಘಟನೆ ಭಾಗ ಮಂಡಲ ಪೊಲೀಸ್ ಠಾಣಾ ವ್ಯಾಪ್ತಿಯ ಕುಂದಚೇರಿ ಗ್ರಾಮದಲ್ಲಿ ಇಂದು ಸಂಜೆ ಸಂಭವಿಸಿದೆ

ಅಡಿಯರ ಯಶೋಧ (50), ಕುಂಞಿರಾಮ (57) ಕೊಲೆಯಾದ ದುರ್ದೈವಿಗಳಾಗಿದ್ದಾರೆ. ಚಂದು (65) ಎಂಬಾತ ಕೊಲೆಗೈದ ಆರೋಪಿ. ಇಂದು ಗ್ರಾಮದಲ್ಲಿ ಈ ಕುಟುಂಬಕ್ಕೆ ಸೇರಿದ ಹಬ್ಬ ನಡೆಯುತ್ತಿದ್ದು, ಈ ವೇಳೆ ಎಲ್ಲರೂ ಮದ್ಯಪಾನ ಮಾಡಿದ್ದರು ಎನ್ನಲಾಗಿದೆ. ಹತ್ಯೆಯಾದವರು ಮತ್ತು ಕೊಲೆ ಆರೋಪಿ ಒಂದೇ ಸಮುದಾಯಕ್ಕೆ ಸೇರಿದವರಾಗಿದ್ದು, ಇವರ ನಡುವೆ ಈ ಹಿಂದಿನಿಂದಲೇ ಕ್ಷುಲ್ಲಕ ವಿಚಾರಕ್ಕೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದೆ. ಇಂದು ಈ ಮೂವರು ಮಂದಿ ಹಬ್ಬ ಮುಗಿಸಿದ ಬಳಿಕ ಮನೆಗೆ ತೆರಳಿದ್ದಾರೆ. ಸಂಜೆ 6 ಗಂಟೆ ಸಮಯದಲ್ಲಿ ಇದೇ ಕ್ಷುಲ್ಲಕ ಕಾರಣಕ್ಕಾಗಿ ಮೂರು ಮಂದಿಯ ನಡುವೆ ಮಾತಿಗೆ ಮಾತು ಬೆಳೆದಿದ್ದು, ರೊಚ್ಚಿಗೆದ್ದ ಚಂದು ಕತ್ತಿಯಿಂದ ಯಶೋಧ ಮತ್ತು ಕುಂಞಿರಾಮ ಅವರ ಮೇಲೆ ದಾಳಿ ನಡೆಸಿದ್ದಾನೆ. ಪರಿಣಾಮ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸುದ್ದಿ ತಿಳಿದು ಭಾಗಮಂಡಲ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದು, ಆರೋಪಿಯನ್ನು ಬಂಧಿಸಿ ಕೊಲೆ ಪ್ರಕರಣ ■6ನೇ ಪುಟಕ್ಕೆ

ಅಡುಗೆ ಅನಿಲದ ಆತಂಕ ಬೇಡ

■ ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ ಭರವಸೆ
■ ಆದರೆ ಮಿತವಾಗಿ ಬಳಸುವಂತೆ ಕಿವಿಮಾತು

ಬೆಂಗಳೂರು, ಮಾ. 11(ಕೆಎಂಶಿ)– ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಕೊರತೆ ಬಗ್ಗೆ ಆತಂಕ ಬೇಡ. ಆದರೆ, ಮಿತವಾಗಿ ಬಳಸುವಂತೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ವಿಧಾನಸಭೆಯಲ್ಲಿಂದು ಮನವಿ ಮಾಡಿದ್ದಾರೆ.



ಇರಾನ್ ಮತ್ತು ಅಮೆರಿಕ–ಇಸ್ರೇಲ್ ನಡುವೆ ಯುದ್ಧ ಮುಂದುವರೆದರೂ ಕರ್ನಾಟಕದಲ್ಲಿ ಗೃಹ ಬಳಕೆ ಸಿಲಿಂಡರ್ ಪೂರೈಕೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಪ್ರತಿ ತಿಂಗಳು ಕುಟುಂಬಕ್ಕೆ ಒಂದು ಸಿಲಿಂಡರ್ ಮಾತ್ರ ಲಭ್ಯವಿರಲಿದೆ. ಆದ್ದರಿಂದ ಮಿತವ್ಯಯವಾಗಿ ಬಳಸಿಕೊಳ್ಳಿ.

ತೈಲ ಸರಬರಾಜು ಕಂಪನಿಗಳ ಜೊತೆ ಇಂದು ಸಭೆ ನಡೆಸಿ ಮಾಹಿತಿ ಪಡೆದುಕೊಂಡಿದ್ದೇನೆ. ಅಲ್ಲದೆ, ಗೃಹ ಬಳಕೆ ಸಿಲಿಂಡರ್ ಪೂರೈಕೆಗೆ ತೊಂದರೆ ಆಗದು ಎಂಬ ಭರವಸೆ ನೀಡಿದ್ದಾರೆ. ಆದರೆ, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಮೇಲೆ ಸ್ವಲ್ಪ ನಿಯಂತ್ರಣ ಹೇರಲಾಗಿದೆ. ಹೋಟೆಲ್ ಉದ್ಯಮದವರು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು. ■6ನೇ ಪುಟಕ್ಕೆ



ಎಲ್‌ಪಿಜಿ ಭೀತಿ ಬೇಡ; ಕೇಂದ್ರ ಅಭಯ

ನವದೆಹಲಿ, ಮಾ.11– ಜನರು ಭೀತಿಗೆ ಒಳಗಾಗಿ ಎಲ್‌ಪಿಜಿ ಸಿಲಿಂಡರ್ ಖರೀದಿಸಲು ಮುಂದಾಗುವ ಅಗತ್ಯವಿಲ್ಲ! ಎಂದಿನಂತೆ ಎಲ್‌ಪಿಜಿ ಸಿಲಿಂಡರ್ ಪೂರೈಸುವ ಕೆಲಸ ನಡೆದಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮ ಹೇಳಿದ್ದಾರೆ.

ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ವ್ಯವಸ್ಥೆಗೆ ಧಕ್ಕೆ ಆಗಿಲ್ಲ. ಕಚ್ಚಾ ತೈಲವನ್ನು ಹೊರ್ಮುಜ್ ಜಲಸಂಧಿ ಬಳಸದ ಮೂಲಗಳಿಂದ ತರಿಸಿಕೊಳ್ಳಲಾಗುತ್ತಿದೆ ಎಂದಿದ್ದಾರೆ. ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮವಾಗಿ ಎಲ್‌ಪಿಜಿ ಉತ್ಪಾದನೆಯಲ್ಲಿ ಶೇ 25ರಷ್ಟು ಹೆಚ್ಚಳ ಆಗಿದೆ ಎಂದು ಸಚಿವಾಲಯ ಹೇಳಿದೆ. ತಪ್ಪು ಮಾಹಿತಿಯ ಕಾರಣದಿಂದಾಗಿ ಕೆಲವರು ಭೀತಿಗೆ ಒಳಗಾಗಿ ಎಲ್‌ಪಿಜಿ ಸಿಲಿಂಡರ್ ಖರೀದಿಗೆ ಮುಂದಾಗಿದ್ದಾರೆ. ಆದರೆ ಗ್ರಾಹಕರು ಭೀತಿಗೆ ಒಳಗಾಗಿ ಸಿಲಿಂಡರ್ ಬುಕ್ ಮಾಡಬೇಕಾದ ಪರಿಸ್ಥಿತಿ ಇಲ್ಲ. ಎಲ್‌ಪಿಜಿ ಸಿಲಿಂಡರ್ ಅಕ್ರಮ ಸಂಗ್ರಹ ಹಾಗೂ ಅವುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿದೆ ಎಂದು ಸಚಿವಾಲಯವು ತಿಳಿಸಿದೆ. ■6ನೇ ಪುಟಕ್ಕೆ

ಕೇಂದ್ರ 'ನಗರ ಆರ್ಥಿಕ ವಲಯ' ಯೋಜನೆಗೆ ಮೈಸೂರು ಸೇರ್ಪಡೆ ಸಂಬಂಧ ಯದುವೀರ್ ಮನವಿ

ಮೈಸೂರು, ಮಾ.11– ದೇಶದ ಆರ್ಥಿಕತೆ ಕೊಡುಗೆಗಳನ್ನು ನೀಡಲು ಪ್ರಮುಖ ಪಾತ್ರ ವಹಿಸುವ ನಗರಗಳ ಅಭಿವೃದ್ಧಿಗೆ ಒತ್ತು ನೀಡಲು ಮುಂದಾಗಿರುವ ಕೇಂದ್ರ ಸರ್ಕಾರ ಈಗ ಮೈಸೂರಿಗೂ ವಿಶೇಷ ಕೊಡುಗೆ ನೀಡಲು ನಿರ್ಧರಿಸಿದೆ

ಮೈಸೂರನ್ನು 'ನಗರ ಆರ್ಥಿಕ ವಲಯ' ಯೋಜನೆಗೆ ಸೇರ್ಪಡೆಗೊಳಿಸಲು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ನವದೆಹಲಿಯಲ್ಲಿ ವಿತ್ತ ಸಚಿವರನ್ನು ಭೇಟಿ ಮಾಡಿದ ಸಂಸದ ಯದುವೀರ್ ಒಡೆಯರ್, ಬಜೆಟ್‌ನಲ್ಲಿ ಘೋಷಣೆ ಮಾಡಿರುವ 'ನಗರ ಆರ್ಥಿಕ ವಲಯ' ಯೋಜನೆಗೆ ಮೈಸೂರು ನಗರವನ್ನೂ ಸೇರ್ಪಡೆ ಮಾಡಬೇಕು. ಸಾಂಸ್ಕೃತಿಕ ರಾಜಧಾನಿಯಾಗಿರುವ ಮೈಸೂರು ವಿಶ್ವಮಟ್ಟದಲ್ಲಿ ಖ್ಯಾತಿ ಗಳಿಸಿದೆ. ಅದನ್ನು ಮತ್ತಷ್ಟು ಮೇಲ್ದರ್ಜೆಗೇರಿಸಲು ಈ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ■6ನೇ ಪುಟಕ್ಕೆ


ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಂಸದ ಯದುವೀರ್ ಮನವಿ ಸಲ್ಲಿಕೆ.

ಏನಿದು ನಗರ ಆರ್ಥಿಕ ವಲಯ

ನಗರಾಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಈಗಾಗಲೇ ಬೆಂಗಳೂರು, ಸೂರತ್, ವಾರಣಾಸಿ, ವಿಶಾಖಪಟ್ಟಣಂ, ಭುವನೇಶ್ವರ್, ಪುರಿ, ಕಟಕ್, ಕೊಯಮತ್ತೂರು, ಈರೋಡ್, ತಿರುಪ್ಪೂರ್ ಒಳಗೊಂಡಂತೆ 'ನಗರ ಆರ್ಥಿಕ ವಲಯ ಯೋಜನೆ' ರೂಪಿಸಿದೆ. ಪ್ರತಿ ವಲಯಕ್ಕೆ ವಾರ್ಷಿಕ ಐದು ಸಾವಿರ ಕೋಟಿ ರೂ. ಅನುದಾನ ಒದಗಿಸಲಾಗುತ್ತಿದೆ. ಈ ಹಣದಲ್ಲಿ ನಗರ ಅಭಿವೃದ್ಧಿ ಕೈಗೊಳ್ಳಲು ಬಳಸಲಾಗುತ್ತದೆ. ಖಾಸಗಿ–ಸರ್ಕಾರ ಸಹಭಾಗಿತ್ವದಲ್ಲಿ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಇದರೊಂದಿಗೆ 'ಪ್ರಾದೇಶಿಕ ಮೆಡಿಕಲ್ ಹಬ್' ಯೋಜನೆ ಅನುಷ್ಠಾನಕ್ಕೂ ಕೇಂದ್ರ ಸರ್ಕಾರ ಮುಂದಾಗಿದೆ.

ಇಂಡಕ್ಷನ್ ಸ್ಟೌವ್‌ಗೆ ಈಗ ಬಾರೀ ಬೇಡಿಕೆ

ಮೈಸೂರು,ಮಾ.11(ಪಿಎಂ/ಎಸ್‌ಪಿಎನ್)– ವಾಣಿಜ್ಯ ಸಿಲಿಂಡರ್ ಪೂರೈಕೆ ಸ್ಥಗಿತ ಹಾಗೂ ಗೃಹ ಬಳಕೆ ಸಿಲಿಂಡರ್ ಪೂರೈಕೆ ರಿಯಾಗಲು ಸುಮಾರು ತಿಂಗಳು ಕಾಲ ಕಾಯಬೇಕಾದ ಪರಿಸ್ಥಿತಿ ಸದ್ಯ ನಿರ್ಮಾಣವಾಗಿದೆ ಈ ಹಿನ್ನೆಲೆಯಲ್ಲಿ ಹೆಚ್ಚಿನ ಜನ ಇಂಡಕ್ಷನ್ ಸ್ಟೌವ್‌ಗಳ ಮೊರೆ ಹೋಗುತ್ತಿದ್ದಾರೆ.



ಒಂದೆಡೆ ಮನೆಗಳಿಗೆ ವಿದ್ಯುತ್ ಆಧಾರಿತ ಇಂಡಕ್ಷನ್ ಸ್ಟೌವ್‌ಗಳ ಖರೀದಿ ಹೆಚ್ಚಾಗುತ್ತಿದ್ದರೆ, ಮತ್ತೊಂದೆಡೆ ಟೀ ಕಾಫಿ ತಯಾರಿಕೆಗೆ ಹೋಟೆಲ್‌ಗಳಲ್ಲಿ ಇಂಡಕ್ಷನ್ ಸ್ಟೌವ್ ಬಳಸಿಕೊಳ್ಳಲಾಗುತ್ತಿದೆ. ಲಾಯಲ್ ವರ್ಲ್ಡ್ ಮಳಿಗೆಗಳು ಹಾಗೂ ಅರೋಮಾ ಬೇಕುಗಳ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ 'ಮೈಸೂರು ಮಿತ್ರ'ನೊಂದಿಗೆ ■6ನೇ ಪುಟಕ್ಕೆ

ಮೈಸೂರು ಕೈಗಾರಿಕಾ ವಲಯಕ್ಕೂ ಗ್ಯಾಸ್ ಟ್ರಬಲ್!

ಮೈಸೂರು,ಮಾ.11(ಪಿಎಂ)– ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಷರತ್ತುಗಳಡಿ ಪೂರೈಕೆಯಾಗುತ್ತಿದೆ. ಆದರೆ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆ ಸದ್ಯ ಸ್ಥಗಿತವಾಗಿರುವ ಕಾರಣ ಕೈಗಾರಿಕೋದ್ಯಮದ ಮೇಲೆ ಹೊಡೆತ ಬಿದ್ದಿದೆ.

ಸಿಲಿಂಡರ್ ಇಲ್ಲದ ಕಾರಣ ಕೈಗಾರಿಕೆಗಳ ಉತ್ಪಾದನೆ ತಗ್ಗಿದೆ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ವಾಣಿಜ್ಯ ಸಿಲಿಂಡರ್ ಪೂರೈಕೆ ಸ್ಥಗಿತವಾಗಿರುವ ಹಿನ್ನೆಲೆಯಲ್ಲಿ ಕೈಗಾರಿಕೆಗಳ ಉತ್ಪಾದನೆ ಪ್ರಕ್ರಿಯೆಗೂ ಹಿನ್ನಡೆಯಾಗಿದೆ. ವೆಲ್ಡಿಂಗ್, ಟಂಗ್‌ಸ್ಟನ್ ವೈರ್ ಕಾರ್ಖಾನೆಗಳು ಸೇರಿದಂತೆ ಸಾಕಷ್ಟು ಕೈಗಾರಿಕೆಗಳು ಎಲ್‌ಪಿಜಿ ಸಿಲಿಂಡರ್ ಅವಲಂಬಿಸಿವೆ. ಹಾಗಾಗಿ ಕೈಗಾರಿಕೆಗಳ ಉತ್ಪಾದನೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಇನ್ನೆರಡು ದಿನ ಇದೇ ರೀತಿಯಾದರೆ ಕಾರ್ಖಾನೆಗಳನ್ನು ಬಂದ್ ಮಾಡುವ ಅನಿವಾರ್ಯತೆ ಎದುರಾಗಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿ, ಕೆಲವು ಕೈಗಾರಿಕೆಗಳಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಬಳಕೆ ಮಾಡಲಾಗುತ್ತದೆ. ಅಂತಹ ಕೈಗಾರಿಕೆಗಳಲ್ಲಿ ಸಮಸ್ಯೆ ಇದೀಗ ಶುರುವಾಗುತ್ತಿದೆ. ಹಾಗಾಗಿ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಗಮನ ನೀಡಬೇಕು. ಈಗ ದಾಸ್ತಾನು ಇದ್ದ ಸಿಲಿಂಡರ್‌ಗಳ ಬಳಕೆಯಲ್ಲಿ ಕೆಲಸ ಮಾಡಲಾಗುತ್ತಿದೆ. ಅವುಗಳು ಖಾಲಿಯಾದ ಮೇಲೆ ತೀವ್ರತರ ಸಮಸ್ಯೆ ಎದುರಾಗಲಿದೆ ಎಂದರು.

ಜೊತೆಗೆ ಕಾರ್ಖಾನೆಗಳಲ್ಲಿ ಕಾರ್ಮಿಕರ ಊಟ–ತಿಂಡಿಗಾಗಿ ಕ್ಯಾಂಟಿನ್‌ಗಳೂ ಇದ್ದು, ಅವುಗಳಲ್ಲಿ ಸಹ ವಾಣಿಜ್ಯ ಸಿಲಿಂಡರ್ ಬಳಕೆ ಮಾಡಲಾಗುತ್ತದೆ. ಹಾಗಾಗಿ ಕಾರ್ಖಾನೆ ಕ್ಯಾಂಟಿನ್‌ಗಳಿಗೂ ತೊಂದರೆ ಆಗಲಿದೆ. ■6ನೇ ಪುಟಕ್ಕೆ



> ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಸಾಕಷ್ಟು ಕಾರ್ಖಾನೆಗಳು ಅನಿಲ ಸಿಲಿಂಡರ್ ಅವಲಂಬಿಸಿವೆ. ಸಿಲಿಂಡರ್ ಕೊರತೆಯ ಕಾರಣ ಕೆಲ ಕಾರ್ಖಾನೆಗಳು ಪಾಳಿಯನ್ನು 3ರಿಂದ 2ಕ್ಕೆ ಇಳಿಸಿವೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಿಲಿಂಡರ್‌ಗಳ ಸಮರ್ಪಕ ಪೂರೈಕೆಗೆ ಕ್ರಮ ವಹಿಸಬೇಕು.
> -ಕೆ.ಬಿ.ಲಿಂಗರಾಜು, ಅಧ್ಯಕ್ಷರು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ.

ಹೋಟೆಲ್ ಉದ್ಯಮದ ಮೇಲೆ ಯುದ್ಧದ ನೇರ ಪರಿಣಾಮ



ವಾಣಿಜ್ಯ ಸಿಲಿಂಡರ್ ಪೂರೈಕೆ ಸ್ಥಗಿತ; ಇನ್ನೆರಡು ದಿನಗಳಲ್ಲಿ ಹೋಟೆಲ್ ಉದ್ಯಮ ಬಂದ್ ಸಾಧ್ಯತೆ

ಮೈಸೂರು, ಮಾ.11(ಎಂಟಿವೈ, ಎಂಕೆ)– ಇರಾನ್ ಮೇಲಿನ ಅಮೇರಿಕಾ ಮತ್ತು ಇಸ್ರೇಲ್ ಯುದ್ಧದ ಪರಿಣಾಮ ಮೈಸೂರಲ್ಲಿ ವಾಣಿಜ್ಯ ಸಿಲಿಂಡರ್ ಸರಬರಾಜು ಸಂಪೂರ್ಣ ಸ್ಥಗಿತಗೊಂಡಿದ್ದು ಇನ್ನೆರಡು ದಿನದಲ್ಲಿ ಹೋಟೆಲ್ ವ್ಯಾಪಾರ– ವಹಿವಾಟು ಬಂದ್ ಆಗುವ ಅನಿವಾರ್ಯತೆ ಎದುರಾಗಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ 1500ಕ್ಕೂ ಹೆಚ್ಚು ಹೋಟೆಲ್‌ಗಳಿದ್ದು, ಇವುಗಳಲ್ಲಿ ಪ್ರತಿದಿನ 4500 ವಾಣಿಜ್ಯ ಸಿಲಿಂಡರ್ ಬಳಸಲಾಗುತ್ತಿದೆ. ಹೋಟೆಲ್‌ಗಳ ಬೇಡಿಕೆಗೆ ಅನುಗುಣವಾಗಿ 3 ಅನಿಲ ಸರಬರಾಜು ಕಂಪನಿಗಳು ವಾಣಿಜ್ಯ ಸಿಲಿಂಡರ್ ಪೂರೈಸುತ್ತಾ ಬಂದಿವೆ. ಆದರೆ, ಇರಾನ್ ಮೇಲೆ ಅಮೇರಿಕಾ ಮತ್ತು ಇಸ್ರೇಲ್ ಯುದ್ಧದ ಹಿನ್ನೆಲೆಯಲ್ಲಿ ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಕಳೆದ ಎರಡು ದಿನಗಳಿಂದ ಮಿತ ಸಂಖ್ಯೆಯಲ್ಲಿ ಪೂರೈಕೆಯಾಗುತ್ತಿದ್ದ ವಾಣಿಜ್ಯ ಸಿಲಿಂಡರ್, ಬುಧವಾರ ಬೆಳಗ್ಗಿನಿಂದಲೆ ಪೂರ್ಣ ಪ್ರಮಾಣದಲ್ಲಿ ಬಂದ್ ಆಗಿರುವುದರಿಂದ ಹೋಟೆಲ್ ಉದ್ಯಮಕ್ಕೆ ಭಾರಿ ಹೊಡೆತ ಬಿದ್ದಂತಾಗಿದೆ. ■6ನೇ ಪುಟಕ್ಕೆ


ಮೈಸೂರು ಹಳೇ ಡಿಸಿ ಕಚೇರಿ ಬಳಿಯ ಟೀ ವ್ಯಾಪಾರಿ ಶ್ರೀನಿವಾಸ್ ಎಲ್‌ಪಿಜಿ ಸಿಲಿಂಡರ್ ಕೊರತೆಯಿಂದ ಈಗ ತನ್ನ ವ್ಯಾಪಾರಕ್ಕೆ ಕಲ್ಲು ಬೀಳುವ ಆತಂಕದಲ್ಲಿದ್ದಾರೆ.

ವಾಣಿಜ್ಯ ಗ್ಯಾಸ್ ಸಿಲಿಂಡರ್ ಫಿಲ್ಲಿಂಗ್ ಸ್ಥಗಿತ...

> ವಾಣಿಜ್ಯ ಸಿಲಿಂಡರ್ ಪೂರೈಕೆ ಸಂಪೂರ್ಣ ಬಂದ್ ಆಗಿದೆ. ಖಾಸಗಿ ಗ್ಯಾಸ್ ಸಿಲಿಂಡರ್ 1700 ರಿಂದ 3000 ರೂ.ಗೆ ಮಾರಾಟ ಮಾಡುತ್ತಿದ್ದಾರೆ. ಕೆಲವೆಡೆ ಕೆ.ಜಿ ಗ್ಯಾಸ್‌ಗೆ 200 ರೂ.ನಂತೆ ಮಾರಾಟ ಮಾಡುತ್ತಿದ್ದು, ಎರಡ್ಮೂರು ದಿನದಲ್ಲಿ ಅದೂ ಬಂದ್ ಆಗಲಿದೆ. ಕೊರೊನಾ ಸಂದರ್ಭದಲ್ಲಿ ಉಂಟಾಗಿದ್ದ ಪರಿಸ್ಥಿತಿ ಮತ್ತೆ ಬಂದಂತಿದೆ.
> - ಸಿ.ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ.

ಆದಷ್ಟು ಬೇಗ ಸಮಸ್ಯೆ ಬಗೆಹರಿಯಲಿದ್ದು, ಆತಂಕದ ಅಗತ್ಯವಿಲ್ಲ...

> ಅಂತರರಾಷ್ಟ್ರೀಯ ಮಟ್ಟದ ಬೆಳವಣಿಗೆ ಹಾಗೂ ಯುದ್ಧದ ಪರಿಣಾಮದಿಂದಾಗಿ ಸಪ್ಲೈಯಲ್ಲಿ ಕೊರತೆಯುಂಟಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಸೂಕ್ತ ಕ್ರಮಕೈಗೊಳ್ಳುವ ನಿಟ್ಟಿನಲ್ಲಿ ಚಿಂತನೆ ನಡೆದಿದ್ದು, ರಾಜ್ಯದ ಎಲ್ಲಾ ಸಂಸದರು ಪತ್ರ ಮುಖೇನ ಮನವಿ ಮಾಡಿದ್ದೇವೆ. ಆದಷ್ಟು ಬೇಗ ಗ್ಯಾಸ್ ಸಿಲಿಂಡರ್ ಪೂರೈಕೆ ಯಥಾಸ್ಥಿತಿಗೆ ಬರುವ ಸಾಧ್ಯತೆ ಇದೆ. ಖಾಸಗಿ ಏಜೆನ್ಸಿಗಳು ಇಂತಹ ಪರಿಸ್ಥಿತಿಯಲ್ಲಿ ಬೆಲೆ ಏರಿಕೆ ಮಾಡುವುದು ಸರಿಯಲ್ಲ. ಏಕಾಏಕಿ ಎರಡು ಪಟ್ಟು ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು. ನಿರೀಕ್ಷೆ ಇಲ್ಲದೆ, ಯಾರೊಬ್ಬರ ನಿಯಂತ್ರಣದಿಂದ ಆಗಿರುವುದಲ್ಲ. ಯಾರು ಕೂಡ ಆತಂಕ ಪಡುವ ಅವಶ್ಯಕತೆ ಇಲ್ಲ. ಈಗಾಗಲೇ ಗೃಹ ಬಳಕೆಗೆ ಯಾವುದೇ ತೊಂದರೆಯಾಗಬಾರದು ಎಂದು ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಅಲ್ಲದೆ ಸದ್ಯದಲ್ಲಿಯೇ ವಾಣಿಜ್ಯ ಸಿಲಿಂಡರ್ ಪೂರೈಕೆಯ ಸಮಸ್ಯೆಯೂ ಬಗೆಹರಿಯಲಿದೆ.
> – ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ



ಆಟೋ ಗ್ಯಾಸ್ ಬರವಿಲ್ಲ; ಆದರೆ ದರ ಏರಿಕೆಯ ಬರೆ!



ಮೈಸೂರು, ಮಾ.11(ವಿವಿಹೆಚ್)– ಅಮೆರಿಕಾ–ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷದ ಬಿಸಿ ಭಾರತಕ್ಕೂ ತಟ್ಟಿದೆ. ಇರಾನ್ ಯುದ್ಧದಿಂದಾಗಿ ಜಾಗತಿಕವಾಗಿ ತೈಲ ಪೂರೈಕೆ ವ್ಯತ್ಯಯವಾಗಿದ್ದರೂ ಮೈಸೂರಲ್ಲಿ ವಾಹನಗಳಿಗೆ ಬಳಕೆಯಾಗುವ ಸಿಎನ್‌ಜಿ ಗ್ಯಾಸ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗಿಲ್ಲ.

ಗೃಹ ಬಳಕೆಯ ಪಿಎನ್‌ಜಿ ಪೈಪ್ಡ್ ಗ್ಯಾಸ್, ಕೈಗಾರಿಕೆಗಳಲ್ಲಿ ಬಳಸಲಾಗುವ ಎಲ್‌ಎನ್‌ಜಿ ಗ್ಯಾಸ್‌ಗಳ ಬಳಕೆಯ ಮೇಲೆ ಮಿತಿ ಹೇರಲಾಗಿದ್ದು, ಗೃಹಬಳಕೆಗೆ ಅಡುಗೆ ಅನಿಲ ಹಾಗೂ ವಾಹನಗಳಿಗೆ ಬಳಕೆಯಾಗುವ ಸಿಎನ್‌ಜಿ ಗ್ಯಾಸ್ ಪೂರೈಕೆಯಲ್ಲಿ ಯಾವ ನಿರ್ಬಂಧವೂ ಇಲ್ಲ.

ಮೈಸೂರಲ್ಲಿ ಹೆಚ್ಚಾಗಿ ಆಟೋಗಳು, ಕಾರುಗಳು ಹಾಗೂ ಇತರೆ ಗೂಡ್ಸ್ ಆಟೋಗಳು ಸಿಎನ್‌ಜಿ ಗ್ಯಾಸ್ ಬಳಸುತ್ತೇವೆ. ಆದರೆ ಅನಿಲ ಪೂರೈಕೆಯಲ್ಲಿ ಈವರೆಗೆ ಯಾವುದೇ ಅಡೆತಡೆಗಳು ಕಂಡುಬಂದಿಲ್ಲ.

ಮೈಸೂರಿನ ಅಗ್ನಿ ಗ್ಯಾಸ್, ಪ್ರೊಪೆಲ್ ಗ್ಯಾಸ್, ಥಿಂಕ್ ಗ್ಯಾಸ್ ಸಿಎನ್‌ಜಿ ಸ್ಟೇಷನ್, ಎಜಿ ಆಂಡ್ ಪಿ ಪ್ರಥಮ್ ಸಿಎನ್‌ಜಿ ಗ್ಯಾಸ್‌ಗಳಲ್ಲಿ ಈವರೆಗೆ ಯಾವುದೇ ಕೊರತೆ ಕಂಡುಬಂದಿಲ್ಲ. ನಿಗದಿತ ಸಮಯಕ್ಕೆ ಅನಿಲ ಪೂರೈಕೆಯಾದರೆ, ಮತ್ತೆ ಕೆಲವು ಕಡೆ ಮುಂಗಡವಾಗಿ ಬುಕಿಂಗ್ ಮಾಡಿ ಸ್ಟಾಕ್ ಇಟ್ಟುಕೊಳ್ಳಲಾಗುತ್ತಿದೆ. ■6ನೇ ಪುಟಕ್ಕೆ

ಶಾಲೆಗಳ ಬಿಸಿಯೂಟಕ್ಕೆ ಸಿಲಿಂಡರ್ ಕೊರತೆ ಆಗಬಾರದು

ಡಿಸಿ, ಸಿಇಓಗಳಿಗೆ ಶಾಲಾ ಶಿಕ್ಷಣ ಇಲಾಖೆ ಸೂಚನೆ

ಮೈಸೂರು, ಮಾ.11(ಎಸ್‌ಪಿಎನ್)– ಪಿಎಂ ಪೋಷಣ್ ಯೋಜನೆಯಡಿ ಶಾಲೆಗಳ ಬಿಸಿಯೂಟ ತಯಾರಿಕೆಗೆ ಅಗತ್ಯವಾದ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗಬಾರದು ಎಂದು ಶಾಲಾ ಶಿಕ್ಷಣ ಇಲಾಖೆ ನಿರ್ದೇಶಕ ಕಚೇರಿ, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಸಿಇಓಗಳಿಗೆ ಬುಧವಾರ ಸೂಚನೆ ನೀಡಿದೆ. ಮಧ್ಯಪ್ರಾಚ್ಯದಲ್ಲಿ ಅಮೆರಿಕಾ–ಇಸ್ರೇಲ್ ಮತ್ತು ಇರಾನ್ ಯುದ್ಧದ ಹಿನ್ನೆಲೆಯಲ್ಲಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಂಭವವಿದ್ದು, ಪಿಎಂ ಪೋಷಣ್ ಶಕ್ತಿ ನಿರ್ಮಾಣ್ (ಮಧ್ಯಾಹ್ನ ಉಪಹಾರ ಯೋಜನೆ) ಯೋಜನೆಯು ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಯಾಗಿದೆ. ■6ನೇ ಪುಟಕ್ಕೆ

ಮಹಿಳಾ ದಿನಾಚರಣೆ ವಿಶೇಷ

ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪುತ್ರಿ ಹಾಗೂ ಯುವ ಮಹಿಳಾ ಉದ್ಯಮಿ ಐಶ್ವರ್ಯ ಡಿಕೆಎಸ್ ಹೆಗ್ಡೆ ಅವರ ವಿಶೇಷ ಸಂದರ್ಶನ

ಪುಟ–5



ಮೈಸೂರು ಮಿತ್ರ ಗುರುವಾರ 12 ಮಾರ್ಚ್ 2026

ಈಶ್ವರನ್‌ರಿಂದ ಶ್ರೀಮದ್ ಭಗವದ್ಗೀತಾ ಕೋರ್ಸ್



ಮೈಸೂರು,ಮಾ.11–ಪ್ರಖ್ಯಾತ ತತ್ವಜ್ಞಾನಿ ಸ್ವಾಮಿ ಎ.ಪಾರ್ಥ ಸಾರಥಿ ಅವರ ಶಿಷ್ಯರು ಹಾಗೂ ಮನೋಚಿಕಿತ್ಸೆಯಲ್ಲಿ ಎಂಎಸ್ ಮತ್ತು ಪಿಎಚ್‌ಡಿ ಪದವಿ ಪಡೆದಿರುವ ಈಶ್ವರನ್ ಅವರು 12 ವಾರಗಳ ಭಗವದ್ಗೀತಾ ಕೋರ್ಸ್ ಅನ್ನು ವಿ.ವಿ.ಮೊಹಲ್ಲಾ, ಟೆಂಪಲ್ ರಸ್ತೆಯಲ್ಲಿರುವ ಅಂಡಾಳ್ ಮಂದಿರದಲ್ಲಿ ಪ್ರತಿ ಬುಧವಾರ ಸಂಜೆ 6ರಿಂದ 7ರವರೆಗೆ ಹಮ್ಮಿಕೊಂಡಿದ್ದಾರೆ. ವೇದಾಂತದ ಅಧ್ಯಯನ, ಸಂಶೋಧನೆ ಮತ್ತು ಬೋಧನೆಗೆ 3 ದಶಕಗಳಿಗೂ ಹೆಚ್ಚು ಕಾಲ ತೊಡಗಿಸಿಕೊಂಡಿರುವ ಇವರು ವೇದಾಂತ ಸಂಸ್ಥೆಯ ಬೆಂಗಳೂರಿನ ಸ್ಥಾಪಕರಾಗಿದ್ದಾರೆ. ಇದು ವೇದಾಂತ ಜ್ಞಾನದ ವ್ಯವಸ್ಥಿತ ಪ್ರಚಾರಕ್ಕೆ ಬದ್ಧವಾಗಿರುವ ನೋಂದಾಯಿತ ಸಾರ್ವಜನಿಕ ದತ್ತಿ ಟ್ರಸ್ಟ್ ಆಗಿದೆ. ಮಾಹಿತಿಗೆ ಮೊ.90358 96665 ಸಂಪರ್ಕಿಸಿ.

ಮೇ 1ರಿಂದ ಮೈಸೂರಲ್ಲಿ 'ವಿಪ್ರ ಮಹಿಳಾ ಉದ್ಯಮಿಗಳ ಬೃಹತ್ ವ್ಯಾಪಾರ ಮೇಳ'

ಪೋಸ್ಟರ್ ಬಿಡುಗಡೆ ಮಾಡಿದ ಹೆಚ್.ವಿ.ರಾಜೀವ್



ವ್ಯಾಪಾರ ಮೇಳದ ಸೌರಭವನ್ನು ಸಾರುವ ಪೋಸ್ಟರ್ ಅನ್ನು ಮುಡಾ ಮಾಜಿ ಅಧ್ಯಕ್ಷ, ವಿಪ್ರ ಮುಖಂಡ ಹೆಚ್.ವಿ.ರಾಜೀವ್ ಬಿಡುಗಡೆ ಮಾಡಿದರು.

ಮೈಸೂರು,ಮಾ.11–ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ, ಎಚ್.ವಿ. ರಾಜೀವ್ ಸ್ನೇಹ ಬಳಗ ಹಾಗೂ ವಿಪ್ರ ಮಹಿಳಾ ಸಂಗಮದ ಸಂಯುಕ್ತಾಶ್ರಯದಲ್ಲಿ ಮೇ 1, 2 ಮತ್ತು 3ರಂದು 'ವಿಪ್ರ ಮಹಿಳಾ ಉದ್ಯಮಿಗಳ ಬೃಹತ್ ವ್ಯಾಪಾರ ಮೇಳ' ಮೈಸೂರಿನ ಹಾರ್ಡ್ವಿಕ್ ಹೈಸ್ಕೂಲ್ ಮೈದಾನದಲ್ಲಿ(ಸ್ಮಾರ್ಟ್ ಬಜಾರ್ ಎದುರು) ನಡೆಯಲಿದೆ.

ವ್ಯಾಪಾರ ಮೇಳದ ಸೌರಭವನ್ನು ಸಾರುವ ಪೋಸ್ಟರ್ ಅನ್ನು ಮುಡಾ ಮಾಜಿ ಅಧ್ಯಕ್ಷ, ವಿಪ್ರ ಮುಖಂಡರಾದ ಹೆಚ್.ವಿ. ರಾಜೀವ್ ಬಿಡುಗಡೆ ಮಾಡಿದರು.

ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಇಂತಹ ಮೇಳಗಳು ಸಮಾಜದ ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿವೆ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಜೆ.ಎಚ್.ಅನಿಲ್‌ಕುಮಾರ್, ವಿಪ್ರ ಮಹಿಳಾ ಸಂಗಮ ಅಧ್ಯಕ್ಷೆ ಡಾ. ಲಕ್ಷ್ಮೀದೇವಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಜಂಟಿ ಕಾರ್ಯದರ್ಶಿ, ಎಸ್.ರಂಗನಾಥ್, ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಮಾಜಿ ಮಹಾನಗರ ಪಾಲಿಕೆ ಸದಸ್ಯರು, ಸೌಭಾಗ್ಯ ಮೂರ್ತಿ, ರಾಜ್ಯ ಕಾರ್ಯಕಾರಿಣಿ ಸದಸ್ಯರು, ಎಕೆಬಿಎಂಎಸ್ ಎನ್.ವಿಶ್ವನಾಥ್ ಹಾಗೂ ಎಂ.ಎಸ್.ಪ್ರಶಾಂತ್, ವಿಪ್ರ ಮುಖಂಡರಾದ ಮುಳ್ಳೂರು ಗುರುಪ್ರಸಾದ್, ಶೇಷಪ್ರಸಾದ್, ನಾಗಭೂಷಣ್, ರಘು ಭಾರ್ಗವ, ಅಶ್ವಿನ್ ಕೌಂಡಿನ್ಯ, ಶಾಂತಕ್ಕ ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದರು.

ಬ್ಯೂಟಿಷಿಯನ್ನರ 'ಡಿವಾಸ್ ಫಾರೆವರ್ ಟೀಂ'ನಿಂದ ವಿಶ್ವ ಮಹಿಳಾ ದಿನಾಚರಣೆ



ಮಹಿಳಾ ದಿನಾಚರಣೆ ಅಂಗವಾಗಿ ಹಿರಿಯ ಅಥ್ಲೀಟ್ ಹಾಗೂ ಚೆಸ್ಕಾಂನ ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ ಸುಜಾತ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಮಾ.11(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಕೊಂಕಣಿ ಸಮುದಾಯ ಭವನದಲ್ಲಿ ಬ್ಯೂಟಿಷಿಯನ್ನರ 'ಡಿವಾಸ್ ಫಾರೆವರ್ ಟೀಂ' ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ಹಿರಿಯ ಅಂತರರಾಷ್ಟ್ರೀಯ ಅಥ್ಲೀಟ್ ಹಾಗೂ ಚೆಸ್ಕಾಂನ ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ ಹೆಚ್.ಎಂ.ಸುಜಾತ ಅವರನ್ನು ಗೌರವಿಸಲಾಯಿತು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಹೆಣ್ಣು ಮಕ್ಕಳಲ್ಲಿ ಧೈರ್ಯ ಬಹಳ ಮುಖ್ಯ. ಧೈರ್ಯವಾಗಿರಬೇಕಾದರೆ ಓದಿನ ಜೊತೆಗೆ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು. ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಹದೇಶ್ ಮಾತನಾಡಿ, ಹೆಣ್ಣು ಮಕ್ಕಳು ಸ್ವಾವಲಂಬಿಗಳಾಗಿ ಬದುಕುವುದನ್ನು ಕಲಿಯಬೇಕು. ಅಂತಾರಾಷ್ಟ್ರೀಯ ಮಹಿಳಾ ದಿನ ಮಾತ್ರವೇ ಮಹಿಳೆಯರು ಖುಷಿಯಾಗಿರುವುದಲ್ಲ. ಜೀವನದ ಪ್ರತೀ ದಿನವೂ ಖುಷಿಯಾಗಿರಬೇಕು. ಈ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಾಗಬೇಕು ಎಂದರು. ಡಿವಾಸ್ ಫಾರೆವರ್ ಟೀಂನ ನೂತನ್ ನಂದ, ಶಾಲಿನಿ, ಸುಮಾ, ಚಂದನ, ಸೀಮಾ ಕಿರಣ್, ಶ್ರುತಿ, ಸ್ಮಿತಾ, ಟಿ.ಪಿ. ಪರಿಮಳ, ಶಿಲ್ಪ, ನಗ್ಮ ಮತ್ತಿತರರಿದ್ದರು.

ಗ್ರಾಮೀಣ ದೇವಾಲಯಗಳ ಅರ್ಚಕರ ತಸ್ತೀಕ್ 10 ಸಾವಿರ ರೂ.ಗೆ ಏರಿಸಬೇಕು

ಹಿಂದೂ ದೇವಾಲಯಗಳ ಒಕ್ಕೂಟದಿಂದ ಆಗ್ರಹ

ಮೈಸೂರು,ಮಾ.11(ಜಿಎ)– ಗ್ರಾಮೀಣ ಪ್ರದೇಶದ ದೇವಾಲಯಗಳ ಅರ್ಚಕರಿಗೆ ನೀಡುತ್ತಿರುವ ತಸ್ತೀಕ್ ಅನ್ನು ಸರ್ಕಾರ ಕೂಡಲೇ 10 ಸಾವಿರ ರೂ.ಗಳಿಗೆ ಏರಿಸಬೇಕೆಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಜಿಲ್ಲಾಧ್ಯಕ್ಷ ಬನ್ನೂರು ನಾಗರಾಜು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಜರಾಯಿ ವ್ಯಾಪ್ತಿಯಲ್ಲಿ ಶೇ.90ರಷ್ಟು ದೇವಸ್ಥಾನಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ಇಲ್ಲಿರುವ ಸಿ ವರ್ಗದ ದೇವಸ್ಥಾನಗಳು ಸಂಪೂರ್ಣ ಕಡೆಗಣಿಸಲ್ಪಟ್ಟಿವೆ. ಇವುಗಳ ಅರ್ಚಕರಿಗೆ ಸದ್ಯಕ್ಕೆ ನೀಡು ತ್ತಿರುವ ಮಾಸಿಕ 6 ಸಾವಿರ ರೂ., ಜೀವನ ನಡೆಸಲು ಸಾಲದ ಕಾರಣ ಸರ್ಕಾರ ಕೂಡಲೇ ಅದನ್ನು 10 ಸಾವಿರ ರೂ. ಗಳಿಗೆ ಏರಿಸಬೇಕೆಂದು ಆಗ್ರಹಿಸಿದರು.

ಈಗ ನೀಡುತ್ತಿರುವ ಹಣದಲ್ಲಿಯೇ ತಮ್ಮ ಕುಟುಂಬ ನಿರ್ವಹಣೆ ಮಾಡುವುದು ಕಷ್ಟಕರವಾಗಿರುವಾಗ ದೇವಸ್ಥಾನದ ಪೂಜಾ ಸಾಮಗ್ರಿಗಳನ್ನು ಸಹ ಖರೀದಿಸಬೇಕು. ಇದು ಸಾಧ್ಯವೇ ಎಂದು ಪ್ರಶ್ನಿಸಿದ ಅವರು, ಈ ದೇವಾಲಯಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಬೇಕು, ಶೌಚಾಲಯ ಸೂಕ್ತ ಸ್ಥಳದಲ್ಲಿ ನಿರ್ಮಿಸಬೇಕು, ಸಿ ವರ್ಗದ ದೇವಸ್ಥಾನಗಳ ಎಲ್ಲಾ ಅರ್ಚಕರು, ಪರಿಚಾರಕರಿಗೆ ವಿಮೆ, ಸೇವಾ ಭದ್ರತೆ ಒದಗಿಸಬೇಕು, ಬಿ ಮತ್ತು ಸಿ ವರ್ಗದ ಮುಜರಾಯಿ ದೇವಸ್ಥಾನಗಳಿಗೆ ಉಚಿತ ವಿದ್ಯುತ್ ನೀಡಬೇಕು, ನಿವೃತ್ತಿ ಆದೇಶ ರದ್ದುಗೊಳಿಸಬೇಕು, ಈ ದೇವಾಲಯಗಳು ಶಿಥಿಲವಾಗಿರುವುದರಿಂದ ಜೀರ್ಣೋದ್ಧಾರ ಮಾಡಿಸಬೇಕು. ಇವುಗಳಿಗೆ ಸೇರಿದ ಅಂಗಡಿ ಮಳಿಗೆಗಳ ಬಾಡಿಗೆ ಪರಿಷ್ಕರಿಸಬೇಕು, ಅನಿವಾರ್ಯ ಸಂದರ್ಭ ಎದುರಾದಾಗ ಪೊಲೀಸ್ ರಕ್ಷಣೆ ನೀಡಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗೋವಿಂದರಾಜ್, ಬಸವರಾಜ್, ಕೆ.ಎಸ್.ಎ.ದೀಕ್ಷಿತ್, ಟಿ.ಕೆ.ಶ್ಯಾಮಸುಂದರ್ ದೀಕ್ಷಿತ್, ಕೆ.ಮಂಜುನಾಥ್ ಉಪಸ್ಥಿತರಿದ್ದರು.

ಉತ್ತಮ ಸರ್ಕಾರಿ ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ

ಸರ್ಕಾರಿ ನೌಕರರು ಸವಾಲು ಎದುರಿಸುವ ಕೌಶಲಗಳನ್ನು ರೂಢಿಸಿಕೊಳ್ಳಬೇಕು: ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಸಲಹೆ



ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಸರ್ಕಾರಿ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಸರ್ಕಾರಿ ಅಧಿಕಾರಿಗಳ 2023ನೇ ಸಾಲಿನ 'ಸರ್ವೋತ್ತಮ ಸೇವಾ' ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು,ಮಾ.11(ಜಿಎ)–ಕಾಲಮಾನ ಬದಲಾವಣೆಯಾದಂತೆ ಸರ್ಕಾರಿ ಕೆಲಸದಲ್ಲಿ ಸವಾಲುಗಳು ಹೆಚ್ಚಾಗುತ್ತಿದೆ. ಕೆಲಸದಲ್ಲಿ ನಿಖರತೆಗಾಗಿ ಕೌಶಲಗಳನ್ನು ರೂಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅಧಿಕಾರಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ, ಸರ್ಕಾರಿ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸರ್ಕಾರಿ ಅಧಿಕಾರಿಗಳ 2023ನೇ ಸಾಲಿನ 'ಸರ್ವೋತ್ತಮ ಸೇವಾ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಖಾಸಗಿ ಸಂಸ್ಥೆಗಳಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸುವವರಿಗೆ ಬೋನಸ್ ಸೇರಿದಂತೆ ವಿವಿಧ ಸೌಲಭ್ಯ ನೀಡಲಾಗುತ್ತದೆ. ಸರ್ಕಾರಿ ಕೆಲಸದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವವರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಜಿಪಂ ಸಿಇಓ ಯುಕೇಶ್‌ಕುಮಾರ್ ಮಾತನಾಡಿ, ರಾಜ್ಯ ಮತ್ತು ರಾಷ್ಟ್ರದ ಅಭಿವೃದ್ಧಿ ಸಾಧಿಸಲು ಎಲ್ಲಾ ಇಲಾಖೆ ನೌಕರರ ವರ್ಗದ ಪಾತ್ರ ಪ್ರಮುಖವಾಗಿರುತ್ತದೆ. ಅಂತಹ ನೌಕರರನ್ನು ಗುರುತಿಸಿ ಅವರ ಕಠಿಣ ಪರಿಶ್ರಮ, ದಕ್ಷತೆ, ಪ್ರಾಮಾಣಿಕತೆ, ಕ್ರಿಯಾ ಶೀಲತೆಯನೆಲ್ಲ ಪರಿಗಣಿಸಿ ಅದನ್ನು ನಾವು ಗೌರವಿಸಬೇಕು ಎಂದರು.

ಮೈಸೂರು ಜಿಲ್ಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗಣ್ಯರು ಭೇಟಿ ನೀಡುವುದು ಸಾಮಾನ್ಯ. ಜಿಲ್ಲೆಯಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಸದಾ ಎಚ್ಚರಿಕೆಯಿಂದ ಯಾವುದೇ ಲೋಪವಾಗದಂತೆ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ. ಪ್ರಶಸ್ತಿ ಪಡೆದವರು ಇತರೆ ಅಧಿಕಾರಿಗಳು, ಸಿಬ್ಬಂದಿಗೆ ಮಾದರಿಯಾಗಿ ಅವರನ್ನು ಸಹ ಪ್ರಶಸ್ತಿ ಪಡೆಯುವಂತೆ ರೂಪಿಸಬೇಕು ಎಂದು ಹೇಳಿದರು.

> ಸರ್ಕಾರಿ ಕೆಲಸದಲ್ಲಿ ಪ್ರಶಸ್ತಿ ನೀಡುವುದರಿಂದ ನೌಕರರಲ್ಲಿ ಕೆಲಸ ನಿರ್ವಹಣೆಗೆ ಇನ್ನೂ ಹೆಚ್ಚಿನ ಹುರುಪು ತುಂಬಿದಂತಾಗುತ್ತದೆ. ಪ್ರಶಸ್ತಿ ಪಡೆದ ನೌಕರರು ತಮ್ಮ ಸಹೋದ್ಯೋಗಿಗಳಿಗೆ ಮಾದರಿಯಾಗಿ ಅವರಿಗೂ ಪ್ರಶಸ್ತಿ ಪಡೆಯುವಂತೆ ಪ್ರೇರಣೆ ನೀಡಬೇಕು.
> –ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಸಿ.ಪಿ.ಅರುಣ್‌ಕುಮಾರ್ ಮಾತನಾಡಿ, ಕೆಲಸ ಕಾರ್ಯಗಳನ್ನು ಪ್ರೋತ್ಸಾಹಿಸುವ ಪದ್ಧತಿ ಇರಬೇಕು. ಆಗ ಮಾತ್ರ ಇನ್ನೂ ಉತ್ತಮವಾಗಿ ಕೆಲಸ ನಿರ್ವಹಿಸಬಹುದು. ಸರ್ಕಾರಿ ನೌಕರರಿಗೆ 2006ರಿಂದ ನಾಗರಿಕರ ಸೇವಾ ಪ್ರಶಸ್ತಿ ನೀಡುವ ಪದ್ಧತಿ ಪ್ರಾರಂಭವಾಯಿತು. 2006ರಲ್ಲಿ ಪ್ರಶಸ್ತಿ ಮಾತ್ರ ನೀಡಲಾಗುತ್ತಿತ್ತು. 2021ರಿಂದ ನಗದು, ಪ್ರಶಸ್ತಿ ಸಹ ನೀಡಿ ಗೌರವಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬಿ.ಜೆ.ಗುರುರಾಜ್, ನಾಜಿಯಾ ಸುಲ್ತಾನ, ಎನ್.ಯಶೋದ, ಆರೋಗ್ಯ, ಎಂ.ಎಂ.ರತಿ, ಡಾ.ಎಸ್. ಚಿದಂಬರ, ಎಸ್.ಎಂ.ಮಧುಸೂದನ್, ಕುಮುದಾ ಶರತ್, ಚಂದ್ರಶೇಖರ್, ರೂಪ, ರುದ್ರೇಶ್ ಅವರಿಗೆ 'ಸರ್ವೋತ್ತಮ ಸೇವಾ' ಪ್ರಶಸ್ತಿ ಹಾಗೂ 25000 ರೂ. ನಗದು ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ, ರಾಜ್ಯ ಸರ್ಕಾರಿ ನೌಕರರ ಸಂಘದ ವಿಭಾಗೀಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಮೈಸೂರು ಜಿಲ್ಲಾ ಶಾಖೆಯ ಕಾರ್ಯಧ್ಯಕ್ಷ ರಾಘವೇಂದ್ರ, ರಾಜ್ಯ ಕಾರ್ಯದರ್ಶಿ ಗಣೇಶ್, ಉಪಾಧ್ಯಕ್ಷರಾದ ವಿಶ್ವನಾಥ್, ಪುಷ್ಪವತಿ ಉಪಸ್ಥಿತರಿದ್ದರು.

ಮಾಜಿ ಶಾಸಕರಾದ ವಾಸು ಅವರ 2ನೇ ವರ್ಷದ ಪುಣ್ಯಸ್ಮರಣೆ...



ಮಾಜಿ ಶಾಸಕರಾದ ವಾಸು ಅವರ 2ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದೇವರಾಜ ಅರಸು ರಸ್ತೆಯಲ್ಲಿ ಅವರ ಅಭಿಮಾನಿಗಳು ಆಚರಿಸಿದರು. ಈ ವೇಳೆ ಮಾಜಿ ಮೇಯರ್, ರವಿಕುಮಾರ್, ರಾಜ್ಯ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಸುಬ್ರಹ್ಮಣ್ಯ, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಕೊಪ್ಪಲು ಶ್ರೀನಿವಾಸ, ರಾಂಪ್ರಸಾದ್, ಮಹಾದೇವ, ಗುರುರಾಜ್ ಶೆಟ್ಟಿ, ಪ್ರವೀಣ್ ಜೈನ್, ವಕ್ತ ರಾಮ್, ವೇದರಾಜ, ಚೇತನ್, ಶೇಖರ್, ಸುಂದರ್‌ಕುಮಾರ್, ಗುರುಪ್ರಸಾದ್, ನಂದಕುಮಾರ್, ಗೋಪಿನಾಥ್, ಶಾಂತ, ಮಂಗಳ, ಮಂಜು, ಹನೋಜ್ ಸರಸ್ವತ, ರಾಕೇಶ್‌ಭಟ್, ಮಂಜುನಾಥ್‌ಗೌಡ ಇನ್ನಿತರರಿದ್ದರು.

ಮಾ.14ರಿಂದ ರಾಷ್ಟ್ರೀಯ ಸಮ್ಮೇಳನ

ಮೈಸೂರು, ಮಾ.11(ಜಿಎ)–ಮೈಸೂರಿನ ಡಿ ಪೌಲ್ ಕಾಲೇಜಿನಲ್ಲಿ ಮಂಡ್ಯ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಸಹಯೋಗದಲ್ಲಿ ಮಾ.14 ಮತ್ತು 15ರಂದು ಮಹಿಳಾ ನೇತೃತ್ವದಲ್ಲಿ ಅಭಿವೃದ್ಧಿ ವಿಷಯ ಕುರಿತು 2 ದಿನಗಳ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಬೈಜು ಆಂಥೋನಿ ಸಿ.ಎಂ. ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.14ರಂದು ಬೆಳಿಗ್ಗೆ 10.30ಕ್ಕೆ ಶಾಸಕ, ಸೆಸ್ಕ್ ಅಧ್ಯಕ್ಷ ಎ.ಬಿ.ರಮೇಶ ಬಂಡಿಸಿದ್ದೇಗೌಡ ಸಮ್ಮೇಳನ ಉದ್ಘಾಟಿಸುವರು. ಮಂಡ್ಯ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಕೆ.ಶಿವಚಿತ್ತಪ್ಪ ಪಾಲ್ಗೊಳ್ಳುವರು. ದೇಶದ ವಿವಿಧ ಭಾಗಗಳ 25 ಸಾಧಕ ಮಹಿಳೆಯರನ್ನು ಸನ್ಮಾನಿಸಲಾಗುವುದು. ಸಂಶೋಧನಾ ಪ್ರಬಂಧಗಳ ಮಂಡನೆಯೂ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಲೇಜು ಹೆಚ್.ಆರ್.ವಿಭಾಗದ ಸಚೀಂದ್ರನ್, ಕನ್ನಡ ಉಪನ್ಯಾಸಕ ಲೋಕೇಶ್ ದೇವನ್ ಉಪಸ್ಥಿತರಿದ್ದರು.

ಪಿಎಚ್.ಡಿ ಪದವಿ



ಮೈಸೂರು,ಮಾ.11–ಪ್ರೊ.ಸಿ.ಮಹದೇವಸ್ವಾಮಿ ಅವರ ಮಾರ್ಗದರ್ಶನದಲ್ಲಿ ಚಕ್ರಪಾಣಿ.ಟಿ.ವಿ ಅವರು ನಿರ್ವಹಣಾ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಆರ್ಥಿಕವಾಗಿ ಸಬಲರಾದರೆ ಮಾತ್ರ ಮಹಿಳೆಯರು ಸ್ವಾವಲಂಬಿಯಾಗಲು ಸಾಧ್ಯ

ಪರ್ವತಾರೋಹಿ ಡಾ.ಉಷಾ ಹೆಗ್ಡೆ ಅಭಿಮತ



ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್‌ನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಮೈಸೂರು, ಮಾ.11(ಎಂಕೆ)– ಮಹಿಳೆಯರು ಆರ್ಥಿಕವಾಗಿ ಸಬಲರಾದರೆ ಮಾತ್ರವೇ ಸ್ವಾವಲಂಬಿಗಳಾಗಿ ಬದುಕಲು ಸಾಧ್ಯ ಎಂದು ವೈದ್ಯೆ ಹಾಗೂ ಪರ್ವತಾರೋಹಿ ಡಾ.ಉಷಾ ಹೆಗ್ಡೆ ತಿಳಿಸಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್‌ನಲ್ಲಿ ಬುಧವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಪುರುಷರ ಅವಲಂಬನೆಯಲ್ಲೇ ಬದುಕುತ್ತಿದ್ದ ಮಹಿಳೆಯರು ಇತ್ತೀಚಿನ ವರ್ಷಗಳಲ್ಲಿ ಸ್ವಾವಲಂಬಿಗಳಾಗಿ ಜೀವನ ನಡೆಸುತ್ತಿದ್ದಾರೆ. ಮುಖ್ಯವಾಗಿ ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕು ಎಂದು ಹೇಳಿದರು.

ಆರ್ಥಿಕವಾಗಿ ಸ್ವಾವಲಂಬಿಗಳಾದರೆ ಮಾತ್ರವೇ ಅಂದುಕೊಂಡಿರುವ ಕೆಲಸ ಅಥವಾ ಸಾಧನೆಯ ಕಾರ್ಯವನ್ನು ಪೂರ್ಣಗೊಳಿಸಲು ಸಾಧ್ಯ. ಉತ್ತಮ ವಿದ್ಯಾಭ್ಯಾಸ ಪಡೆಯಬೇಕಾದರೆ ಆರ್ಥಿಕವಾಗಿ ಸದೃಢರಾಗಿರಬೇಕು ಎಂದರು.

ಸಾಧನೆಗಾಗಿ ಅವಕಾಶಗಳು ದೊರೆತಾಗ ಸದ್ಬಳಕೆ ಮಾಡಿಕೊಳ್ಳಬೇಕು. ಮುಖ್ಯವಾಗಿ ಮೈಂಡ್‌ಸೆಟ್ ನಿಖರವಾಗಿರಬೇಕು. ಭಾವನಾತ್ಮಕವಾಗಿ ಗಟ್ಟಿಯಾಗಿದ್ದರೆ ಸಾಧನೆ ಮಾಡಬಹುದು. ಜೊತೆಗೆ ಆಧ್ಯಾತ್ಮಿಕ ಅರಿವು ಅಗತ್ಯವಿದ್ದು, ಒತ್ತಡಗಳ ನಡುವೆಯೂ ಸಮಯ ಪಾಲನೆಯೊಂದಿಗೆ ಸಂತೋಷದಾಯಕ ಜೀವನ ಮಾಡುವುದು ಮುಖ್ಯವಾಗಿದೆ. ಮಹಿಳಾ ದಿನದ ಸಂಭ್ರಮ ಒಂದು ದಿನಕ್ಕೆ ಸೀಮಿತವಲ್ಲ. ನಿತ್ಯವೂ ನಡೆಯಬೇಕು ಎಂದರು. ಸುಯೋಗ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್ ಟ್ರಸ್ಟಿ ಸುಧಾ ಯೋಗಣ್ಣ, ಉಪಾಧ್ಯಕ್ಷೆ ಸೀಮಾ ಯೋಗಣ್ಣ, ಸಿಇಓ ರಾಜೇಂದ್ರ ಪ್ರಸಾದ್, ಪ್ರಾಂಶುಪಾಲರಾದ ನಾಗಮಣಿ ಮತ್ತಿತರರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಮಾ.11–ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026–27ನೇ ಶೈಕ್ಷಣಿಕ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜಾತಿಯ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ, ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ಗಂಡು ಮಕ್ಕಳಿಗೆ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ 8ನೇ ತರಗತಿಗೆ ಪ್ರವೇಶ ಪರೀಕ್ಷೆ ಮುಖಾಂತರ ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಕಚೇರಿಗೆ ಅಥವಾ ಆಯಾ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿಗಳಿಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.3.2026 ಗುರುವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಸೈಂಟಿಫಿಕ್ ಪ್ರಾಣಾಯಾಮ ಫೌಂಡೇಷನ್ ಟ್ರಸ್ಟ್, ಎಟಿಎಂಇ ಇಂಜಿನಿಯರಿಂಗ್ ಕಾಲೇಜು, ಆರ್‌ವಿ ಇಂಜಿನಿಯರಿಂಗ್ ಕಾಲೇಜು, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಇಂಡಿಯನ್ ಯೋಗ ಅಸೋಸಿಯೇಷನ್, ಆಯುಷ್ :** ರಾಷ್ಟ್ರೀಯ ಪ್ರಾಣಾಯಾಮ ಸಮ್ಮೇಳನ, ಸಾನ್ನಿಧ್ಯ : ಅಧೋಕ್ಷಜ ಶ್ರೀ ಪೇಜಾವರ ಮಠ, ಉಡುಪಿ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಪದ್ಮಶ್ರೀ ಪುರಸ್ಕೃತರಾದ ಡಾ. ಹೆಚ್.ಆರ್. ನಾಗೇಂದ್ರ, ಪ್ರಿನ್ಸಿಪಾಲ್ ಡಾ. ಸದಾಶಿವಗೌಡ, ಜಿಲ್ಲಾ ಆಯುಷ್ ಅಧಿಕಾರಿ ಡಾ. ರೇಣುಕಾದೇವಿ, ಡಾ. ಈಶ್ವರ್ ವಿ. ಬಸವರೆಡ್ಡಿ, ಡಾ. ವಿನೋದ್ ಕುಮಾರ್ ಕಟಿಯಾರ್, ಅಧ್ಯಕ್ಷತೆ : ಎಟಿಎಂಇ ಇಂಜಿನಿಯರಿಂಗ್ ಕಾಲೇಜು ಅಧ್ಯಕ್ಷ ಎಲ್. ಅರುಣ್‌ಕುಮಾರ್, ಸ್ಥಳ: ಎಟಿಎಂಇ ಇಂಜಿನಿಯರಿಂಗ್ ಕಾಲೇಜು ಆವರಣ, ಬನ್ನೂರು ರಸ್ತೆ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹಶುದ್ಧಿ ಚಿಕಿತ್ಸಾ ಶಿಬಿರ, ಪಿಸಿಒಡಿ ತೊಂದರೆಗೆ ಚಿಕಿತ್ಸಾ ಶಿಬಿರ, ಪೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ಕಾಯಿಲೆಗಳಿಗೆ ಉಚಿತ ತಪಾಸಣೆ, ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಕುತ್ತಿಗೆ ನೋವು ಬಗ್ಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಅಮೃತಾ ವಿಶ್ವ ವಿದ್ಯಾಪೀಠಂ :** ಸದ್ಗಮಯ, ಅಂತರ ಕಾಲೇಜು ಉತ್ಸವ, ಉದ್ಘಾಟನೆ : ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಅತಿಥಿಗಳು : ಶಾಸಕ ಜಿ.ಡಿ. ಹರೀಶ್‌ಗೌಡ, ಸ್ಥಳ: ಅಮೃತ ವಿಶ್ವವಿದ್ಯಾಪೀಠಂ ಆವರಣ, ಬೋಗಾದಿ 2ನೇ ಹಂತ, ಬೆಳಗ್ಗೆ 10ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಮಹಿಳಾ ಅಧ್ಯಯನ ಕೇಂದ್ರ :** 115ನೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ : ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್, ಉಪಸ್ಥಿತರು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಪ್ರೊ. ಎನ್. ನಾಗರಾಜು, ಹಣಕಾಸು ಅಧಿಕಾರಿ ಪ್ರೊ.ಎಸ್.ಜೆ. ಮಂಜುನಾಥ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ :** ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಅಂಕೇಗೌಡ, ಅಧ್ಯಕ್ಷತೆ : ಜೆಎಸ್‌ಎಸ್ ಎಹೆಚ್‌ಇಆರ್ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಗೌರವ ಅತಿಥಿಗಳು : ಕುಲಸಚಿವ ಡಾ. ಬಿ. ಮಂಜುನಾಥ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಮತ್ತು ಡೀನ್ ಡಾ. ಟಿ.ಎಂ. ಪ್ರಮೋದ್‌ಕುಮಾರ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ ವೈ ಪುಟ್ಟಿ, ಕೆ.ಪಿ.ರೇವತಿ ಹಾಗೂ ಎ.ಎನ್. ಶೀಲಾ, ವ್ಯಾಖ್ಯಾನ–ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ ಮತ್ತು ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು – ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಭಾಗವಹಿಸುತ್ತಾರೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಶರಣಪ್ಪ ವಿ.ಹಲಸೆ, ಪ್ರಸ್ತುತಿ –ಎನ್. ಕೇಶವಮೂರ್ತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎ.ಎನ್. ಕಿಶನ್– ವೀಣಾವಾದನ, 11.00, ಸುತ್ತ ಮುತ್ತ– ಪ್ರಸ್ತುತಿ–ಚಂದನಾ .ಸಿ, ನಿತಿನ್ ರಾಜಾರಾಂ ಶಾಸ್ತ್ರೀ, ಅರ್ಚನಾ

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಹಣ್ಣು ಹೊನ್ನು–ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ ಮೈಸೂರಿನ ಭೌಗೋಳಿಕ ಸೂಚಿತ ಸಾಂಪ್ರದಾಯಿಕ ಬೆಳೆಗಳ ವಿಸ್ತರಣೆ ಮತ್ತು ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ– ಮೈಸೂರು ಜಿಲ್ಲಾ ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ್ ಅಂಗಡಿ ಮತ್ತು ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ. ಜಿ. ಮಂಜುನಾಥ್. ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಯುವವಾಣಿ– ಹಲೋ ಯುವವಾಣಿ ನೇರ ಫೋನ್–ಇನ್ ಕಾರ್ಯಕ್ರಮ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತು ಸಾಮಾನ್ಯಜ್ಞಾನ ರಸಪ್ರಶ್ನೆ, ಕಾರ್ಯಕ್ರಮ, ನಡೆಸಿಕೊಡುತ್ತಾರೆ–ನಿವೇದಿತಾ. ಹೆಚ್., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಳ್ಳಾರಿ ಎಂ. ರಾಘವೇಂದ್ರ–ಹಾಡುಗಾರಿಕೆ, 10.00 ನಾಟಕ– ಡೀಸೆಂಟಾಗಿ ಬಯ್ಯೋದು, 10.30 ಸವಿನೆನಪು

ರಸ್ತೆಯಲ್ಲೇ ಮಿನಿ ತ್ಯಾಜ್ಯ ವಿಲೇವಾರಿ ಘಟಕ!

ನಿವಾಸಿಗಳಿಂದ ಹೋರಾಟದ ಎಚ್ಚರಿಕೆ



ರಸ್ತೆಯಲ್ಲಿ ಕಸರಾಶಿ ಬಿದ್ದಿರುವ ದೃಶ್ಯ

ಮೈಸೂರು, ಮಾ.11(ಎಸ್‌ಪಿಎನ್)– ಮೈಸೂರಿನ ನೇತಾಜಿ ನಗರದಿಂದ ರಿಂಗ್ ರಸ್ತೆ ಸಂಪರ್ಕಿಸುವ ಮುಖ್ಯ ರಸ್ತೆಯ (ಸ್ಮಶಾನದ ಪಕ್ಕ) ಒಂದು ಕಿ.ಮೀ. ಜೋಡಿ ರಸ್ತೆ ಆಸು–ಪಾಸಿನಲ್ಲಿ ಪ್ಲಾಸ್ಟಿಕ್, ವಿಷಕಾರಿ ತ್ಯಾಜ್ಯ ಸೇರಿದಂತೆ ಕಸದ ರಾಶಿಯನ್ನು ಖಾಸಗಿ ವಾಹನಗಳಲ್ಲಿ ತಂದು ಸುರಿಯುತ್ತಿರುವುದರಿಂದ ಮಿನಿ ತ್ಯಾಜ್ಯ ಘಟಕವೇ ನಿರ್ಮಾಣವಾದ್ದಂತೆ ಭಾಸವಾಗುತ್ತಿದೆ.

ಹಾಗಾಗಿ, ಕೂಡಲೇ ಇಲ್ಲಿನ ಕಸದ ರಾಶಿ ತೆರವುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಇಲ್ಲಿನ ನಿವಾಸಿಗಳು ಮನವಿ ಮಾಡಿದ್ದು, ಈ ಕಸದ ರಾಶಿಯಲ್ಲಿ ಹಾಸಿಗೆ, ದಿಂಬು, ಹೊದಿಕೆ, ಪ್ಲಾಸ್ಟಿಕ್ ಕವರ್, ವಿಷಕಾರಿ ತ್ಯಾಜ್ಯ ಮಿಶ್ರಣವಾಗಿದೆ. ಅಕಸ್ಮಾತ್ ಈ ತ್ಯಾಜ್ಯಕ್ಕೆ ಬೇಸಿಗೆಯಲ್ಲಿ ಬೆಂಕಿ ಬಿದ್ದರೆ ನೇತಾಜಿ ನಗರ, ಪೊಲೀಸ್ ಬಡಾವಣೆ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳಿಗೆ ಹೊಗೆ ಆವರಿಸುತ್ತದೆ. ಇದರಿಂದ ಉಸಿರಾಟದ ಸಮಸ್ಯೆ ಸೇರಿದಂತೆ ಇನ್ನಿತರೆ ರೋಗಗಳಿಗೆ ಆಹ್ವಾನ ನೀಡಿದಂತಾಗಿದೆ.

ಕಸದ ರಾಶಿಗೆ ಬೆಂಕಿಬಿದ್ದಾಗ ತಾಸುಗಟ್ಟಲೆ ಬೆಂಕಿ ಕೆನ್ನಾಲಿಗೆ ಜೊತೆಗೆ ಹೊಗೆ ಸುತ್ತಮುತ್ತಲು ಮನೆಗಳಿಗೆ ಆವರಿಸುತ್ತಿದೆ ಸಮೀಪವೇ ಇರುವ ಚಾಮುಂಡಿಬೆಟ್ಟದ ಗಿಡಮರಗಳಿಗೆ ಬೆಂಕಿ ಕೆನ್ನಾಲಿಗೆ ಚಾಚಿದರೆ, ಬೆಟ್ಟದ ಆಸುಪಾಸಿನ ಅಮೂಲ್ಯ ಅರಣ್ಯ ಸಂಪತ್ತು ನಾಶವಾಗುವ ಅಪಾಯವಿದೆ.

ಅಂತೆಯೇ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ, ನಿರ್ಮಲ ಆಸ್ಪತ್ರೆಗೆ ಬರುವ ರೋಗಿಗಳಿಗೂ ಇದರಿಂದ ಸಮಸ್ಯೆ ಆಗುತ್ತಿದೆ. ಅಲ್ಲದೆ, ಪೊಲೀಸ್ ಬಡಾವಣೆಯಲ್ಲಿ ನಿವೃತ್ತ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳು ಹಾಗೂ ನಿವೃತ್ತ ಶಿಕ್ಷಕರೇ ಹೆಚ್ಚಾಗಿ ವಾಸಿಸುತ್ತಿದ್ದು, ಇಲ್ಲಿ ತ್ಯಾಜ್ಯ ವಿಲೇವಾರಿಯೇ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಅಲ್ಲದೆ, ಇಲ್ಲಿನ ತ್ಯಾಜ್ಯವನ್ನು ಸಮೀಪದ ನೇತಾಜಿ ನಗರದ ಕೆರೆ, ತಿಪ್ಪಯ್ಯನ ಕೆರೆಗೆ ಸುರಿದು ಮುಚ್ಚುವ ಕಾರ್ಯ ಸದ್ದಿಲ್ಲದೆ ನಡೆಯುತ್ತಿದೆ. ಹಾಗಾಗಿ ಇಲ್ಲಿನ ತ್ಯಾಜ್ಯ ವಿಲೇವಾರಿ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸದಿದ್ದರೆ ಸುತ್ತಮುತ್ತಲ ನಿವಾಸಿಗಳು ಒಗ್ಗೂಡಿ ಉಗ್ರಹೋರಾಟ ಹಮ್ಮಿಕೊಳ್ಳುವ ಉದ್ದೇಶವಿರುವುದಾಗಿ ಎಂದು ಸಾಮಾಜಿಕ ಹೋರಾಟಗಾರ ಲೋಹಿತ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಹಿರಿಯ ಕ್ರೀಡಾಪಟುಗಳಿಗೆ ಸನ್ಮಾನ...



ಇತ್ತೀಚೆಗೆ ಚೆನ್ನೈನಲ್ಲಿ ನಡೆದ 45ನೇ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ ಹಿರಿಯರ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ಗೆದ್ದ ಕೆ.ಟಿ.ಬಲರಾಮೇಗೌಡ, ಬಿ.ಸಿ.ಪಾರ್ವತಿ, ಎಚ್.ಎಂ.ಭಾರತಿ, ರಘುನಂದನ್ ಅವರನ್ನು ಕರ್ನಾಟಕ ರಾಜ್ಯ ಮಾಸ್ಟರ್ ಅಥ್ಲೆಟಿಕ್ ಅಸೋಸಿಯೇಷನ್ ಜಿಲ್ಲಾ ಘಟಕದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸಂಸ್ಥೆಯ ಕಾರ್ಯದರ್ಶಿ ಬಿ ಬಸವರಾಜು, ಉಪಾಧ್ಯಕ್ಷ ಎಂ. ಯೋಗೇಂದ್ರ, ಖಜಾಂಚಿ ಕೆ.ಎನ್. ಸೋಮಶೇಖರ್,ಎಂ.ಪಿ.ಚಂದ್ರಶೇಖರ್, ಬಿ.ಕೆ.ಸೋಮಶೇಖರ್, ಎಂ.ಎಸ್. ಮಹೇಶ್ ಉಪಸ್ಥಿತರಿದ್ದರು.

ಬೆಂಗಳೂರಿನ ಚಿನ್ನಸ್ವಾಮಿಯಲ್ಲಿ ಮಾ.28ಕ್ಕೆ ಐಪಿಎಲ್–2026 ಉದ್ಘಾಟನಾ ಪಂದ್ಯ

ಆರಂಭಿಕ ಆರ್‌ಸಿಬಿ vs ಎಸ್‌ಆರ್‌ಹೆಚ್ ಸೆಣಸಾಟ



ಬೆಂಗಳೂರು, ಮಾ.11– ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಬುಧವಾರ ಇಂಡಿಯನ್ ಪ್ರೀಮಿಯರ್ ಲೀಗ್ 2026ರ 19 ಆವೃತ್ತಿಯ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಉದ್ಘಾಟನಾ ಪಂದ್ಯ ನಡೆಯಲಿದೆ.

ಬಿಸಿಸಿಐ, ಐಪಿಎಲ್‌ನ 19ನೇ ಆವೃತ್ತಿಯ ಮೊದಲ ಹಂತದ 20 ಪಂದ್ಯಗಳ ವೇಳಾಪಟ್ಟಿಯನ್ನು ಇಂದು ಬಿಡುಗಡೆ ಮಾಡಿದ್ದು, ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ಮೊದಲ ಪಂದ್ಯ ಆಡಲಿದೆ.

ಮರುದಿನ ಮುಂಬೈನಲ್ಲಿ ಮುಂಬೈ ಇಂಡಿಯನ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಮೊದಲ ಹಂತದ ಪಂದ್ಯಗಳು ಮಾರ್ಚ್ 28ರಿಂದ ಏಪ್ರಿಲ್ 12ರವರೆಗೆ ನಡೆಯಲಿವೆ.

ಕೇಂದ್ರ ಚುನಾವಣಾ ಆಯೋಗವು ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ದಿನಾಂಕವನ್ನು ಪ್ರಕಟಿಸಿದ ನಂತರ ಪೂರ್ಣ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತದೆ.

ಮುಂದಿನ ಕೆಲವು ತಿಂಗಳುಗಳಲ್ಲಿ ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ವಿಧಾನ ಸಭಾ ಚುನಾವಣೆ ನಡೆಯಲಿರುವ ಕಾರಣ, ಐಪಿಎಲ್ ಪಂದ್ಯಾವಳಿಯ ವೇಳಾಪಟ್ಟಿಯನ್ನು ಎರಡು ಹಂತಗಳಲ್ಲಿ ಪ್ರಕಟಿಸಲಾಗುವುದು ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು ಇತ್ತೀಚಿಗೆ ಮಾಹಿತಿ ನೀಡಿದ್ದರು.

ಬೆಂಗಳೂರಿನಲ್ಲಿ ಉದ್ಘಾಟನಾ ಪಂದ್ಯ: 2025 ರ ಐಪಿಎಲ್ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್ 2026 ರ ಉದ್ಘಾಟನಾ ಪಂದ್ಯ ಸೇರಿದಂತೆ ಐದು ಪಂದ್ಯಗಳನ್ನು ಬೆಂಗಳೂರಿನ ಐಕಾನಿಕ್ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದ್ದು, ಎರಡು ಪಂದ್ಯಗಳನ್ನು ರಾಯ್‌ಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆಡಲಿದೆ.

ಐಪಿಎಲ್–2026 ವೇಳಾಪಟ್ಟಿ

1.	ಮಾ.28,	ರಾಯಲ್ ಚಾಲೆಂಜರ್ಸ್ ಬೆಂಗಳೂರು VS ಸನ್ ರೈಸರ್ಸ್ ಹೈದರಾಬಾದ್ (ಸ್ಥಳ–ಬೆಂಗಳೂರು)
2.	ಮಾ.29	ಮುಂಬೈ ಇಂಡಿಯನ್ಸ್ VS ಕೋಲ್ಕತ್ತಾ ನೈಟ್ ರೈಡರ್ಸ್ (ಮುಂಬೈ)
3.	ಮಾ.30	ರಾಜಸ್ಥಾನ್ ರಾಯಲ್ಸ್ VS ಚೆನ್ನೈ ಸೂಪರ್ ಕಿಂಗ್ಸ್ (ಗುವಾಹಟಿ)
4.	ಮಾ.31	ಪಂಜಾಬ್ ಕಿಂಗ್ಸ್ VS ಗುಜರಾತ್ ಟೈಟಾನ್ಸ್ (ನವಿ ಛಂಡೀಗಢ)
5.	ಏ.1	ಲಖನೌ ಸೂಪರ್ ಜೈಂಟ್ಸ್ VS ಡೆಲ್ಲಿ ಕ್ಯಾಪಿಟಲ್ಸ್ (ಲಖನೌ)
6.	ಏ.2	ಕೋಲ್ಕತ್ತಾ ನೈಟ್ ರೈಡರ್ಸ್ VS ಸನ್ ರೈಸರ್ಸ್ ಹೈದರಾಬಾದ್ (ಕೋಲ್ಕತ್ತಾ)
7.	ಏ.3	ಚೆನ್ನೈ ಸೂಪರ್ ಕಿಂಗ್ಸ್ VS ಪಂಜಾಬ್ ಕಿಂಗ್ಸ್ (ಚೆನ್ನೈ)
8.	ಏ.4	ಡೆಲ್ಲಿ ಕ್ಯಾಪಿಟಲ್ಸ್ VS ಮುಂಬೈ ಇಂಡಿಯನ್ಸ್ (ದೆಹಲಿ)
9.	ಏ.4	ಗುಜರಾತ್ ಟೈಟಾನ್ಸ್ VS ರಾಜಸ್ಥಾನ್ ರಾಯಲ್ಸ್ (ಅಹಮದಾಬಾದ್)
10.	ಏ.5	ಸನ್ ರೈಸರ್ಸ್ ಹೈದರಾಬಾದ್ VS ಲಖನೌ ಸೂಪರ್ ಜೈಂಟ್ಸ್ (ಹೈದರಾಬಾದ್)
11.	ಏ.5	ರಾಯಲ್ ಚಾಲೆಂಜರ್ಸ್ ಬೆಂಗಳೂರು VS ಚೆನ್ನೈ ಸೂಪರ್ ಕಿಂಗ್ಸ್ (ಬೆಂಗಳೂರು)
12.	ಏ.6	ಕೋಲ್ಕತ್ತಾ ನೈಟ್ ರೈಡರ್ಸ್ VS ಪಂಜಾಬ್ ಕಿಂಗ್ಸ್ (ಕೋಲ್ಕತ್ತಾ)
13.	ಏ.7	ರಾಜಸ್ಥಾನ್ ರಾಯಲ್ಸ್ VS ಮುಂಬೈ ಇಂಡಿಯನ್ಸ್ (ಗುವಾಹಟಿ)
14.	ಏ.8	ಡೆಲ್ಲಿ ಕ್ಯಾಪಿಟಲ್ಸ್ VS ಗುಜರಾತ್ ಟೈಟಾನ್ಸ್ (ದೆಹಲಿ)
15.	ಏ.9	ಕೋಲ್ಕತ್ತಾ ನೈಟ್ ರೈಡರ್ಸ್ VS ಲಖನೌ ಸೂಪರ್ ಜೈಂಟ್ಸ್ (ಕೋಲ್ಕತ್ತಾ)
16.	ಏ.10	ರಾಜಸ್ಥಾನ್ ರಾಯಲ್ಸ್ VS ರಾಯಲ್ ಚಾಲೆಂಜರ್ಸ್ ಬೆಂಗಳೂರು (ಗುವಾಹಟಿ)
17.	ಏ.11	ಪಂಜಾಬ್ ಕಿಂಗ್ಸ್ VS ಸನ್ ರೈಸರ್ಸ್ ಹೈದರಾಬಾದ್ (ನವಿ ಛಂಡೀಗಢ)
18.	ಏ.11	ಚೆನ್ನೈ ಸೂಪರ್ ಕಿಂಗ್ಸ್ VS ಡೆಲ್ಲಿ ಕ್ಯಾಪಿಟಲ್ಸ್ (ಚೆನ್ನೈ)
19.	ಏ.12	ಲಖನೌ ಸೂಪರ್ ಜೈಂಟ್ಸ್ VS ಗುಜರಾತ್ ಟೈಟಾನ್ಸ್ (ಲಖನೌ)
20.	ಏ.12	ಮುಂಬೈ ಇಂಡಿಯನ್ಸ್ VS ರಾಯಲ್ ಚಾಲೆಂಜರ್ಸ್ ಬೆಂಗಳೂರು (ಮುಂಬೈ)

ನಾವು ಹೇಳಿದಂತೆ ಭಾರತ ಕೇಳುತ್ತದೆ: ಅಮೆರಿಕ

ವಾಷಿಂಗ್ಟನ್, ಮಾ.11– 'ಇರಾನ್ ಜೊತೆಗಿನ ಸಂಘರ್ಷದ ಕಾರಣ ಇಂಧನ ಪೂರೈಕೆಯು ಸುಗಮವಾಗಬೇಕು ಎಂಬುದು ನಮ್ಮ ಉದ್ದೇಶ. ಭಾರತವು ನಾವು ಹೇಳಿದಂತೆ ಕೇಳುವವರು. ರಷ್ಯಾದಿಂದ ತೈಲ ಖರೀದಿಸಬೇಡಿ ಎಂದು ನಾವು ಹೇಳಿದ್ದೆವು. ಅದನ್ನು ಅವರು ಪಾಲಿಸಿದ್ದರು. ಆದ್ದರಿಂದಲೇ ಅದಕ್ಕೆ ನಾವು ರಷ್ಯಾದಿಂದ ತೈಲ ಖರೀದಿಸಲು ಅನುಮತಿ ನೀಡಿದ್ದೇವೆ ಎಂದು ಶ್ವೇತಭವನ ಹೇಳಿದೆ.

ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೋಲಿನ್ ಲೀವಿಟ್ ಮಂಗಳವಾರ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ರಷ್ಯಾದ ತೈಲ ತುಂಬಿದ ಹಡಗುಗಳು ಈಗಾಗಲೇ ಸಮುದ್ರದಲ್ಲಿರುವುದರಿಂದ ಈ ತೈಲವನ್ನು ಪಡೆದುಕೊಳ್ಳಲು ನಾವು ಭಾರತಕ್ಕೆ ತಾತ್ಕಾಲಿಕವಾದ ಅನುಮತಿ ನೀಡಿದ್ದೇವೆ. ಈ ತೈಲವನ್ನು ಭಾರತವು ಸ್ವೀಕರಿಸುವುದರಿಂದ ರಷ್ಯಾಕ್ಕೂ ಭಾರಿ ಹಣಕಾಸಿನ ಲಾಭ ಆಗಬಹುದು ಎಂದರು.

ಹೊರ್ಮುಜ್ ಜಲಸಂಧಿಯ ಮೂಲಕ ತೈಲ ಸಾಗಣೆ ಆಗದಿರುವುದರಿಂದ ತೈಲ ದರದಲ್ಲಿ ಏರಿಕೆಯಾಗಿದೆ. ಈ ಎಲ್ಲವನ್ನೂ ನಿರ್ವಹಿಸಲು ನಾವು ಭಾರತಕ್ಕೆ ಅಲ್ಪಾವಧಿ ಅವಕಾಶ ನೀಡಿದ್ದೇವೆ. ತೈಲ ತುಂಬಿದ ಹಡಗುಗಳು ರಷ್ಯಾದಿಂದ ಈಗಾಗಲೇ ಹೊರಟು ಸಮುದ್ರದಲ್ಲಿ ಹಾಗೆಯೇ ನಿಂತಿವೆ. ಚೀನಾ ಇವುಗಳನ್ನು ದಾಸ್ತಾನು ಮಾಡಿಕೊಳ್ಳುತ್ತದೆ. ಆದ್ದರಿಂದ, ನಿಮ್ಮ ತೈಲ ಸಂಸ್ಕರಣಾ ಘಟಕಗಳಿಗೆ ಇವನ್ನು ತುಂಬಿಕೊಳ್ಳಿ ಎಂದು ನಮ್ಮ ಸ್ನೇಹಿತ ಭಾರತಕ್ಕೆ ಹೇಳಿದ್ದೇವೆ ಎಂದು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಮೂರು ತಿಂಗಳಲ್ಲಿ ಅಂಗನವಾಡಿ ಕಾರ್ಯಕರ್ತರ ಖಾಲಿ ಹುದ್ದೆ ಭರ್ತಿ




ಬೆಂಗಳೂರು, ಮಾ.11(ಕೆಎಂಶಿ)– ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಕಾರ್ಯಕರ್ತರು ಮತ್ತು ಸಹಾಯಕಿಯರ ಹುದ್ದೆಗಳನ್ನು 90 ದಿನದೊಳಗೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಗುರ್ಮೆ ಸುರೇಶ್ ಶೆಟ್ಟಿ ಹಾಗೂ ಸಿದ್ದು ಸವದಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬಡವರ ಮಕ್ಕಳು ಓದುವ ಅಂಗನವಾಡಿ ಕೇಂದ್ರಗಳಲ್ಲಿ ಉತ್ತಮ ವಾತಾವರಣ ಇರಬೇಕು ಎಂಬುದು ಸರ್ಕಾರದ ಬದ್ಧತೆ. ಆದ್ದರಿಂದ ಹುದ್ದೆಗಳನ್ನು ಖಾಲಿ ಬಿಡಲು ಅವಕಾಶ ನೀಡುತ್ತಿಲ್ಲ ಎಂದರು.

ತೆರವಾದ ಹುದ್ದೆಗಳಿಗೆ ಸ್ಥಳೀಯವಾಗಿಯೇ 12 ಜನ ಸದಸ್ಯರ ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲಿದೆ. 90 ದಿನಗಳಲ್ಲಿ ಪ್ರಕ್ರಿಯೆ ಮುಗಿಯಬೇಕು. ಅಂಗನವಾಡಿ ಕಾರ್ಯ ಕರ್ತರು ಆಯಾ ಗ್ರಾಮಗಳಲ್ಲೇ ವಾಸವಿರಬೇಕು ಎಂಬುದನ್ನು ಕಡ್ಡಾಯವಾಗಿ ಜಾರಿಗೊಳಿಸಲಾಗುತ್ತಿದೆ. ಉದ್ಯೋಗಿನಿ ಯೋಜನೆ ಫಲಾನುಭವಿಗಳ ಆಯ್ಕೆಗೆ ಶಾಸಕರ ನೇತೃತ್ವದಲ್ಲಿ ಸಮಿತಿಗಳಿವೆ. ಫಲಾನುಭವಿಗಳ ಆಯ್ಕೆ ಪಟ್ಟಿ ನೀಡುವಲ್ಲಿ ವಿಳಂಬ ಆಗಬಾರದು. ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ಸಿಬಿಲ್ ಸ್ಕೋರ್ ಲೆಕ್ಕ ಹಾಕುವುದು ಕಷ್ಟ ಸಾಧ್ಯ. ಇದನ್ನು ಸರಳೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಪಶು ಸಂಗೋಪನಾ ಇಲಾಖೆಯಲ್ಲಿ 6757 ಹುದ್ದೆ ಖಾಲಿ ಇವೆ



ಬೆಂಗಳೂರು, ಮಾ. 11(ಕೆಎಂಶಿ)– ರಾಜ್ಯದಲ್ಲಿ ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಪಶುವೈದ್ಯರು, ಪಶು ವೈದ್ಯ ಪರಿವೀಕ್ಷಕರು ಹಾಗೂ ಸಹಾಯಕ ಸಿಬ್ಬಂದಿ ಸೇರಿದಂತೆ 6,757 ಹುದ್ದೆಗಳು ಖಾಲಿ ಇವೆ ಎಂದು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ವಿಧಾನಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಡಿ.ಎ.ಶರಣ್, ಹೇಮಲತಾ ನಾಯಕ್ ಹಾಗೂ ಎಸ್.ಪಿ. ಸಂಕನೂರು ಅವರುಗಳ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 1673 ಹುದ್ದೆಗಳ ಭರ್ತಿಗೆ ಮಂಜೂರಾತಿ ದೊರೆತಿದೆ. 5,950 ಹುದ್ದೆಗಳು ಭರ್ತಿಯಾಗಿವೆ. ಹೊರಗುತ್ತಿಗೆಯಡಿ 3,366 ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದರು.

ಕಲ್ಯಾಣ ಕರ್ನಾಟಕ ಭಾಗಗಳಲ್ಲಿ 1,149 ಹುದ್ದೆಗಳು ಖಾಲಿ ಇವೆ. ರಾಷ್ಟ್ರೀಯ ಕೃಷಿ ಆಯೋಗದ ಸರಾಸರಿ ಮಾಹಿತಿ ಪ್ರಕಾರ ರಾಜ್ಯದಲ್ಲಿ 1 ಕೋಟಿ 38 ಲಕ್ಷ ರಾಸುಗಳಿವೆ. ಇದಕ್ಕೆ ಅನುಗುಣವಾಗಿ 2,770 ಪಶು ಆಸ್ಪತ್ರೆಗಳಿರಬೇಕು. 4,166 ದುಪ್ಪಟ್ಟು ಆಸ್ಪತ್ರೆಗಳಿವೆ. 400 ಪಶು ವೈದ್ಯಾಧಿಕಾರಿಗಳ ಖಾಯಂ ಭರ್ತಿಗೆ ಕೆಪಿಎಸ್‌ಸಿಯಿಂದ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಜಾನುವಾರುಗಳಿಗೆ ಕಾಲು–ಬಾಯಿ ಜ್ವರ, ಚರ್ಮಗಂಟು, ಸಪ್ಪೆರೋಗ ಮೊದಲಾದ ರೋಗಗಳಿಗೆ ಕಾಲಕಾಲಕ್ಕೆ ಅಗತ್ಯ ಲಸಿಕೆ ನೀಡಲಾಗುತ್ತಿದೆ.

ರಾಜ್ಯದಲ್ಲಿ ಜನವರಿವರೆಗೆ ಪ್ರತಿದಿನ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. 2024–25ನೇ ಸಾಲಿನಲ್ಲಿ 99,474 ಲಕ್ಷ ಮೊಟ್ಟೆ ಉತ್ಪಾದನೆಯಾಗಿದೆ. 4,51,660 ಟನ್ ಮಾಂಸ ಉತ್ಪಾದನೆಯಾಗಿದೆ. ವರ್ಷದಿಂದ ವರ್ಷಕ್ಕೆ ಹಾಲು, ಮೊಟ್ಟೆ, ಮಾಂಸ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ. ಹೈನುಗಾರಿಕೆ ಹಾಗೂ ಪಶುಸಂಗೋಪನೆಯಲ್ಲಿರುವ ರೈತರಿಗೆ ಆರ್ಥಿಕ ಅನುಕೂಲವಾಗಿದೆ ಎಂದರು.

ಸಿದ್ದರಾಮಯ್ಯ ಎದುರೇ ಸಚಿವರ ವಿರುದ್ಧ ತಿರುಗಿಬಿದ್ದ ಶಾಸಕರು; ಸಿಎಂ ತಬ್ಬಿಬ್ಬು



ಬೆಂಗಳೂರು: ಕಾಂಗ್ರೆಸ್‌ನಲ್ಲಿ ಆಂತರಿಕ ಕಿತ್ತಾಟ ಮತ್ತೆ ಮುಂದುವರಿದಿದೆ, ಅದು ಸಿಎಂ ಸಿದ್ದರಾಮಯ್ಯ ಎದುರೇ ಜಟಾಪಟಿ ನಡೆದಿದೆ. ಕಾಂಗ್ರೆಸ್‌ನಲ್ಲಿ ಅಸಮಾಧಾನದ ಮಧ್ಯೆಯೇ ಸಿಎಂ ಸಿದ್ದರಾಮಯ್ಯ ಶಾಸಕಾಂಗ ಪಕ್ಷದ ಸಭೆಯನ್ನು ಕರೆದಿದ್ದರು. ಈ ಸಭೆಯಲ್ಲಿ ಶಾಸಕರು–ಸಚಿವರು ಕಿತ್ತಾಡಿಕೊಂಡಿದ್ದಾರೆ. ಮೊದಲಿನಿಂದ ಸಚಿವರ ಮೇಲೆ ಶಾಸಕರು ಸಿಟ್ಟು ಹೊರಹಾಕುತ್ತಿದ್ದರು, ಸಿದ್ದರಾಮಯ್ಯನವರ ಭಯಕ್ಕೆ ಎಲ್ಲವನ್ನು ಅದುಮಿಟ್ಟುಕೊಂಡು ಹೋಗುತ್ತಿದ್ದರು, ಆದರೆ ಈಗ ಶಾಸಕರ ತಾಳ್ಮೆ ಕಟ್ಟೆ ಒಡೆದಿದ್ದು, ಸಿದ್ದರಾಮಯ್ಯ ಎದುರೇ ಕೂಗಾಡಿದ್ದಾರೆ.

ಶಾಸಕರ ಬಗ್ಗೆ ಸಚಿವರು ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದಾರೆ. ನಮ್ಮ ಮನವಿ, ಅಹವಾಲುಗಳನ್ನು ಸಚಿವರು ಪರಿ ಗಣಿಸುತ್ತಿಲ್ಲ ಎಂದು ಅಸಮಾಧಾನ ಹೊರಹಾಕಿದ್ದಾರೆ. ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗುತ್ತಿದ್ದರೂ ಕೆಲವು ಸಚಿವರು ತಮ್ಮ ಕಚೇರಿಗೆ ಬಂದ ಶಾಸಕರನ್ನು ಗುರುತಿಸುವ ಕೆಲಸವನ್ನೂ ಮಾಡುತ್ತಿಲ್ಲ. ನಮ್ಮ ಮನವಿ, ಅಹವಾಲುಗಳಿಗೆ ಆಯಿತು, ನೋಡೋಣ, ಮಾಡೋಣ ಎನ್ನುವ ಹಾರಿಕೆ ಉತ್ತರ ನೀಡಿ ಕಳುಹಿಸುತ್ತಾರೆ. ಮತ್ತೆ ನಾವು ಆ ಬಗ್ಗೆ ಕೇಳಿದರೂ ಯಾವುದೇ ಪ್ರಯೋಜನ ಆಗುತ್ತಿಲ್ಲ ಎಂದು ಕಿಡಿಕಾರಿದ್ದಾರೆ. ಲೋಕೋಪಯೋಗಿ ಸೇರಿದಂತೆ ಇನ್ನು ಕೆಲವು ಇಲಾಖೆಗಳ ಸಚಿವರಂತೂ ವಿಪಕ್ಷದವರಿಗೆ ನೀಡುವಷ್ಟು ಮಾನ್ಯತೆಯನ್ನೂ ಸ್ವಪಕ್ಷೀಯ ಶಾಸಕರಿಗೆ ನೀಡುತ್ತಿಲ್ಲ ಎಂದು ದೂರಿದ್ದಾರೆ.

ಅಧಿಕಾರಿಗಳ ವರ್ಗಾವಣೆ ವಿಚಾರಕ್ಕೆ ಸಂಬಂಧಪಟ್ಟಂತೆ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಹಾಗೂ ಸಚಿವ ಎನ್.ಎಸ್ ಭೋಸರಾಜು ನಡುವೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಬಹಿರಂಗವಾಗಿಯೇ ಕಿತ್ತಾಟ ನಡೆದಿದೆ. ಇನ್ನೂ ಶಾಸಕ ಗಣಿಗ ರವಿ, ಲೋಕೋಪಯೋಗಿ ಇಲಾಖೆಯ ಹಳೇ ಬಿಲ್ ಕ್ಲಿಯರ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಜೆಡಿಎಸ್ ಹಾಗೂ ಬಿಜೆಪಿಯವರ ಬಿಲ್ ಕ್ಲಿಯರ್ ಆಗುತ್ತಿವೆ. ಆದರೆ, ನಮ್ಮ ಹಳೆಯ ಬಿಲ್ ಕ್ಲಿಯರ್ ಮಾಡುತ್ತಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ವಿರುದ್ಧ ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದಾರೆ. ಜೊತೆಗೆ ರಾಜ್ಯದಲ್ಲಿನ ಕೆಲ ವಿವಿಗಳನ್ನು ಬಂದ್ ಮಾಡುವ ಸರ್ಕಾರದ ನಿರ್ಧಾರಕ್ಕೆ ಕೈ ಶಾಸಕರಿಂದಲೇ ವಿರೋಧ ವ್ಯಕ್ತವಾಗಿದೆ. ಶಾಸಕಾಂಗ ಸಭೆಯಲ್ಲಿ ಕೊಪ್ಪಳ, ಕೊಡಗು ವಿವಿ ಬಂದ್ ಮಾಡದಂತೆ ಕಾಂಗ್ರೆಸ್ ಶಾಸಕರೆ ಆಗ್ರಹಿಸಿದ್ದಾರೆ ಎನ್ನಲಾಗಿದೆ. ಅಲ್ಲದೇ ಸರ್ಕಾರ ಬಂದು 2 ವರ್ಷ ಆಗಿದೆ ಶಾಸಕರಿಗೆ ಅನುದಾನ ಸಿಕ್ಕಿಲ್ಲ ಎಂದು ಸಿಎಂ ಸಿದ್ದರಾಮಯ್ಯಗೆ ಏರು ಧ್ವನಿಯಲ್ಲೇ ಕೇಳಿದ್ದಾರೆ.

ಶಾಸಕರು ಯಾವಾಗ ಅನುದಾನದ ವಿಚಾರದಲ್ಲಿ ಸಿದ್ದರಾಮಯ್ಯ ವಿರುದ್ಧವೇ ಬೇಸರ ಹೊರಹಾಕಿದರೋ ಸಿದ್ದರಾಮಯ್ಯ ತಕ್ಷಣವೇ ಸಮಾಧಾನ ಮಾಡುವ ಕೆಲಸ ಮಾಡಿದ್ದಾರೆ. ಮುಖ್ಯಮಂತ್ರಿ ವಿವೇಚನಾ ಕೋಟಾದಲ್ಲಿ ಲಭ್ಯವಿರುವ 8000 ಕೋಟಿ ರೂಪಾಯಿ ಅನುದಾನದಿಂದ ಏಪ್ರಿಲ್ ಬಳಿಕ ಶಾಸಕರ ಕ್ಷೇತ್ರಾಭಿವೃದ್ಧಿ ಕಾರ್ಯಗಳಿಗೆ ಸೂಕ್ತ ಅನುದಾನ ನೀಡುವುದಾಗಿ ಸಿದ್ದರಾಮಯ್ಯ ಎಲ್ಲ ಶಾಸಕರಿಗೂ ಭರವಸೆ ನೀಡಿದ್ದಾರೆ. ಬಜೆಟ್‌ನಲ್ಲಿ ಎಲ್ಲವನ್ನೂ ಬರೆಯಲು ಸಾಧ್ಯವಿಲ್ಲ. ಆದ್ದರಿಂದ ಬಜೆಟ್‌ನಲ್ಲಿ ತಮ್ಮ ಕ್ಷೇತ್ರದ ಹೆಸರು ಉಲ್ಲೇಖ ಆಗಿಲ್ಲ, ಯಾರೂ ಧೈರ್ಯಗುಂದುವ ಅಗತ್ಯ ಇಲ್ಲ ಎಂದು ಹೇಳಿದ್ದಾರೆ.

ಇದೆಲ್ಲವೂ ಮುಗಿದ ಬಳಿಕ.. ಸಿದ್ದರಾಮಯ್ಯ ಶಾಸಕರು, ಸಚಿವರಿಗೆ ಒಂದು ಖಡಕ್ ಎಚ್ಚರಿಕೆ ನೀಡಿದ್ದಾರೆ. ನಮ್ಮ ಬಜೆಟ್ ಬಗ್ಗೆ ಬಿಜೆಪಿಯವರು ಹೆಚ್ಚು ಸಾಲ ಮಾಡಲಾಗಿದೆ, ಮುಸ್ಲಿಮರನ್ನು ಓಲೈಸಲಾಗಿದೆ ಎಂದು ಬುರುಡೆ ಬಿಡುತ್ತಿದ್ದಾರೆ. ಇದು ಪರಮ ಸುಳ್ಳು ಎಂದು ನೀವು ಅಂಕಿ–ಅಂಶಗಳನ್ನಿಟ್ಟುಕೊಂಡು ಗಟ್ಟಿದನಿಯಲ್ಲಿ ಅವರ ಆರೋಪಗಳಿಗೆ ಸದನದಲ್ಲಿ ಹಾಗೂ ಹೊರಗೆ ಪ್ರತ್ಯುತ್ತರ ನೀಡಿ ಎಂದು ತಾಕೀತು ಮಾಡಿದ್ದಾರೆ.

ನಾನು ಉತ್ತಮ ಬಜೆಟ್ ಮಂಡಿಸಿದ್ದೇನೆ. ನಮ್ಮ ಸರ್ಕಾರದ 5 ಗ್ಯಾರಂಟಿ ಯೋಜನೆಗಳಿಗೂ ಅನುದಾನ ನೀಡಿ, ಅಭಿವೃದ್ಧಿ ಕಾರ್ಯಗಳಿಗೂ ಸೂಕ್ತ ಅನುದಾನ ಒದಗಿಸಿದ್ದೇನೆ. ಎಲ್ಲೂ ಕೂಡ ಆರ್ಥಿಕ ಶಿಸ್ತುಮೀರದಂತೆ ನೋಡಿಕೊಳ್ಳಲಾಗಿದೆ. ರೈತರು, ಕಾರ್ಮಿಕರು, ಮಹಿಳೆಯರು, ಯುವಕರು ಸೇರಿ ಎಲ್ಲ ವರ್ಗವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಬಜೆಟ್ ರೂಪಿಸಲಾಗಿದೆ. ಇಂತಹ ಬಜೆಟ್ ಅನ್ನು ಬಿಜೆಪಿ ಮತ್ತು ಜೆಡಿಎಸ್‌ನವರನ್ನು ಬಿಟ್ಟು ಉಳಿದವರೆಲ್ಲರೂ ಹೊಗಳುತ್ತಿದ್ದಾರೆ. ಪ್ರತಿಪಕ್ಷದವರ ಟೀಕೆಗಳಿಗೆ ತಕ್ಕ ಉತ್ತರ ನೀಡಿ ಎಂದು ಹೇಳಿದ್ದಾರೆ.

ಒಟ್ಟಿನಲ್ಲಿ, ದಾಖಲೆಯ ಮಟ್ಟದಲ್ಲಿ 16ನೇ ಬಜೆಟ್ ಮಂಡಿಸಿರುವ ಸಿಎಂ ಸಿದ್ದರಾಮಯ್ಯ, ಬಜೆಟ್‌ನ ಹೈಲೈಟ್ಸ್ ಅನ್ನು ಶಾಸಕರಿಗೇನೋ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದರೆ, ಸಭೆಯಲ್ಲಿ ಶಾಸಕರ ಅಸಮಾಧಾನ ಮಾತ್ರ ಬಹಿರಂಗವಾಗಿಯೇ ಸ್ಫೋಟವಾಗಿದ್ದು ಕಾಂಗ್ರೆಸ್‌ನಲ್ಲಿನ ಆಂತರಿಕ ಅಸಮಾಧಾನ ಮತ್ತೆ ಮುಂದುವರಿದಿದೆ. ಇದು ಮುಂದೆ ಯಾವ ಹಂತಕ್ಕೆ ಹೋಗುತ್ತದೆಯೋ ಕಾದು ನೋಡಬೇಕಿದೆ.

ಮಣಿಪಾಲ್ ಆಸ್ಪತ್ರೆಯಿಂದ ಸಾಧಕರಿಗೆ 'ಮಣಿಪಾಲ್ ಸಖಿ' ಪುರಸ್ಕಾರ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಶಿಕ್ಷಣ, ಹೆಲ್ತ್‌ಕೇರ್, ಕ್ರೀಡೆ, ಆಂಟ್ರಪ್ರೆನರ್‌ಶಿಪ್, ಸಮಾಜ ಸೇವೆ, ಕಲೆ ಮತ್ತು ಸಮುದಾಯ ನಾಯಕತ್ವ ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಪ್ರತಿನಿಧಿಸುವ ಸುಮಾರು 30 ಮಹಿಳಾ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.11– ಮಹಿಳೆಯರ ಸ್ಥೈರ್ಯ, ಸೇವೆ ಮತ್ತು ಸಮಾಜದಲ್ಲಿ ಧನಾತ್ಮಕ ಬದಲಾವಣೆ ತರುವ ಅವರ ನಿರಂತರ ಬದ್ಧತೆಯನ್ನು ಆಚರಿಸುವ ಉದ್ದೇಶದಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆಯು ನಗರದ ಗ್ರ್ಯಾಂಡ್ ಮರ್ಕ್ಯೂರ್ ಹೋಟೆಲ್‌ನಲ್ಲಿ 'ಮಣಿಪಾಲ್ ಸಖಿ – ಸೀಸನ್ 4' ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡಿದ ಇನ್ಫೋಸಿಸ್ ಲಿಮಿಟೆಡ್‌ನ ಅಸೋಸಿಯೇಟ್ ವೈಸ್ ಪ್ರೆಸಿಡೆಂಟ್ ಹೆಚ್ ಆರ್, ಪ್ರೀತ್ ಕುಶಾಲಪ್ಪ ಕೊಡಿರ, ಮಹಿಳೆಯರ ಶಕ್ತಿ ಮತ್ತು ಅವರು ಸವಾಲುಗಳನ್ನು ಎದುರಿಸುವ ರೀತಿ ಕುಟುಂಬ ಹಾಗೂ ಸಮಾಜಕ್ಕೆ ದೊಡ್ಡ ಬಲ ನೀಡುತ್ತದೆ ಎಂದರು.

ಎಲ್ಲರಿಗೂ ಸಮಾನ ಅವಕಾಶ ನೀಡುವ ಉದ್ದೇಶದಿಂದ ಮಣಿಪಾಲ್ ಸಂಸ್ಥೆಯು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಕಷ್ಟಗಳನ್ನು ಗೆದ್ದು ಇತರರಿಗೆ ನೆರವಾದ ಮಹಿಳೆಯರನ್ನು 'ಮಣಿಪಾಲ್ ಸಖಿ' ಗೌರವಿಸುತ್ತಿದೆ. ಇಂತಹ ಸಾಧಕರನ್ನು ಗುರುತಿಸುವುದರಿಂದ ಇತರೆ ಮಹಿಳೆಯರಿಗೂ ಸ್ಫೂರ್ತಿಯಾಗುತ್ತದೆ ಎಂದರು.

ಕ್ಲಸ್ಟರ್ ಡೈರೆಕ್ಟರ್ ಪ್ರಮೋದ್ ಕುಂದರ್ ಮಾತನಾಡಿ, ಪ್ರತಿಯೊಬ್ಬ ಮಹಿಳೆಯೂ ಸ್ಥೈರ್ಯ, ದೃಢತೆ ಮತ್ತು ಸಕಾರಾತ್ಮಕ ಬದಲಾವಣೆ ತರುವ ಬದ್ಧತೆಯನ್ನು ಪ್ರತಿನಿಧಿಸುತ್ತಾರೆ. ಮಣಿಪಾಲ್ ಸಖಿಯಂತಹ ಕಾರ್ಯಕ್ರಮಗಳ ಮೂಲಕ, ಸಮಾಜದಲ್ಲಿ ಮಹಿಳೆಯರ ಆರೋಗ್ಯದ ಬಗ್ಗೆ ಜಾಗೃತಿ ಮತ್ತು ಮುನ್ನೆಚ್ಚರಿಕೆಯ ಆರೈಕೆಗಳನ್ನು ಪ್ರೋತ್ಸಾಹಿಸಲು ನಾವು ಸದಾ ಬದ್ಧರಾಗಿರುತ್ತೇವೆ ಎಂದು ಹೇಳಿದರು.

ಆಸ್ಪತ್ರೆಯ ನಿರ್ದೇಶಕರಾದ ಬಿ.ಜೆ. ಸಂದೀಪ್ ಪಟೇಲ್ ಉಪಸ್ಥಿತರಿದ್ದರು.


ಮಾ.25ಕ್ಕೆ ಸಾಮೂಹಿಕ ವಿವಾಹ

ಸುತ್ತೂರು, ಮಾ.11– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಆದಿಜಗದ್ಗುರುಗಳ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳ ಜೊತೆಗೆ ಮಾರ್ಚ್ 25 ರಂದು ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ. ವಧುವಿಗೆ ಚಿನ್ನದ ಮಾಂಗಲ್ಯ, ಬೆಳ್ಳಿ ಕಾಲುಂಗುರ, ಸೀರೆ, ಕುಪ್ಪಸಗಳನ್ನು ಹಾಗೂ ವರನಿಗೆ ಪಂಚೆ, ವಲ್ಲಿ, ಶರ್ಟ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ. 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರ ವಾಗಿ ಸಂಪರ್ಕಿಸಿ ಅಥವಾ ದೂರವಾಣಿ 08221–232217, 232033, 9741342222, ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ರೈತರಿಗೆ ಅನ್ಯಾಯದ ಹಿನ್ನೆಲೆ

ಆಸ್ತಿ ದರ ಪರಿಷ್ಕರಣೆ ಸಮರ್ಥಿಸಿಕೊಂಡ ಕಂದಾಯ ಸಚಿವ ಕೃಷ್ಣ ಬೈರೇಗೌಡ



ಬೆಂಗಳೂರು, ಮಾ. 11(ಕೆಎಂಶಿ)– ಭೂಸ್ವಾಧೀನ ಪ್ರಕ್ರಿಯೆಯಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಲು ಕಾಲಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆ ಮಾತ್ರ ಪರಿಹಾರ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನಪರಿಷತ್‌ನಲ್ಲಿ ಇಂದು ತಿಳಿಸಿದ್ದಾರೆ.

ಕೆ.ಎಸ್.ನವೀನ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಭೂಸ್ವಾಧೀನಕ್ಕೆ ರೈತರಿಗೆ ಪರಿಹಾರ ನೀಡುವ ಸಂಬಂಧ 2013ರ ಕಾನೂನಿನಲ್ಲಿ ಸ್ಪಷ್ಟವಾಗಿದೆ. ಇದರ ಪ್ರಕಾರ ಭೂ ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಅಂತಹ ಭೂಮಿಗೆ ಹೊಸದಾಗಿ ಮಾರ್ಗಸೂಚಿ ದರ ಪರಿಷ್ಕರಿಸುವುದಿಲ್ಲ. ಬದಲಾಗಿ ಹಿಂದಿನ ಮಾರ್ಗಸೂಚಿ ದರ ಅಥವಾ ಹಿಂದಿನ ಮೂರು ವರ್ಷದ ಮಾರುಕಟ್ಟೆ ನೋಂದಾಯಿತ ಸೇಲ್ ಡೀಡ್ (ಮಾರಾಟ ಪತ್ರ) ದರ ಪರಿಗಣಿಸಲಾಗುತ್ತದೆ ಎಂದರು.

ಭೂಮಿ ಹೆಚ್ಚಿನ ದರಕ್ಕೆ ವಹಿವಾಟು ಆಗಿರುವ ಆಧಾರದಲ್ಲಿ ಸರಾಸರಿ ಮೊತ್ತವನ್ನು ಪರಿಹಾರವಾಗಿ ನಿಗದಿಪಡಿಸಲಾಗುತ್ತದೆ. ಸರ್ಕಾರ ಪ್ರತಿನಿತ್ಯ ಒಂದಲ್ಲಾ ಒಂದು ಕಾರಣಕ್ಕೆ ಭೂಸ್ವಾಧೀನ ಮಾಡುತ್ತಲೇ ಇರುತ್ತದೆ. ಕಾಲದಿಂದ ಕಾಲಕ್ಕೆ ದರ ಪರಿಷ್ಕರಣೆ ಮಾಡದಿದ್ದಲ್ಲಿ ರೈತರಿಗೆ ನಷ್ಟವಾಗುತ್ತದೆ ಎಂಬುದು ಸತ್ಯ. ಇದೇ ಕಾರಣಕ್ಕೆ ನಾವೂ ಮಾರ್ಗಸೂಚಿ ದರ ಪರಿಷ್ಕರಣೆ ಆಗಬೇಕು ಎನ್ನುತ್ತೇವೆ. ಆದರೆ, ಅದಕ್ಕೂ ವಿರೋಧ ವ್ಯಕ್ತವಾಗುತ್ತಿದೆ ಎಂದರು. ಕೆಲವೆಡೆ ಮಾರ್ಗಸೂಚಿ ದರಕ್ಕೂ, ಮಾರುಕಟ್ಟೆ ದರಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಭೂಮಿ ಮಾರ್ಗಸೂಚಿ ದರ 2 ಲಕ್ಷ ಇದ್ದರೆ, ಮಾರುಕಟ್ಟೆ ಮೌಲ್ಯ 70 ರಿಂದ 80 ಲಕ್ಷ ಇರುತ್ತದೆ. ಪರಿಣಾಮ ಕಪ್ಪು ಹಣದ ವಹಿವಾಟಿಗೂ ಕಾರಣವಾಗಿದೆ. ಆದ್ದರಿಂದ ಈ ಎಲ್ಲಾ ಅಕ್ರಮ ವಹಿವಾಟುಗಳನ್ನೂ ನಿಯಂತ್ರಿಸಿ ರೈತರಿಗೆ ನ್ಯಾಯಬದ್ಧ ಪರಿಹಾರ ನೀಡಲು ಕಾಲಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆಯೊಂದೇ ಪರಿಹಾರ ಎಂದರು.

ನಕ್ಕರೆ ಅದೇ ಸ್ವರ್ಗ

ತಂದೆ-ಮಗನ ಪ್ರೋಗ್ರೆಸ್ ಕಾರ್ಡ್ ಮೇಲೆ ಹೆಬ್ಬೆಟ್ಟು ಒತ್ತಿದ.

ಮಗ : ಅಪ್ಪ ನೀವು ಇಂಜಿನಿಯರ್ ಅಲ್ವ.
ಮತ್ತೆ ಯಾಕೆ ಹೆಬ್ಬೆಟ್ಟು ಒತ್ತುತ್ತಿದ್ದೀಯಾ?

ಅಪ್ಪ : ಅಯ್ಯೋ ಬೋ... ಮಗನೆ, ನೀನು ತಗೊಂಡಿರೋ ಮಾರ್ಕ್ಸ್ ನೋಡಿ ನಿಮ್ಮಪ್ಪ ವಿದ್ಯಾವಂತ ಅಂತ ಗೊತ್ತಾಗಬಾರದು...

ಮೈಸೂರು ಮಿತ್ರ

ಗುರುವಾರ, ಮಾರ್ಚ್ 12, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನಾವು ನಮ್ಮ ಆಲೋಚನೆಗಳಿಂದ ರೂಪುಗೊಂಡಿದ್ದೇವೆ; ನಾವು ಏನನ್ನು ಯೋಚಿಸುತ್ತೇವೆಯೋ ಅದೇ ಆಗುತ್ತೇವೆ. ಮನಸ್ಸು ಶುದ್ಧವಾದಾಗ, ಸಂತೋಷವು ಎಂದಿಗೂ ಬಿಡದ ನೆರಳಿನಂತೆ ಹಿಂಬಾಲಿಸುತ್ತದೆ. -ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆ ಮಗ ಉಂಡಷ್ಟೂ ಒಳ್ಳೇದು, ಮಳೆ ಮಳೆ ಬಂದಷ್ಟೂ ಒಳ್ಳೇದು.

ನಿಮ್ಮ ಪತ್ರಗಳು

ಹೆಬ್ಬಾಳು 2ನೇ ಹಂತದಲ್ಲಿ ಕಸ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಹೆಬ್ಬಾಳು 2ನೇ ಹಂತ, 21ನೇ ಕ್ರಾಸ್‌ನಲ್ಲಿ ಕಸದ ರಾಶಿ ತುಂಬಿ ತುಳುಕುತ್ತಿದೆ. ಇದರ ಬಗ್ಗೆ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೆ, ಇಲ್ಲಿನ ನಿವಾಸಿಗಳಿಗೆ ಕಸ ತಂದು ಸುರಿಯಬೇಡಿ ಎಂದು ಹೇಳಿದರೂ ಯಾವುದೇ ಪ್ರತಿಕ್ರಿಯೆ ಇಲ್ಲ. ನಿವಾಸಿಗಳು ರಾತ್ರಿ ಸಮಯದಲ್ಲಿ ಕಸ ತಂದು ಸುರಿಯುತ್ತಾರೆ. ಕಸದ ದುರ್ವಾಸನೆಯಿಂದ ನಿವಾಸಿಗಳಿಗೆ ವಾಸ ಮಾಡಲು ತುಂಬಾ ತೊಂದರೆಯಾಗುತ್ತಿದೆ. ಕಸವನ್ನು ನಾಯಿ, ಹಂದಿಗಳು ಎಳೆದು ರಸ್ತೆಗೆ ಹಾಕುತ್ತಿದ್ದು, ವಿಷಜಂತುಗಳ ಆವಾಸ ಸ್ಥಾನವಾಗಿದೆ. ಇಲ್ಲಿನ ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕಸ ತೆರವುಗೊಳಿಸಿ ನಿವಾಸಿಗಳು ನೆಮ್ಮದಿಯಿಂದ ವಾಸಿಸಲು ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

-ಡಾ. ಅನಿಶ್‌ಕುಮಾರ್, ಹೆಬ್ಬಾಳು 2ನೇ ಹಂತ, ಮೈಸೂರು.

ಬೇಡವಾದ ಹತ್ತು ರೂನ ನಂದಿನಿ ಚಿಕ್ಕ ಮೊಸರು

ಮಾನ್ಯರೆ,

ಮೈಮುಲ್ ಹಲವಾರು ವರುಷಗಳಿಂದ ಹಾಲು, ಮೊಸರು ಮತ್ತು ಹಾಲಿನ ಉತ್ಪನ್ನಗಳನ್ನು ಜಿಲ್ಲೆ ಸೇರಿದಂತೆ ದೇಶದಾದ್ಯಂತ ಮಾರುತ್ತಿರುವುದು ಸರಿಯಷ್ಟೆ. ಮೊದಲಿಗೆ ಅರ್ಧ ಲೀಟರ್, ಒಂದು ಲೀಟರ್ ಹಾಲಿನ ಪ್ಯಾಕೆಟ್ಟುಗಳು ಮತ್ತು 500 ಮಿ.ಲೀ. ಮೊಸರಿನ ಪ್ಯಾಕೆಟ್ಟುಗಳು ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದು, ನಂತರ ಮಾರುಕಟ್ಟೆಯ ತಂತ್ರವಾಗಿ 200 ಮಿ.ಲೀ. ಮೊಸರು ಮತ್ತು ನೂರು ಮಿಲೀಯ ಹಾಲನ್ನೂ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದರು. 200 ಮಿ.ಲೀ. ಮೊಸರಿಗೆ 13 ರೂ ಮಾರಾಟ ದರವಿದ್ದು, ಬಹುಶಃ ಈ ಉಪಕ್ರಮ ಎಲ್ಲಾ ವರ್ಗಗಳ ಜನರಿಗೂ ಹಾಗೂ ಏಜಂಟರಿಗೂ ಸರಿಯಾಗಿತ್ತು. ಆದರೆ ಇತ್ತೀಚೆಗೆ ಮತ್ತೆ ಮೈಮುಲ್ ಹತ್ತು ರೂಪಾಯಿಗೆ ಮತ್ತೊಂದು ಚಿಕ್ಕ ಮೊಸರಿನ ಪ್ಯಾಕೆಟ್ ಬಿಡುಗಡೆ ಮಾಡಿದೆ. ಮತ್ತೊಂದು ಒಂದೇ ವಿನ್ಯಾಸದ ಮತ್ತು ಕೇವಲ ಮೂರು ರೂಪಾಯಿ ವ್ಯತ್ಯಾಸದ ಮೊಸರಿನ ಪ್ಯಾಕೆಟ್‌ನಿಂದ ಉತ್ಪಾದನಾ ವೆಚ್ಚ ಹೆಚ್ಚುವುದಲ್ಲದೇ, ಏಜಂಟರಿಗೂ ಪ್ಯಾಕೆಟ್ಟುಗಳ ವಿನ್ಯಾಸ ಮತ್ತು ಆಕಾರ ಮತ್ತು ತೂಕದ ಬಗ್ಗೆ ಸಂದೇಹಗಳು ಹಾಗೂ ವ್ಯತ್ಯಯಗಳು ಕಂಡು ಬರುತ್ತಿದೆ. ಅಷ್ಟಕ್ಕೂ ಪ್ಯಾಕೆಟ್ಟಿಗೆ ಮೂರು ರೂಪಾಯಿಗಳ ವ್ಯತ್ಯಾಸ ಗ್ರಾಹಕರಿಗೆ ಹೊರೆಯಾಗದಿದ್ದರೂ ಮತ್ತು ಮಾರುಕಟ್ಟೆಯಲ್ಲಿ ಇದಕ್ಕೆ ಬೇಡಿಕೆ ಇಲ್ಲದಿದ್ದರೂ, ಇಂಥಹ ಮಾರುಕಟ್ಟೆ ತಂತ್ರವನ್ನು ರೂಪಿಸಿ, ಒಕ್ಕೂಟಕ್ಕೆ ಮಾರ್ಗದರ್ಶನ ನೀಡುವ ಆಡಳಿತ ಮಂಡಳಿ ಸದಸ್ಯರು ಈ ಬಗ್ಗೆ ಮತ್ತೊಮ್ಮೆ ಗಮನ ಹರಿಸಲಿ ಮತ್ತು ಪ್ರಸ್ತುತ ಇರುವ ಗ್ರಾಹಕರ ಕೊಳ್ಳುವ ಶಕ್ತಿಯನ್ನು ಮತ್ತಷ್ಟು ಕೆಳಗಿಳಿಸದೆ ನಂದಿನಿ ಬಲವರ್ಧಿಸುವ ಇತರೆ ಕಾರ್ಯ ತಂತ್ರಗಳನ್ನು ರೂಪಿಸುವಂತಾಗಲಿ.

-ವಿಜಯ್ ಹೆಮ್ಮಿಗೆ, ಮೈಸೂರು

ಮೈಸೂರು ಆಕಾಶವಾಣಿ ಪ್ರಸಾರ ಸಾಮರ್ಥ್ಯ ಹೆಚ್ಚಿಸಲಿ

ಮಾನ್ಯರೆ,

ಭಾರತದಲ್ಲೇ ಪ್ರಥಮ ಬಾರಿಗೆ ಪ್ರಾರಂಭವಾದ ಮೈಸೂರಿನ ಆಕಾಶವಾಣಿ 90 ವಸಂತಗಳನ್ನು ಪೂರೈಸಿರುವ ಸಾರ್ವಜನಿಕರ ಪ್ರಭಾವಿ ಮಾಧ್ಯಮವಾಗಿದೆ. ಕೇಂದ್ರ ಸರ್ಕಾರದ ಸ್ವಾಧೀನದಲ್ಲಿರುವ ಆಕಾಶವಾಣಿ ಮೈಸೂರು ಕೇಂದ್ರವು ಸದ್ಯ 5 ಕಿಲೋವ್ಯಾಟ್ ಸಾಮರ್ಥ್ಯದಲ್ಲಿ ತನ್ನ ಪ್ರಸಾರವನ್ನು ಮಾಡುತ್ತಿದೆ. ಇದು ಈಗ 10 ಕಿಲೋವ್ಯಾಟ್ ಸಾಮರ್ಥ್ಯದಲ್ಲಿ ತನ್ನ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಪ್ರಸಾರ ಭಾರತಿಯಿಂದ ಅನುಮತಿ ದೊರೆತಿದೆ ಎಂದು ಹೇಳಲಾಗುತ್ತಿದೆ. ಅಲ್ಲದೆ ಮೈಸೂರಿನ ಯಾದವಗಿರಿಯಲ್ಲಿರುವ ಆಕಾಶವಾಣಿ ಕೇಂದ್ರ ಕೇವಲ 100 ಮೀಟರ್ ಎತ್ತರದಲ್ಲಿದೆ. ಇದನ್ನು ಯಾದವಗಿರಿಯಿಂದ 150 ಮೀಟರ್ ಎತ್ತರದ ಟವರ್ ಇರುವ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಸ್ಥಳಾಂತರಿಸಿದರೇ, ತಮಿಳುನಾಡು ಮತ್ತು ಕೇರಳದ ಗಡಿಭಾಗದ ಕನ್ನಡಿಗರು ಸಹ ಮೈಸೂರು ಆಕಾಶವಾಣಿಯ ಗುಣಮಟ್ಟದ ಕಾರ್ಯಕ್ರಮವನ್ನು ಕೇಳಬಹುದು. ಚಾಮುಂಡಿ ಬೆಟ್ಟದಲ್ಲಿರುವ 10 ಕಿಲೋ ವ್ಯಾಟ್ ಸಾಮರ್ಥ್ಯದ ಪ್ರಸಾರ ಭಾರತೀಯ ಟ್ರಾನ್ಸ್‌ಮೀಟರ್ ಅನ್ನು ಕೆಲವು ಖಾಸಗಿ ಚಾನೆಲ್‌ಗಳು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಕೇಂದ್ರ ಸರ್ಕಾರದ ಸ್ವಾಧೀನದಲ್ಲಿರುವ ಆಕಾಶವಾಣಿ ಮತ್ತು ದೂರದರ್ಶನದ ಕಾರ್ಯಕ್ರಮಗಳನ್ನು ದೇಶದ ಮೂಲೆ ಮೂಲೆಗಳಿಗೂ ತಲುಪಿಸುವುದಾಗಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಮನೀಶ್ ತಿವಾರಿ ತಿಳಿಸಿದ್ದಾರೆ. ಅವರು ಇತ್ತೀಚೆಗೆ ಶಿವಮೊಗ್ಗದಲ್ಲಿ 10 ಕಿಲೋ ವ್ಯಾಟ್ ಸಾಮರ್ಥ್ಯದ ಆಕಾಶವಾಣಿ ಕೇಂದ್ರವನ್ನು ಉದ್ಘಾಟಿಸಿ, ಶಿವಮೊಗ್ಗದ ಸುತ್ತ ಮುತ್ತ ಸುಮಾರು 10 ಜಿಲ್ಲೆಗಳಿಗೂ ಆಕಾಶವಾಣಿಯ ಕಾರ್ಯಕ್ರಮಗಳು ಸಾರ್ವಜನಿಕರಿಗೆ ತಲುಪುವಂತೆ ಮಾಡಿದ್ದಾರೆ. ದೇಶದ ಮೊದಲ ಆಕಾಶವಾಣಿ ಮೈಸೂರು ಕೇಂದ್ರವು ತನ್ನ ಪ್ರಸಾರ ಸಾಮರ್ಥ್ಯ ವನ್ನು ಹೆಚ್ಚಿಸಿ ನೆರೆ ರಾಜ್ಯಗಳ ಕನ್ನಡಿಗರು ಮೈಸೂರು ಆಕಾಶವಾಣಿಯನ್ನು ಕೇಳುವಂತಾಗಲಿ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸಂಚಾರ ಹೆಚ್ಚಾದ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ

ಮಾನ್ಯರೆ,

ಮೈಸೂರಿನ ಬೋಗಾದಿ ಗದ್ದಿಗೆ ಜೋಡಿ ರಸ್ತೆಯಲ್ಲಿ ವಾಹನಗಳ ಸಂಚಾರ ಹೆಚ್ಚಾಗಿದ್ದರಿಂದ ದಾಸನಕೊಪ್ಪಲು ಬಸ್ ನಿಲ್ದಾಣದಲ್ಲಿ ಎರಡು ಕಡೆಯೂ ಒಂದು ತಿಂಗಳ ಹಿಂದೆ ಬ್ಯಾರಿಕೇಡ್ ಅಳವಡಿಸಿದ್ದುದ್ದರಿಂದ ಅಪಘಾತಗಳು ಸಂಭವಿಸುವುದು ಕಡಿಮೆಯಾಗಿತ್ತು. ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ವೇಗವಾಗಿ ಬಂದ ವಾಹನಗಳು ಒಂದು ವಾರದೊಳಗೆ ಹೊಡೆದುಕೊಂಡು ಹೋದ ಕಾರಣ ಬ್ಯಾರಿಕೇಡ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು ಇದುವರೆಗೂ ಅವುಗಳನ್ನು ಸಂಬಂಧಪಟ್ಟ ಇಲಾಖೆಯ ಸಿಬ್ಬಂದಿಗಳು ಸರಿಪಡಿಸದೇ ಇರುವುದರಿಂದ ಪುನಃ ಅಪಘಾತಗಳು ಸಂಭವಿಸುತ್ತಾ ಇವೆ. ಆದಷ್ಟು ಬೇಗ ಸಂಬಂಧಿಸಿದ ಇಲಾಖೆಯ ಸಿಬ್ಬಂದಿಗಳು ಬ್ಯಾರಿಕೇಡ್‌ಗಳನ್ನು ಸರಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು ಸೂಕ್ತ.

-ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ಮಹಿಳಾ ದಿನಾಚರಣೆಯಂದು ಮೆಚ್ಚುಗೆ ನುಡಿ ಸಾಕೆ...!



> "ಇಂದು ಪತ್ನಿಗೆ ಸಹಕಾರ ನೀಡುವ, ಬೆಂಬಲ ನೀಡುವ, ಸಹಾಯ ಮಾಡುವ, ಧೈರ್ಯ ತುಂಬುವ ಗಂಡಂದಿರಿಗೇನೂ ಕಡಿಮೆಯಿಲ್ಲ. ಈಗೀಗ ಬರುತ್ತಿರುವ ಸಿನಿಮಾ, ಜಾಹೀರಾತುಗಳಲ್ಲಿ ಗಮನಿಸಿರುತ್ತೀರಿ. Work From Home ಆಯ್ಕೆಮಾಡಿಕೊಂಡು ಮನೆ ಹಾಗೂ ಮಕ್ಕಳನ್ನು ನೋಡಿಕೊಂಡಿರುವ ಗಂಡಂದಿರಿದ್ದಾರೆ. ಅವರನ್ನೂ ಸಮಾಜ ಆಡಿಕೊಳ್ಳುವುದನ್ನು ಬಿಟ್ಟಿಲ್ಲ ಎನ್ನುವುದು ದುರಂತ. ಪರಸ್ಪರ ಅರ್ಥೈಸಿಕೊಂಡು, ಮಿತಿಗಳನ್ನು ಅರಿತುಕೊಂಡು, ಗೌರವದಿಂದ ನಡೆದುಕೊಂಡರೆ ಎಲ್ಲ ಸಂಬಂಧಗಳೂ ಹಸಿರಾಗಿರುತ್ತವೆ. ಆದರೆ ಅದು ಅಷ್ಟು ಸುಲಭವೂ ಅಲ್ಲ. ಲೆಕ್ಕಾಚಾರಗಳನ್ನು ಮೀರಿ ಮಾನವ ಸಂಬಂಧಗಳನ್ನು ಮೇಲಿರಿಸಿದರೆ ಒಂದು ಸುಂದರ ಲೋಕ ಸೃಷ್ಟಿಸಿಕೊಳ್ಳಬಹುದು."

ಮಹಿಳಾ ದಿನಾಚರಣೆ ಪ್ರಾರಂಭವಾಗಿದೆ. ಇನ್ನು ಸರಿ ಸುಮಾರು ಒಂದು ತಿಂಗಳು ಎಲ್ಲೆಡೆ ಮಹಿಳೆಯರ ಕುರಿತಾದ ಕಲರವವೇ. ಮರೆತು ಹೋಗಿರುವ, ಮರೆತಂತೆ ನಟಿಸುವ, ಲಕ್ಷ್ಯ ಕೊಡದ ಮಹಿಳೆಯರ ಕುರಿತ ವಿಚಾರಗಳು ಮುನ್ನೆಲೆಗೆ ಬರಲು ಬಹು ಪ್ರಶಸ್ತ ಸಮಯ ಇದು!

ನಮ್ಮ ನಮ್ಮ, ತಮ್ಮ ತಮ್ಮ ಜೀವನದಲ್ಲಿ ಇರುವ ಮಹಿಳೆಯರನ್ನೆಲ್ಲಾ ನೆನಪು ಮಾಡಿಕೊಂಡು ಕೊಲಾಜ್ ಮಾಡಿ, ವಿಡಿಯೋ ಮಾಡಿ ಸ್ಟೇಟಸ್‌ಗಳು, ಪೋಸ್ಟ್‌ಗಳನ್ನು ಹಾಕಿ ತಮ್ಮ ಒಳಗೊಳ್ಳುವಿಕೆಯನ್ನು ಸಾಬೀತುಮಾಡಿಕೊಳ್ಳುವ ಗಂಡಸರ ಪರದಾಟ ಪೀಕಲಾಟ ನೋಡಿದರೆ ವಿಷಾದ ವೆನಿಸುತ್ತದೆ. ಹಾಗಂತ ಮನಃಪೂರ್ವಕವಾಗಿ ಹರಸುವ ಹಾರೈಸುವ ಗಂಡಂದಿರು, ಅಣ್ಣ-ತಮ್ಮಂದಿರು, ಮಾವಂದಿರು, ಸ್ನೇಹಿತರು ಇಲ್ಲವೆಂದಲ್ಲ. ನಿಜವಾಗಿಯೂ ಅಂತಹ ವಿಚಾರಗಳನ್ನು ಮೌಲ್ಯಗಳನ್ನು ರೂಢಿಸಿಕೊಂಡಿರುವವರು ಈ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಶುಭ್ರ ಮನಸ್ಸಿನ ಕೆಲವರೂ ಹೃತ್ಪೂರ್ವಕವಾಗಿ ಹಾರೈಸುತ್ತಾರೆ. ಆದರೆ ಇಡೀ ವರ್ಷದಲ್ಲಿ ಇದೇ ದಿನಕ್ಕೆ ಕಾದು ನಾಟಕೀಯವಾಗಿ ಹರಸಿ ಹಾರೈಸಿ, ದಿನಕಳೆದು ಹೋಗುವುದರೊಳಗಾಗಿ ಮುಖವಾಡ ಕಿತ್ತೆಸೆಯುವ ಮಂದಿಯೇ ಬಹಳ ಎಂಬುದು ಎಲ್ಲರಿಗೂ ಗೊತ್ತು.

ನಾನು ಯಾವ ಋಣಾತ್ಮಕತೆಯನ್ನೂ ಹರಡಲು ಬಯಸುತ್ತಿಲ್ಲ. ಆದರೆ ಕಣ್ಣಿಗೆ ರಾಚುವ, ದಿನ ಬೆಳಗಾದರೆ ನೋಡುವ ಕೇಳುವ ಅಥವಾ ನೋಡಿರುವ ಕೇಳಿರುವ ವಿಚಾರಗಳು ನನ್ನನ್ನು ಹೀಗೊಂದು ಚಿಂತನೆಗೆ ದೂಡಿದವು.

ನಾನೇ ನೋಡಿರುವ ಒಂದಷ್ಟು ಮಹಿಳೆಯರ ಗೊಂದಲಗಳು, ಕಷ್ಟಗಳು, ಪಡಿಪಾಟಲುಗಳು ನನಗೆ ಅಚ್ಚರಿಯನ್ನು ಮೂಡಿಸಿವೆ.

ನನ್ನ ಗೆಳತಿಯೊಬ್ಬಳಿದ್ದಾಳೆ. ಚೆನ್ನಾಗಿಯೇ ಓದಿದ್ದಾಳೆ. ಆದರೆ ಯಾವ ಕೆಲಸಕ್ಕೂ ಹೋಗುವುದಿಲ್ಲ. ಗಂಡ ಚೆನ್ನಾಗಿಯೇ ಸಂಪಾದಿಸುತ್ತಾರಾದ್ದರಿಂದ ಮನೆ ನೋಡಿಕೊಂಡು ಇದ್ದಾಳೆ. ಹಾಗಂತ ಆರಾಮಾಗಿ ಇದ್ದಾಳೆ ಎಂದು ಹೇಳಲಾಗುವುದಿಲ್ಲ!

ಮನೆಯಲ್ಲಿ ಅತ್ತೆ-ಮಾವ ಇದ್ದಾರೆ. ಹಿಂಸೆ ಕೊಡುವವರೇನಲ್ಲ, ಒಳ್ಳೆಯವರೇ. ಆದರೆ ಇವಳು ಮಾಡಿದ ಏನೂ ಅವರಿಗೆ ಇಷ್ಟವಾಗುವುದಿಲ್ಲ. ಇವಳು ಚಟ್ನಿಯನ್ನು ಮಿಕ್ಸಿಯಲ್ಲಿ ರುಬ್ಬಿದರೆ ಆಗದು, ಒರಳಿನಲ್ಲಿಯೇ ರುಬ್ಬಬೇಕು. ಅನ್ನವಾಗಲೀ, ಸಾರು ಹುಳಿ, ಪಲಾವ್, ಪಲ್ಯ ಇತ್ಯಾದಿಗಳನ್ನು ಕುಕ್ಕರ್‌ನಲ್ಲಿ ಮಾಡುವ ಹಾಗಿಲ್ಲ. ಒಲೆಯ ಮುಂದೆ ನಿಂತು ಮಂದವಾದ ಉರಿಯಲ್ಲಿಯೇ ಹದವಾಗಿ ಬೇಯಿಸಿ ಮಾಡಬೇಕು. ಅಂಗಡಿಯಲ್ಲಿ ಸಿಗುವ ಯಾವುದೇ ಮಸಾಲೆ ಪುಡಿಗಳನ್ನು ಬಳಸುವ ಹಾಗಿಲ್ಲ. ಮನೆಯಲ್ಲಿಯೇ ಹುರಿದು ಮಾಡಬೇಕು. ಸದ್ಯ ಕುಟ್ಟು ಎನ್ನುವುದಿಲ್ಲ! ಬಟ್ಟೆಯನ್ನು ವಾಷಿಂಗ್ ಮಷಿನ್‌ಗೆ ಹಾಕುವ ಹಾಗಿಲ್ಲ, ಡಿಷ್ ವಾಷರ್ ಬಳಸುವ ಹಾಗಿಲ್ಲ ಹಾಗಂತ ಎಲ್ಲವನ್ನೂ ಅವಳ ಅತ್ತೆ-ಮಾವನೇ ಕೊಂಡು ತಂದಿದ್ದಾರೆ, ಮನೆಯ ಶೋಭೆ ಹೆಚ್ಚಿಸಲು ಮಾತ್ರ, ಬಳಸುವುದಕ್ಕಲ್ಲ.

ಅವಳು ಅವಿಧೇಯಳಲ್ಲ. ಜಗಳಗಂಟಿಯೂ ಅಲ್ಲ, ಆಧುನಿಕ ಕಾಲದವಳು ಅಷ್ಟೇ. ಇರುವೆಲ್ಲಾ ಸಾಧನಗಳನ್ನು ಬಳಸಿಕೊಂಡು ಜೀವನವನ್ನು ಸುಲಭವಾಗಿಸಿಕೊಂಡು ಉತ್ತಮ ರೀತಿಯಲ್ಲಿ ಜೀವನ ಸಾಗಿಸಬೇಕೆಂಬ ಪುಟ್ಟ ಕನಸು ಹೊತ್ತವಳು. ಇದು ಮಹಾಪರಾಧವೇ?

ಇದಕ್ಕೆಲ್ಲ ನಾಜೂಕಾಗಿಯೇ ಕಟಕಿಯಾಡುವ ಅತ್ತೆ ಮಾವ ಸೂಕ್ಷ್ಮವಾಗಿ ಅವಳನ್ನು ದಿನವೂ ನೋಯಿಸುತ್ತಿರುತ್ತಾರೆ. ಗಂಡನೂ, ಹೇಗಿದ್ದರೂ ಮನೆಯಲ್ಲೇ ಇರುತ್ತೀಯಲ್ಲ ಮಾಡಿಬಿಡು, ರಗಳೆ ಯಾಕೆ ಎನ್ನುತ್ತಾನೆ. ಇಲ್ಲಿ ಯಾರನ್ನು ದೂಷಿಸಬೇಕು?

ಕಟಕಿಯಾಡುವ ಅತ್ತೆ ಮಾವರನ್ನೇ? ಬಿಡುವಿನ ವೇಳೆ ಸಾಕಷ್ಟು ಇದ್ದರೂ ಕೆಲಸ ಕೈಯ್ಯಾರೆ ಮಾಡದ ಸೊಸೆಯನ್ನೇ? ಇಲ್ಲಿ ಬದಲಾಗದ ಅತ್ತೆ-ಮಾವನ ಮನೋಭಾವವನ್ನು ಅಪರಾಧಿಯನ್ನಾಗಿ ಮಾಡಬೇಕಷ್ಟೆ. ಅತ್ತೆ ತನ್ನ ಕಾಲದ ಕತೆಯನ್ನೇ ಹೇಳುತ್ತಾ ಕುಳಿತರೆ ಏನು ಪ್ರಯೋಜನ? ಕಾಲ ಬದಲಾಗಿದೆ. ತನ್ನ ಕಾಲದಲ್ಲಿ ಇಲ್ಲದಿದ್ದ ಟಿವಿ, ಫ್ಯಾನು, ಏಸಿ ಕಾರುಗಳಿಗೆ ಹೊಂದಿಕೊಂಡ ಅತ್ತೆ ಮಿಕ್ಸಿ ವಾಷಿಂಗ್ ಮಷೀನ್‌ಗಳಿಗೆ ಹೊಂದಿಕೊಳ್ಳಲೇಬೇಕು. ಇದು ಆಧುನಿಕ ರೀತಿಯ ಅತ್ತೆ ಕಾಟ!

ಇದು ಒಂದು ಥರದ ಸಮಸ್ಯೆಯಾದರೆ, ಇನ್ನು ಕೆಲವು ಮನೆಗಳಲ್ಲಿ ಗಂಡ ಹೆಂಡತಿ ಮಕ್ಕಳು ಮಾತ್ರ ಇರುತ್ತಾರೆ. ಗಂಡ-ಹೆಂಡತಿ ಇಬ್ಬರೂ ದುಡಿಯುವ ಮನೆಯಲ್ಲಿಯೂ ಹೆಂಡತಿಯೇ ಎಲ್ಲ ಕೆಲಸಗಳನ್ನೂ ಮಾಡಬೇಕೆಂದು ನಿರೀಕ್ಷಿಸುವ ಗಂಡರಿದ್ದಾರೆ. ಕೆಲಸದವಳಿದ್ದಾಳೆ ಇನ್ನೇನು ಕಷ್ಟ ಎಂದುಕೊಳ್ಳುವ ಗಂಡಂದಿರನೇಕರಿಗೆ, ಕಸ, ಮುಸುರೆ, ಬಟ್ಟೆ ಅಷ್ಟೇ ಮನೆಗೆಲಸ ಎನ್ನುವ ಗಟ್ಟಿ ನಂಬಿಕೆ ಬಂದುಬಿಟ್ಟಿದೆ.

ಹಾಕಿದಷ್ಟು ಪಾತ್ರೆ ಬಟ್ಟೆ ತೊಳೆದು, ಕಂಡಷ್ಟು ಕಸ ಗುಡಿಸಿ ಸಾರಿಸಿ ಹೋಗುವ ಕೆಲಸದವಳಿಂದಲೇ ಮನೆ ನಡೆಯುತ್ತದೆ ಎಂದುಕೊಳ್ಳುವ ಗಂಡಂದಿರಿಗೆ, ಹೆಂಡತಿ ಕುಟುಂಬವನ್ನು ಹೇಗೆ ಒಟ್ಟಾಗಿ ಇಡುತ್ತಾಳೆ, ಹಿನ್ನೆಲೆಯಲ್ಲಿ ಅದಕ್ಕೆಷ್ಟು ತಾಳ್ಮೆಬೇಕು. ಒಪ್ಪ ಮಾಡಬೇಕು ಎಂಬ ಅರಿವೇ ಇರುವುದಿಲ್ಲ.

ಊಟಕ್ಕೆ ತಿಂಡಿಗೆ ಟೇಬಲ್ಲಿಗೆ ಬಂದು ಕೂರುವ ಗಂಡನಿಗೆ ಒಂದು ಲೋಟ ನೀರು ತಂದಿಟ್ಟುಕೊಂಡರೆ ಹೆಂಡತಿಗೆ ಎಷ್ಟೋ ಕೆಲಸ ಹಗುರ ಎನ್ನುವ ಪರಿಜ್ಞಾನ ಇರುವುದಿಲ್ಲ. ಲಂಚ್ ಬ್ಯಾಗ್‌ಗೆ ಊಟದ ಡಬ್ಬಿಗೆ ರುಚಿಕರ ಅಡುಗೆ ಹಾಕುವ ಹೆಂಡತಿಗೆ, ನೀರಿನ ಬಾಟಲ್ ತಾನೇ ತುಂಬಿಕೊಂಡರೆ ಒಂದಷ್ಟು ಉಸಿರು ಬಿಡುವ ಹಾಗಾಗುತ್ತದೆ ಎನ್ನುವುದು ಹೊಳೆಯುವುದೇ ಇಲ್ಲ. ಇವೆಲ್ಲಾ ಕೆಲಸದ ವಿಚಾರ ಆದರೆ, ದುಡಿಯುವ ಹೆಂಗಸಿಗೆ ಮನೆಯಲ್ಲಿ ಎಷ್ಟೋ ಬಾರಿ Emotional Support ಅಂದರೆ ಮಾನಸಿಕ ಬೆಂಬಲವೂ ಸಿಗುವುದಿಲ್ಲ. ಹುಷಾರು ತಪ್ಪಿದರೆ ವಿಚಾರಿಸಿ ಡಾಕ್ಟರ ಬಳಿ ಕರೆದೊಯ್ಯುವ ಸೌಜನ್ಯವೂ ಕೆಲ ಗಂಡಸರಿಗಿರುವುದಿಲ್ಲ. ದುಡಿಯುತ್ತಾಳೆ, ಅವಳನ್ನು ಅವಳು ನೋಡಿಕೊಳ್ಳುತ್ತಾಳೆ ಎಂದು ತಮಗೆ ಸಂಬಂಧ ಇಲ್ಲದವರಂತೆ ಇದ್ದು ಬಿಡುತ್ತಾರೆ. ಕಲ್ಲು ಮನಸು ಮಾಡಿಕೊಳ್ಳುತ್ತಾರೆ ಎನ್ನುವುದೋ ಅಥವಾ ಆ ಅಂತಃಕರಣವೇ ಇಲ್ಲದ ಕಲ್ಲುಗಳು ಎನ್ನುವುದೋ? ದುಡಿದು ಬಂದ ಹೆಂಡತಿಗೂ ಬಳಲಿಕೆ ಆಗಿರುತ್ತದೆ ಎಂಬುದನ್ನು ಅರಿವಿಗೆ ತಂದುಕೊಳ್ಳದೆ ಅವಳು ಬಂದು ನೀಡುವ ತನಕ ಊಟ ತಿಂಡಿ ಮಾಡದಿರುವ ಎಷ್ಟೋ ಜನರನ್ನು ನಾನು ನೋಡಿದ್ದೇನೆ. ಅವಳು ಬಡಿಸದಿದ್ದರೆ ಊಟ ಮಾಡಿದ ಹಾಗೆಯೇ ಆಗುವುದಿಲ್ಲ, ಕಾಫಿ ಕುಡಿದ ಹಾಗೆಯೇ ಆಗುವುದಿಲ್ಲ? ಎಂಬ ಒಗ್ಗರಣೆ ಒಬ್ಬೊಬ್ಬರದಾದರೆ, ಏನು ಅಷ್ಟೂ ಮಾಡಲು ಆಗುವುದಿಲ್ಲವ? ಹೆಂಗಸರಿಗೆ ಇವೆಲ್ಲಾ ಹೇಳಿಕೊಡಬೇಕೆ? ಎನ್ನುವ ಬಹುತೇಕ ಕರು! Multi Tasking ಎಂಬ ಬಿರುದನ್ನು ನೀಡಿ ಅವಳನ್ನು Emotional Blackmail ಮಾಡಿ ಕೆಲಸ ತೆಗೆಯುವುದೂ ಒಂದು ಗಂಡುಕಲೆ. ಹಾಗಂತ ಹೆಂಗಸರು ಮನೆಯ ಕೆಲಸ ಮಾಡದೆ, ಕುಟುಂಬದವರ ಯೋಗಕ್ಷೇಮ ನೋಡದೆ ಸಂವೇದನಾಶೀಲತೆಯನ್ನು ಕಳೆದುಕೊಂಡು ಸ್ವಾರ್ಥಿಗಳಾಗಬೇಕೆಂದಲ್ಲ. ಕಾಲ ಬದಲಾಗಿದೆ. ಈಗ ಮಹಿಳೆ ಆಚೆಯೂ ದುಡಿಯುತ್ತಿದ್ದಾಳೆ. ಮನೆಯ ಜೊತೆ ಅವಳ ಪ್ರಪಂಚಕ್ಕೆ ಮತ್ತಷ್ಟು ಲೋಕಗಳು ಸೇರಿವೆ. ಮತ್ತು After All ಅವಳೂ ಮನುಷ್ಯಳೇ. ಅವಳ ಸಾಮರ್ಥ್ಯ, ತಾಳುಕೊಳ್ಳುವಿಕೆಗೂ ಒಂದು ಮಿತಿಯಿದೆ ಎಂದು ಹೊರಗೆ ದುಡಿದು ಬರುವ ಗಂಡಸಿಗೆ ಅರ್ಥವಾಗುವುದು ಯಾವಾಗ?

ಹಿಂದೆಲ್ಲಾ ಗಂಡಸರು ಹೊಡೆದು ಬಡಿದು ಮಾಡುತ್ತಿದ್ದರು ಎಂದು ಕೇಳಿದ್ದೇವೆ. ಈಗಲೂ ಅದು ನಿಂತಿಲ್ಲ. ಕಡಿಮೆಯಾಗಿದೆ ಎನ್ನಬಹುದಷ್ಟೇ. ಈಗ ಹೊಡೆದು ಬಡಿದು ಮಾಡದೆ, ಬೆಳೆಯುತ್ತಿರುವ ಹೆಣ್ಣನ್ನು ಮಟ್ಟ ಹಾಕಬೇಕೆಂದು ಅವಳನ್ನು ಮಾನಸಿಕವಾಗಿ ಕುಗ್ಗಿಸುವ ವ್ಯವಸ್ಥಿತ ಯೋಜನೆಯನ್ನು ಗಂಡು ಹಾಕಿಕೊಳ್ಳುತ್ತಿದ್ದಾನೆ ಎಂಬುದು ಸತ್ಯ. ಹೊರಗಿನ ಪ್ರಪಂಚಕ್ಕೆ ಉದಾರಿಯಾಗಿ ತೋರಿಸಿಕೊಳ್ಳುವ ಚಪಲದ ಜೊತೆಗೆ, ಗಂಡು ಎಂಬ ಹಮ್ಮು ಬಿಡಲು ತಯಾರಿಲ್ಲದ ಧೂರ್ತತೆ ಒಂದು ಕಡೆ.

ಹಾಗಂತ ಮಹಿಳೆಯರು ಇನ್ನೂ ಮುಗ್ಧರಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ ಎಂಬುದೂ ಸತ್ಯವಲ್ಲ. ಮಹಿಳೆಯರ ಶೋಷಣೆಯನ್ನು ತಡೆಯಬೇಕೆಂದು ಹುಟ್ಟು ಹಾಕಿದ ಕಾನೂನುಗಳ ದುರ್ಬಳಕೆ ಮಾಡಿಕೊಂಡು ಗಂಡಸರನ್ನು ಶೋಷಿಸಿ ವಿಕೃತಿ ಮೆರೆಯುತ್ತಿರುವ ಹೆಂಗಸರ ಸಂಖ್ಯೆ ಕಡಿಮೆಯಿಲ್ಲ. ಈ ರೀತಿಯ ಕೇಸ್‌ಗಳ ಹೆಚ್ಚಳ ಆತಂಕ ಮೂಡಿಸುತ್ತಿದೆ. ಮದುವೆಯಾದ ಗಂಡಿನ ಕುಟುಂಬದ ಎಲ್ಲ ಸದಸ್ಯರ ಮೇಲೆಯೂ ಕೇಸ್ ಹಾಕಿ ಮಾನಸಿಕವಾಗಿ ಆರ್ಥಿಕವಾಗಿ ಕುಗ್ಗಿಸಿ ಆನಂದ ಪಡುತ್ತಿದ್ದಾರೆ.

ನಾನೇ ನೋಡಿದ ಒಂದು ಕುಟುಂಬದಲ್ಲಿ, ಹುಡುಗಿ ಚೆನ್ನಾಗಿ ಓದಿದ್ದಳು. ಆರ್ಥಿಕವಾಗಿ ಸ್ಥಿತಿವಂತಳಲ್ಲ. ಆದರೆ ಓದಿದ ಹುಡುಗಿ ಸಾಮರಸ್ಯದಿಂದ ಇರುತ್ತಾಳೆ ಎಂದು ನಂಬಿ ಮದುವೆ ಮಾಡಿಕೊಂಡರು. ನಂತರ ಆ ಹುಡುಗಿ ಮದುವೆಯಾದ ಕುಟುಂಬವನ್ನು ಇನ್ನಿಲ್ಲದಂತೆ ಕಾಡಿದಳು. ಮಗುವನ್ನು ಮುಂದಿಟ್ಟುಕೊಂಡು ಗಂಡ, ಅತ್ತೆ, ಮಾವನ ಜೀವನವನ್ನು ನರಕ ಸದೃಶ ಮಾಡಿಬಿಟ್ಟಳು. ಎಲ್ಲಿಯವರೆಗೆ ಎಂದರೆ, ಅತ್ತೆ ಮಾವ ಗಂಡನಿಗೆ ಬುದ್ಧಿ ಕಲಿಸಲು ಮಗುವನ್ನು ಹಿಂಸಿಸಲು ಪ್ರಾರಂಭಿಸಿದಳು. ಮಗುವನ್ನು ಗಾಳವಾಗಿ ಬಳಸಿ ತನ್ನ ಪಾರಮ್ಯವನ್ನು ಮೆರೆಯಲು ಶುರುವಿಟ್ಟುಕೊಂಡಳು. ಆ ದಿನಗಳಲ್ಲಿ ಆ ಮೂವರೂ ಮತ್ತು ಆ ಮಗು ಅನುಭವಿಸಿದ ಯಾತನೆ ಅಷ್ಟಿಷ್ಟಲ್ಲ.

ಇಂತಹ ಸಾಕಷ್ಟು ಘಟನೆಗಳು ಸಂಭವಿಸುತ್ತಿರುವುದರಿಂದ ಎಚ್ಚೆತ್ತುಕೊಂಡಿರುವ ಪೋಲೀಸರು ಈಗೀಗ ಹೆಂಡತಿ ದೂರು ಕೊಟ್ಟ ತಕ್ಷಣ ಕಣ್ಣುಮುಚ್ಚಿ ಕ್ರಮ ತೆಗೆದುಕೊಳ್ಳದೆ, ವಿಷಯ ಪರಾಮರ್ಶೆ ಮಾಡುತ್ತಾರೆ. ನಾನು ಮೇಲೆ ಹೇಳಿದ ಕೇಸಿನಲ್ಲಿಯೂ ಹಾಗೆಯೇ ಆಯಿತು. ಸಂದರ್ಭವನ್ನು ಕೂಲಂಕುಷವಾಗಿ ಮೊದಲು ಅಭ್ಯಸಿಸಿದ ಪೋಲಿಸರು, ಅತ್ತೆ ಮಾವ, ಗಂಡನ ಬದಲು ಹೆಂಡತಿಗೇ ಖಡಕ್ ಎಚ್ಚರಿಕೆ ಕೊಟ್ಟು ಹೇಗೋ ತೇಪೆ ಹಾಕಿ ಕಳಿಸಿದ್ದಾರೆ.

ಶತಮಾನಗಳಿಂದ ಶೋಷಣೆಗಳನ್ನೇ ನೋಡಿದ್ದ ಮಹಿಳೆ ಈಗ ದೊರೆತಿರುವ ಸ್ವಾತಂತ್ರ್ಯ ಸಬಲತೆ ಗೌರವಗಳನ್ನು ಎರಡು ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದಾಳೆ. ಒಂದೆಡೆ ನೆಲದಿಂದ ಬಾನಿಗೆ ಹಾರಿ, ಆಕಾಶವನ್ನು ತನ್ನದಾಗಿಸಿಕೊಂಡು ಸಾಧನೆಗಳ ಮೈಲುದ್ದ ಪಟ್ಟಿಯ ಉದ್ದವನ್ನು ಹೆಚ್ಚಿಸುತ್ತಲೇ ಇದ್ದಾಳೆ. ಅಸೀಮ ಸಾಧಕಿಯರ ಹೆಸರುಗಳನ್ನು ನಾನಿಲ್ಲಿ ಹೇಳುವ ಅಗತ್ಯ ಇಲ್ಲ.

ಮತ್ತೊಂದೆಡೆ ದೊರೆತಿರುವ ಸ್ವಾತಂತ್ರ್ಯವನ್ನು ಸ್ವೇಚ್ಛೆಯಾಗಿ ಬಳಸುತ್ತ, ಮಾನವೀಯತೆ, ಸಹೃದಯತೆ, ಕರುಣೆ, ಜವಾಬ್ದಾರಿಗಳನ್ನು ಮರೆತು ಕ್ರೌರ್ಯ ಮೆರೆಯುತ್ತಿದ್ದಾಳೆ.

ಮತ್ತೊಂದೆಡೆ ಸಂವಿಧಾನ ಕೊಡ ಮಾಡಿರುವ ಯಾವುದೇ ಹಕ್ಕು ರಕ್ಷಣೆಗಳ ಅರಿವೇ ಇಲ್ಲದೆ ಇನ್ನೂ ಅತ್ಯಂತ ಅಮಾನವೀಯವಾಗಿ ಅತ್ಯಾಚಾರ ಶೋಷಣೆಗಳಿಗೆ ಒಳಗಾಗುತ್ತಿದ್ದಾಳೆ ಎಂಬುದೂ ಕಟುಸತ್ಯ. ಹೆಣ್ಣು ಭ್ರೂಣ ಹತ್ಯೆ ನಿಂತಿಲ್ಲ ಎಂಬುದನ್ನು ನಾವು ಮರೆಯಬಾರದು.

ಯಾವುದು ಅತಿರೇಕವಾದರೂ ಸಮಾಜದಲ್ಲಿನ ಸಮತೋಲನ ಹಾಳಾಗುತ್ತದೆ. ಅದರ ಬಗ್ಗೆ ಗಮನ ಕಡಿಮೆಯಾಗಿರುವುದೇ ಈ ಎಲ್ಲ ಘೋರಗಳಿಗೆ ಕಾರಣ. ಗಂಡಾಗಲೀ ಹೆಣ್ಣಾಗಲೀ ಇಬ್ಬರಿಗೂ ದೇವರು ಪ್ರತ್ಯೇಕವಾಗಿ ಸಾಮರ್ಥ್ಯಗಳನ್ನು ಕೊಟ್ಟಿದ್ದಾನೆ. ಗಂಡಸಿಗೆ ಕಠಿಣತೆ, ಧೈರ್ಯ, ಕೆಚ್ಚು, ಶೌರ್ಯ ಸ್ವಲ್ಪ ಹೆಚ್ಚಾಗಿಯೇ ಕೊಟ್ಟಿದ್ದಾನೆ. ಹೆಣ್ಣಿನಲ್ಲಿಲ್ಲವೇ ಆ ಗುಣಗಳು ಎಂದು ಜಗಳಕ್ಕೆ ಬೀಳ ಬೇಡಿ ಮತ್ತೆ ಹಾಗೆಯೇ ಗಂಡಿಗೂ ಹೆಂಗರುಳು, ಕರುಣೆ, ಮೃದು ಮನಸ್ಸುಗಳನ್ನೂ ಕೊಟ್ಟಿದ್ದಾನೆ. ಮಕ್ಕಳನ್ನು ಹೆರುವ ಶಕ್ತಿ ಹೆಣ್ಣಿಗೆ ಮಾತ್ರ! ಹೀಗೆ ಒಬ್ಬೊಬ್ಬರಿಗೆ ಒಂದೊಂದು ಪ್ರತ್ಯೇಕ ವಿಶೇಷ ಸಾಮರ್ಥ್ಯ ಕೊಟ್ಟಿದ್ದಾನೆ. ಆದರೆ ಹೆಣ್ಣಿಗೇ ಜಾಸ್ತಿ ಮತ್ತು ಅವಳು ಎರಡೂ ಪಾತ್ರಗಳನ್ನು ನಿರ್ವಹಿಸಬಲ್ಲಳು ಎಂಬುದು ಸರ್ವವಿಧಿತ. ಹೆಣ್ಣಿಲ್ಲದ ಮನೆ ಎಂದಿಗೂ ಕಳೆಕಳೆಯಾಗಿರಲು ಸಾಧ್ಯವಿಲ್ಲ. ಗಂಡು-ಹೆಣ್ಣು ಇಬ್ಬರ ಬದುಕೂ ಮತ್ತೊಬ್ಬರ ವಿನಃ ಅಪೂರ್ಣ.

ಹಾಗಿರುವಾಗ ಇಬ್ಬರೂ ಸಾಮರಸ್ಯದಿಂದ ಬದುಕುವುದು ಬಿಟ್ಟರೆ ಬೇರೆ ಆಯ್ಕೆ ಇಲ್ಲವೇ ಇಲ್ಲ. ಗಂಡಸಿನ ಅಹಂ ಮೇಲುಗೈಯಾಗಿದ್ದ ಕಾಲವೊಂದಿತ್ತು ಆಗ ಹೆಣ್ಣಿನ ಶೋಷಣೆಯಾಗಿತು. ಈಗ ಹೆಣ್ಣಿನದು ಮೇಲುಗೈಯಾಗಿದೆ. ಹಾಗೆಂದು ಗಂಡಸು ಜಾತಿಯ ಮೇಲೆ ಸೇಡು ತೀರಿಸಿಕೊಳ್ಳಬೇಕು ಎಂದರೆ ಇಡೀ ಸಮಾಜವೇ ವಿಘಟಿತವಾಗುತ್ತದೆ.

ಇಂದು ಪತ್ನಿಗೆ ಸಹಕಾರ ನೀಡುವ, ಬೆಂಬಲ ನೀಡುವ, ಸಹಾಯ ಮಾಡುವ, ಧೈರ್ಯ ತುಂಬುವ ಗಂಡಂದಿರಿಗೇನೂ ಕಡಿಮೆಯಿಲ್ಲ. ಈಗೀಗ ಬರುತ್ತಿರುವ ಸಿನಿಮಾ ಮತ್ತು ಜಾಹೀರಾತುಗಳಲ್ಲಿ ಅದನ್ನು ಗಮನಿಸಿರುತ್ತೀರಿ. Work From Home ಆಯ್ಕೆಯನ್ನು ಮಾಡಿಕೊಂಡು ಮನೆ ಹಾಗೂ ಮಕ್ಕಳನ್ನು ನೋಡಿಕೊಂಡಿರುವ ಗಂಡಂದಿರಿದ್ದಾರೆ. ಅವರನ್ನೂ ಸಮಾಜ ಆಡಿಕೊಳ್ಳುವುದನ್ನು ಬಿಟ್ಟಿಲ್ಲ ಎನ್ನುವುದು ದುರಂತ. ಪರಸ್ಪರ ಅರ್ಥೈಸಿಕೊಂಡು, ಮಿತಿಗಳನ್ನು ಅರಿತುಕೊಂಡು, ಗೌರವದಿಂದ ನಡೆದುಕೊಂಡರೆ ಎಲ್ಲ ಸಂಬಂಧಗಳೂ ಹಸಿರಾಗಿರುತ್ತವೆ. ಆದರೆ ಅದು ಅಷ್ಟು ಸುಲಭವೂ ಅಲ್ಲ. ಲೆಕ್ಕಾಚಾರಗಳನ್ನು ಮೀರಿ ಮಾನವ ಸಂಬಂಧಗಳನ್ನು ಮೇಲಿರಿಸಿದರೆ ಒಂದು ಸುಂದರ ಲೋಕ ಸೃಷ್ಟಿಸಿಕೊಳ್ಳಬಹುದು.

ಮಹಿಳಾ ದಿನಾಚರಣೆ ಈ ಸಂದರ್ಭದಲ್ಲಿ, ಸ್ತ್ರೀ ಸಂಬಂಧಿತ ನೂರಾರು ವಿಚಾರಗಳಲ್ಲಿ ಮೇಲ್ನೋಟಕ್ಕೆ ಕಾಣಸಿಗುವ ಒಂದೆರಡನ್ನಷ್ಟೇ ನಾನಿಲ್ಲಿ ಹೇಳಲು ಸಾಧ್ಯವಾಯಿತು.. ಇನ್ನೂ ನೂರಾರು ಸೂಕ್ಷ್ಮ ವಿಚಾರಗಳಿವೆ. ಸಂದರ್ಭ ಮತ್ತೆ ಒದಗಿದಾಗ ಚರ್ಚೆ ಮಾಡಲೇಬೇಕು. ನೀವೂ ಏನೇನೆಂದು ಯೋಚಿಸುತ್ತಿರಿ. ಸದ್ಯಕ್ಕೆ ಎಲ್ಲರಿಗೂ ಮಹಿಳಾ ದಿನಾಚರಣೆ ಶುಭಾಶಯಗಳು.

ತಿಲಕ್‌ನಗರದ ಅತ್ಯಂತ ಹಳೆಯ ಸರ್ಕಾರಿ ಶಾಲೆ ಉಳಿವಿಗೆ ಆಗ್ರಹಿಸಿ ಸಾರ್ವಜನಿಕರ ಪ್ರತಿಭಟನೆ

ಮೈಸೂರು, ಮಾ.11(ಎಂಕೆ)- ಮೈಸೂರಿನ ಪುಲಕೇಶಿ ರಸ್ತೆಯ ತಿಲಕ್ ನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಳಿಸುವಂತೆ ಆಗ್ರಹಿಸಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳು, ಪೋಷಕರು ಸೇರಿದಂತೆ ಜಮಾವಣೆಗೊಂಡ ನೂರಾರು ಮಂದಿ, ಸರ್ಕಾರಿ ಶಾಲೆಯನ್ನು ಉಳಿಸುವಂತೆ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಮಹಾರಾಜರು ನೀಡಿರುವ ಕೊಡುಗೆಗಳಲ್ಲಿ ಒಂದಾಗಿರುವ ತಿಲಕ್‌ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 60ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದರೂ ಕೈಲಾಸಪುರಂನಲ್ಲಿರುವ ಸರ್ಕಾರಿ ಶಾಲೆಯೊಂದಿಗೆ ಸೇರ್ಪಡೆ ಮಾಡುವುದು ಸರಿಯಲ್ಲ. ಇದರಿಂದ ಸ್ಥಳೀಯ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದು ಮಾತ್ರವಲ್ಲದೆ ಒಡೆಯರ ಕೊಡುಗೆಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.



ಮೈಸೂರಿನ ಪುಲಕೇಶಿ ರಸ್ತೆಯ ತಿಲಕ್‌ನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಳಿಸುವಂತೆ ಆಗ್ರಹಿಸಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ರಂಗಸ್ವಾಮಿ ಮಾತನಾಡಿ, ಮೈಸೂರು ಒಡೆಯರು 1936ರಲ್ಲಿ ಇಂಗ್ಲೆಂಡ್ ಮೂಲದ ಸಂಸ್ಥೆಯೊಂದಕ್ಕೆ ಶಾಲೆಯ ಜವಾಬ್ದಾರಿ ನೀಡಿ, ಕಾರ್ಯಾರಂಭ ಮಾಡಲಾಗಿತ್ತು. ಸ್ವಾತಂತ್ರ್ಯ ನಂತರ ಸರ್ಕಾರದಿಂದಲೇ ಶಾಲೆಯನ್ನು ನಡೆಸಲಾಗುತ್ತಿದೆ. ಆದರೆ, 1985ರಲ್ಲಿ ಅಂದಿನ ಶಾಲಾ ಮುಖ್ಯ ಶಿಕ್ಷಕರೊಬ್ಬರು ಇಲ್ಲಿನ ಕ್ರೈಸ್ತ ಸಂಸ್ಥೆಯೊಂದರಿಂದ ಶಾಲಾ ಕಟ್ಟಡವನ್ನು ಬಾಡಿಗೆಗೆ ಪಡೆದಿದ್ದು, ಪ್ರತೀ ತಿಂಗಳು ಬಾಡಿಗೆ ನೀಡುವುದಾಗಿ ಪತ್ರದಲ್ಲಿ ಬರೆದುಕೊಟ್ಟಿದ್ದಾರೆ. ಇದನ್ನೇ ಆಧಾರವಾಗಿಟ್ಟುಕೊಂಡಿರುವ ಕ್ರೈಸ್ತ ಸಂಸ್ಥೆ ಶಾಲೆಯ ಅಭಿವೃದ್ಧಿಗೆ ಅಡ್ಡಗಾಲಿಟ್ಟಿದ್ದು, ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಇದೆಲ್ಲದರ ನಡುವೆ ರಾಜ್ಯ ಸರ್ಕಾರ ಶಾಲೆಯನ್ನು ಮುಚ್ಚಲು ಮುಂದಾಗಿರುವುದು ಖಂಡನೀಯ ಎಂದು ಕಿಡಿಕಾರಿದರು.

ಸರ್ವ ಶಿಕ್ಷಣ ಅಭಿಯಾನದಡಿ ಶಾಲೆಯ ಅಭಿವೃದ್ಧಿಗಾಗಿ ನೀಡಿದ ಅನುದಾನದಲ್ಲಿ ಗುದ್ದಲಿಪೂಜೆ ನಡೆಸಲು ಮುಂದಾದಾಗ ಬಾಡಿಗೆ ಪತ್ರ ಬರೆಸಿಕೊಂಡಿರುವ ಕ್ರೈಸ್ತ ಸಂಸ್ಥೆ ತಡೆದರೆ, ಮತ್ತೊಂದೆಡೆ 2015 ರಿಂದಲೂ ಶಾಲೆಯನ್ನು ಮುಚ್ಚಿ ಬೇರೆ ಶಾಲೆಯೊಂದಿಗೆ ಸೇರ್ಪಡೆ ಮಾಡಲು ಪ್ರಯತ್ನಗಳು ನಡೆಯುತ್ತಲೇ ಇವೆ. ಇದೆಲ್ಲದರ ನಡುವೆ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ತಿಲಕ್‌ನಗರದ ಹೃದಯ ಭಾಗದಲ್ಲಿರುವ ಈ ಸರ್ಕಾರಿ ಶಾಲೆಯನ್ನು ಉಳಿಸಬೇಕು. ಮಧ್ಯಮ ಹಾಗೂ ಬಡವರೆ ಹೆಚ್ಚಾಗಿರುವ ತಿಲಕ್‌ನಗರದ ಈ ಶಾಲೆಯನ್ನು ಮುಚ್ಚಿದರೆ ಇಲ್ಲಿನ ಮಕ್ಕಳಿಗೆ ತೀವ್ರ ತೊಂದರೆಯಾಗಲಿದೆ ಎಂದು ತಿಳಿಸಿದರು.

ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ನಂದಕುಮಾರ್ ಸೇರಿದಂತೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಮೈಸೂರು ಪ್ರವಾಸ



ಮೈಸೂರು, ಮಾ.11(ಎಂಕೆ) ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮಿ ಚೌಧರಿ ಮಾ.13 ಮತ್ತು 14ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.


ಮಾ.13ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ವಿಭಾಗೀಯ ಆಯುಕ್ತರ ಕಚೇರಿಯ ಚಾಮುಂಡೇಶ್ವರಿ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಜನ್ ಸುನ್ವಾಯಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ರಾತ್ರಿ 8 ಗಂಟೆಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಭಾರತ್ ಆಸ್ಪತ್ರೆ ಅಂಡ್ ಆಂಕೊಲಜಿ ಸಂಸ್ಥೆಯ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ನಡೆಯುವ 'ಮಿಡ್ನೈಟ್ ವಾಕಥಾನ್'ನಲ್ಲಿ ಪಾಲ್ಗೊಳ್ಳಲಿದ್ದಾರೆ. ಹಾಗೆಯೇ ಮಾ.14ರಂದು ಬೆಳಿಗ್ಗೆ 7 ಗಂಟೆಗೆ ಒಡನಾಡಿ ಸಂಸ್ಥೆಯು ಮಹಿಳೆಯರು ಮತ್ತು ಮಕ್ಕಳ ಸಶಕ್ತತೆಗಾಗಿ ಆಯೋಜಿಸಿರುವ Yoga Stops Traffic ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಧ್ಯಾಹ್ನ 2 ಗಂಟೆಗೆ ಮೈಸೂರಿಂದ ಬೆಂಗಳೂರಿಗೆ ತೆರಳಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಉದಯೋನ್ಮುಖ ಯುವ ಉದ್ಯಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸುಪುತ್ರಿ ಐಶ್ವರ್ಯ ಡಿಕೆಎಸ್ ಹೆಗ್ಡೆ ಅವರ ವಿಶೇಷ ಸಂದರ್ಶನ

ಶಿಕ್ಷಣದ ಮೂಲಕ ನಾಯಕತ್ವ ರೂಪಿಸುವ ಹಂಬಲವಿದೆ...!

–ಐಶ್ವರ್ಯ ಡಿಕೆಎಸ್ ಹೆಗ್ಡೆ



ವಿಶ್ವ ಮಹಿಳಾ ದಿನಾಚರಣೆ ವಿಶೇಷ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯು ಸವಾಲುಗಳನ್ನು ಸ್ವೀಕರಿಸುವ ಮತ್ತು ತಮಗಾಗಿ ಹೊಸ ಹಾದಿಯನ್ನು ಸೃಷ್ಟಿಸಿಕೊಳ್ಳುವ ಸಾಹಸಿ ಮಹಿಳೆಯರ ಅಭಿನಂದಿಸುತ್ತದೆ. ಐಶ್ವರ್ಯ ಡಿಕೆಎಸ್ ಹೆಗಡೆ, ತನ್ನದೇ ಆದ ರೀತಿಯಲ್ಲಿ ನಾಯಕತ್ವವನ್ನು ಮೈಗೂಡಿಸಿಕೊಂಡಿರುವ ಅಂತಹ ಯುವ ಮಹಿಳೆ. ನಮ್ಮ ರಾಜ್ಯದ ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರ ಪುತ್ರಿಯಾಗಿರುವುದರಿಂದ, ರಾಜಕಾರಣವೇ ಅವರ ಅಂತಿಮ ಗುರಿ ಎಂಬುದು ಬಹುತೇಕರ ಸಾಮಾನ್ಯ ಅಭಿಪ್ರಾಯ. ಪ್ರತಿಷ್ಠಿತ ರಾಜಕೀಯ ಕುಟುಂಬದಿಂದ ಬಂದಿರುವವರಿಗೆ, ರಾಜಕೀಯ ಆಯ್ಕೆಯಾಗಿ ಉಳಿಯುವುದಿಲ್ಲ ಬದಲಾಗಿ ಅದು ಅನಿವಾರ್ಯವಾಗಿ ಬಿಡುವುದೇ ಹೆಚ್ಚು. ಯಾವಾಗಲೂ ಅವರ ಪ್ರತಿ ನಡೆಯನ್ನು ದುರ್ಬೀನು ಹಾಕಿಕೊಂಡೆ ನೋಡಲಾಗುತ್ತದೆ. ಅತಿಯಾದ ನಿರೀಕ್ಷೆಯ ಭಾರವಿರುತ್ತದೆ ಮತ್ತು ಯಾವಾಗಲೂ ಸ್ಪಾಟ್‌ಲೈಟ್‌ನಲ್ಲಿಯೇ ಇರಬೇಕಾಗುತ್ತದೆ. ಆದರೆ ಐಶ್ವರ್ಯ ಆರಿಸಿಕೊಂಡದ್ದು ಬೇರೆಯಾದ ದಾರಿ.

ರಾಜಕೀಯಕ್ಕೆ ಬದಲಾಗಿ ಯಾವಾಗಲೂ ಬದಲಾವಣೆಯನ್ನು ಮೌನವಾಗಿಯೇ ಬಯಸುವ ಶಿಕ್ಷಣ ಕ್ಷೇತ್ರಕ್ಕೆ ಐಶ್ವರ್ಯ ಕಾಲಿರಿಸಿದರು. ಇಂದು ಈ ಯುವ ಉದ್ಯಮಿ ಹಲವಾರು ಶಿಕ್ಷಣ ಸಂಸ್ಥೆಗಳ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಶಿಕ್ಷಣ ತಜ್ಞರೊಂದಿಗೆ ನಿರಂತರ ಒಡನಾಟದಲ್ಲಿದ್ದಾರೆ. ಭವಿಷ್ಯದಲ್ಲಿ ಈ ಕ್ಷೇತ್ರವನ್ನು ಮುನ್ನಡೆಸುವ ಯುವ ಪ್ರತಿಭೆಗಳನ್ನು ಸಿದ್ಧಗೊಳಿಸುತ್ತಿದ್ದಾರೆ. ಇಂತಹ ಬಹುಮುಖ್ಯ ಕ್ಷೇತ್ರಕ್ಕೆ ಕಾಲಿರಿಸಿದಾಗ ಇಂಜಿನಿಯರ್ ಪದವೀಧರೆ ಐಶ್ವರ್ಯರಿಗೆ ಕೇವಲ 21 ವರ್ಷ ಅಷ್ಟೇ.!

ಶಿಕ್ಷಣ ಕ್ಷೇತ್ರದ ಜೊತೆಗೆ ಫ್ಯಾಷನ್ ಲೋಕದಲ್ಲಿಯೂ ಸಕ್ರಿಯವಾಗಿರುವ ಐಶ್ವರ್ಯ ತಮ್ಮದೇ ಆದ ಬ್ರಾಂಡ್ ಹೊಂದಿದ್ದಾರೆ. ಕಳೆದ ಮಾರ್ಚ್ 1ರಂದು ಮೈಸೂರಲ್ಲಿ 'ಟೀಚರ್ 360' ಕಾರ್ಯಕ್ರಮಕ್ಕೆ ಆಗಮಿಸಿದ್ದ ಐಶ್ವರ್ಯ, **I Learn As I Lead** ವಿಷಯವಾಗಿ ಮಾತನಾಡಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ 'ಮೈಸೂರು ಮಿತ್ರ'ನ ಜೊತೆ ಮುಕ್ತವಾಗಿ ಮಾತನಾಡಿದ ಐಶ್ವರ್ಯ, ಮಹಿಳೆಯರ ಸಬಲೀಕರಣ ಮಹತ್ವದೊಂದಿಗೆ ಪರಂಪರೆ, ಒತ್ತಡ, ಆಯ್ಕೆಗಳು, ವ್ಯಕ್ತಿತ್ವ, ಪ್ರಾಮುಖ್ಯತೆ ಮಿಕ್ಕೆಲ್ಲಾ ವಿಷಯಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಸಂದರ್ಶನ: ಶಾದನ್ ಮುನ್ನೀರ್

ಮೈಸೂರು ಮಿತ್ರ: ನೀವು ಅತಿಚಿಕ್ಕ ವಯಸ್ಸಿನಲ್ಲಿಯೇ ಉದ್ಯಮಿಯಾದವರು, ಮೇಲಾಗಿ ಈಗ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿರುವವರು. ನಿಮ್ಮ ಇಂದಿನ ವ್ಯಕ್ತಿತ್ವಕ್ಕೆ ನಿಮ್ಮ ಬಾಲ್ಯ ಶಿಕ್ಷಣದ ದಿನಗಳು ಹೇಗೆ ಸಹಕಾರಿಯಾಗಿದ್ದವು?

ಐಶ್ವರ್ಯ: ಎಲ್ಲರ ಹಾಗೆಯೇ ನನ್ನ ಬಾಲ್ಯವೂ ಆಟ–ಪಾಠಗಳಿಂದ ಕೂಡಿತ್ತು. ನಾನು ತುಂಬಾ ಚಟುವಟಿಕೆಯ ವಿದ್ಯಾರ್ಥಿಯಾಗಿದ್ದೆ. ಥ್ರೋಬಾಲ್, ನೃತ್ಯ ಮತ್ತಿತರ ಸ್ಪರ್ಧೆಗಳಲ್ಲಿ ಭಾಗ ವಹಿಸುತ್ತಿದ್ದೆ. ನನ್ನ ಶಾಲಾ ದಿನಗಳು ಬಹಳ ಚೆನ್ನಾಗಿದ್ದವು. ಆದರೆ ಮನೆಯಲ್ಲಿ ಶಿಕ್ಷಣಕ್ಕೆ ಬಹಳ ಮಹತ್ವವಿತ್ತು. ನಮ್ಮ ಅಮ್ಮ ನಾನು ಯಾವ ಕಾರಣಕ್ಕೂ ಶಾಲೆ ತಪ್ಪಿಸಲು ಒಪ್ಪುತ್ತಿರಲಿಲ್ಲ. ಯಾವುದೇ ಮದುವೆ ಇನ್ನಿತರ ಯಾವುದೇ ಮುಖ್ಯ ಕಾರ್ಯಕ್ರಮಗಳಿದ್ದಾಗ್ಯೂ ನಾವು ಶಾಲೆಗೆ ಹೋಗಬೇಕಿತ್ತು. ಶಾಲೆಯ ಹಾಜರಾತಿ ಬಹಳ ಮುಖ್ಯವಾಗಿತ್ತು.

ನಾನು ಶಿಕ್ಷಣ ಕ್ಷೇತ್ರಕ್ಕೆ ಕಾಲಿಡುತ್ತೇನೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ. ಆದರೆ ಮನೆಯಲ್ಲಿ ಹಾಗಿರಲಿಲ್ಲ. ನಮ್ಮಪ್ಪ ಶಿಕ್ಷಣ ಸಂಸ್ಥೆಗಳನ್ನು ಸದುದ್ದೇಶದಿಂದ ಸ್ಥಾಪಿಸಿದರು ಮತ್ತು ಅವರು ಯಾವಾಗಲೂ ಹೇಳುತ್ತಿದ್ದರು, ನನ್ನ ಮಕ್ಕಳು ಇಲ್ಲಿಗೆ ಕಾಲಿಡಲಿಲ್ಲ ಅಂದರೆ ನಾನು ಬೇರೆ ಮಕ್ಕಳು ಇಲ್ಲಿಗೆ ಬರಬೇಕೆಂದು ಹೇಗೆ ನಿರೀಕ್ಷಿಸಲಾದೀತು? ಎಂದು. ಹಾಗಾಗಿ ನಾನು ನಮ್ಮದೇ ಶಿಕ್ಷಣ ಸಂಸ್ಥೆಗಳಿಗೆ ಕಾಲಿಡಬೇಕಾದ ಅನಿವಾರ್ಯತೆ ಒದಗಿಬಂತು

ನಾನು ಶಾಲೆಗೆ ಭೇಟಿ ನೀಡಿದಾಗ ನನಗೆ ತಿಳಿಯಿತು. ನಾನು ಮಕ್ಕಳೊಂದಿಗಿನ ಒಡನಾಟವನ್ನು ಇಷ್ಟಪಡುತ್ತೇನೆ ಎಂದು. ಅಂದಿನಿಂದಲೇ ನಾನು ಇಲ್ಲಿಯೇ ಕೆಲಸ ಮಾಡಬೇಕೆಂದು ನಿರ್ಧರಿಸಿಬಿಟ್ಟೆ.

ಮೈಮಿ: ಶಿಕ್ಷಣ ಕ್ಷೇತ್ರದಲ್ಲಿಯೇ ಉಳಿಯಬೇಕೆಂದು ನಿಮಗೆ ಏಕೆ ಅನಿಸಿತು? ಭಾರತೀಯ ಶಿಕ್ಷಣವನ್ನು ವಿಶ್ವದರ್ಜೆಗೇರಿಸಲು ಏನೆಲ್ಲಾ ಬದಲಾವಣೆ ಮಾಡಬೇಕು ಎಂದು ಹೇಳುತ್ತೀರಿ?

ಐಶ್ವರ್ಯ: ಬೇರೆಯವರ ಜೀವನವನ್ನು ಬದಲಾಯಿಸುವ ಅವಕಾಶ ದೊರೆಯಿತು ಎಂಬುದೇ ನನಗೆ ಉತ್ತೇಜನ ನೀಡುತ್ತದೆ. ಎಷ್ಟು ದಿನ ಒಂದು ಮಗು ನಮ್ಮ ಶಾಲೆಯಲ್ಲಿ ಇರುತ್ತದೋ ಗೊತ್ತಿಲ್ಲ, ಆದರೆ ಆ ಮಗುವಿಗೆ ನನ್ನಿಂದ ಉಪಯೋಗವಾದರೆ ಅದೇ ಸಾರ್ಥಕತೆ.

ಭಾರತದಲ್ಲಿ ಇರುವ ಯುವಮನಸ್ಸುಗಳ ಸಂಖ್ಯೆ ಬಹಳ ಜಾಸ್ತಿ. ಅಂತಹುದರಲ್ಲಿ ಅವರಿಗೆ ಮಾರ್ಗದರ್ಶನ ನೀಡುವ ಅವಕಾಶ ದೊರೆಯುವುದೇ ಪುಣ್ಯವಲ್ಲವೆ!

ಒಂದು ಬದಲಾವಣೆ ನಾನು ಆಗಲೇ ಬೇಕೆಂದು ಬಯಸುವುದೆಂದರೆ, ಪ್ರತಿ ಮಗುವಿಗೂ ಉತ್ತಮ ಮೌಲ್ಯಯುತ ಶಿಕ್ಷಣ ದೊರೆಯಬೇಕು. ಅದಕ್ಕೆ ಮಗುವಿನ ಆರ್ಥಿಕ ಸ್ಥಿತಿ ಅಡ್ಡಿಬರಬಾರದು. ಬಹುಶಃ 'ಒಂದು ರಾಷ್ಟ್ರ ಒಂದು ಶಿಕ್ಷಣ' ಎಂಬ ನೀತಿ ಜಾರಿಗೆ ಬಂದರೆ, ನಮ್ಮ ದೇಶದ ಚಿತ್ರಣವೇ ಬದಲಾಗಿ ಹೊಸಯುಗ ಪ್ರಾರಂಭವಾಗುತ್ತದೆ ಎಂದು ನನಗೆ ಬಲವಾದ ವಿಶ್ವಾಸವಿದೆ.

ಮಿತ್ರ: ಬಹಳ ಚಿಕ್ಕವಯಸ್ಸಿನಲ್ಲೇ ನೀವು ವೃತ್ತಿಜೀವನವನ್ನು ಪ್ರಾರಂಭಿಸಿದ್ದೀರಿ. ನಿಮ್ಮ ಚಿಕ್ಕ ವಯಸ್ಸು ಮತ್ತು ಹೆಣ್ಣು ಎಂಬ ಕಾರಣ ನಿಮಗೆ ಯಾವ ರೀತಿಯಲ್ಲಾದರೂ ತೊಂದರೆಯಾಯಿತೆ?

ಐಶ್ವರ್ಯ: ವಯಸ್ಸು ಖಂಡಿತವಾಗಿ ನನಗೆ ಸ್ವಲ್ಪ ಸಮಸ್ಯೆಗಳನ್ನು ತಂದೊಡ್ಡಿತು. ಏಕೆಂದರೆ, ನಮ್ಮ ದೇಶದಲ್ಲಿ ವಯಸ್ಸು ಮತ್ತು ಅನುಭವಗಳನ್ನು ಬೇರೆಬೇರೆಯಾಗಿ ನೋಡುತ್ತಾರೆ. ವಿದ್ಯಾರ್ಥಿಗಳು ನನ್ನನ್ನು ತಮ್ಮಂತೆಯೇ ಕಾಣುತ್ತಾರೆ ಎಂದು ಮಾತನಾಡುತ್ತಿದ್ದರು. ಹಾಗಾಗಿ ಮೊದಮೊದಲು ನಾನು ನನ್ನಮ್ಮನ ಬಟ್ಟೆಗಳನ್ನು ತೊಟ್ಟು ಹೋಗುತ್ತಿದ್ದೆ. ಆದರೆ ಯಾವಾಗ ನಾನು ನನ್ನ ಸಾಮರ್ಥ್ಯವನ್ನು ಸಾಬೀತು ಮಾಡಿದೆನೋ, ಆಗಿನಿಂದ ಅದರ ಅಗತ್ಯ ಬಂದಿಲ್ಲ. ಈಗ ನಾನು ನನ್ನ ಕೆಲಸವನ್ನು ಸರಿಯಾಗಿ ಮಾಡುವುದರ ಕಡೆಗೆ ಮಾತ್ರ ಗಮನ ನೀಡುತ್ತೇನೆ.

ಮಿತ್ರ: ನಿಮ್ಮ ತಂದೆ ಡಿ.ಕೆ.ಶಿವಕುಮಾರ್ ಪ್ರಬುದ್ಧ ರಾಜಕೀಯ ನಾಯಕರು. ಅವರಿಂದ ಯಾವೆಲ್ಲಾ ನಾಯಕತ್ವದ ಗುಣಗಳನ್ನು ನೀವು ಕಲಿತಿದ್ದೀರಿ?

ಐಶ್ವರ್ಯ: ನಮ್ಮ ತಂದೆ ಬರೀ ಒಬ್ಬ ರಾಜಕೀಯ ನಾಯಕರಲ್ಲ, ಒಬ್ಬ ಶಿಕ್ಷಣ ತಜ್ಞರಿದ್ದಾರೆ. ಅವರಿಂದ ನಾನು ತಾಳ್ಮೆ ಮತ್ತು ಕಷ್ಟಪಟ್ಟು ಕೆಲಸ ಮಾಡುವುದನ್ನು ಕಲಿತಿದ್ದೇನೆ. ನನಗೆ ಅವರು ಯಾವಾಗಲೂ ಹೇಳುತ್ತಾರೆ. ನೀನು ಸಂಸ್ಥೆಗೆ ಒಬ್ಬ 'ಮಾಲೀಕ'ಳಂತೆ ಹೋಗಬೇಡ. ನೀನೂ ಎಲ್ಲರಂತೆ ಕಷ್ಟಪಟ್ಟು ಕೆಲಸ ಮಾಡು ಎಂದು.

ಜನ ನಿನಗಾಗಿ ಕೆಲಸ ಮಾಡುತ್ತಾರೆ ಎಂದು ತಿಳಿಯಬೇಡ, ಜನರಿಗಾಗಿ ನೀನು ಕೆಲಸ ಮಾಡುತ್ತಿದ್ದೀಯಾ ಎಂದು ತಿಳಿದುಕೋ ಎಂಬುದನ್ನು ಸಾರಿ ಸಾರಿ ಹೇಳಿದ್ದಾರೆ. 'ಒಳ್ಳೆಯ ಕೆಲಸವನ್ನು ಹೃದಯಕ್ಕೆ ತೆಗೆದುಕೊಳ್ಳಬೇಡ, ಕೆಟ್ಟ ಕೆಲಸವನ್ನು ನಿನ್ನ ಮೆದುಳಿಗೆ ಹೋಗಗೊಡಬೇಡ' ಎಂದು ಜೀವನ ಪಾಠ ಹೇಳಿದ್ದಾರೆ. ಇದು ನನ್ನ ದೃಷ್ಟಿಕೋನವನ್ನೇ ಬದಲಿಸಿದ ಮಾತು. ಹಾಗಾಗಿ ಪ್ರತಿ ದಿನವನ್ನೂ ನಾನು ಹೊಸ ಅವಕಾಶದಂತೆ ನೋಡುತ್ತೇನೆ.

ಮಿತ್ರ: ರಾಜಕೀಯ ಕುಟುಂಬಕ್ಕೆ ನೀವು ಸೇರಿರುವುದರಿಂದ ನೀವು ಉದ್ಯಮಿಯಾಗುವ ಹಾದಿಯಲ್ಲಿ ಏನಾದರೂ ಸವಾಲುಗಳು ಎದುರಾಗಿವೆಯೇ?

ಐಶ್ವರ್ಯ: ಎಲ್ಲಾ ನಾಣ್ಯಕ್ಕೂ ಎರಡು ಮುಖಗಳಿರುವ ಹಾಗೆ ಇಲ್ಲಿಯೂ ಸಹ. ಎಲ್ಲರೂ ನನ್ನ ನಡೆಗಳನ್ನು ಪರೀಕ್ಷಾತ್ಮಕ ದೃಷ್ಟಿಯಿಂದ ಸದಾ ನೋಡುತ್ತಿರುತ್ತಾರೆ. ಅತಿಯಾದ ನಿರೀಕ್ಷೆ ಇರುತ್ತದೆ ಮತ್ತು ವೈಯಕ್ತಿಕ ಸಮಯವೆಂಬುದೇ ದೊರೆಯುವುದಿಲ್ಲ. ಅದರ ಜೊತೆಗೆ, ನನಗೊಂದು ಸಿದ್ಧ ಗುರುತಿದೆ, ಹಾಗಾಗಿ ನಾನು ನನ್ನ ಪರಿಚಯ ಮಾಡಿಕೊಳ್ಳಬೇಕಾಗಿಲ್ಲ.

ಹೌದು, ರಾಜಕೀಯ ಕುಟುಂಬಕ್ಕೆ ಸೇರಿರುವುದು ಒಂದು ರೀತಿಯ ಶಕ್ತಿಯೂ ಹೌದು, ಸವಾಲೂ ಹೌದು.

ಮಿತ್ರ: ಭವಿಷ್ಯದಲ್ಲಿ ನಿಮಗೆ ರಾಜಕೀಯಕ್ಕೆ ಬರುವ ಯೋಚನೆಯಿದೆಯೇ?

ಐಶ್ವರ್ಯ: ಇಲ್ಲ.! ಎಲ್ಲ ರಾಜಕೀಯ ನಾಯಕರ ಮಕ್ಕಳು ರಾಜಕೀಯಕ್ಕೇ ಬರಬೇಕೆಂದೇನಿಲ್ಲ. ಬದಲಾವಣೆ ಬಯಸುವ ಹಲವು ಕ್ಷೇತ್ರಗಳಿವೆ; ಅದು ಶಿಕ್ಷಣ, ಆರೋಗ್ಯ, ಉದ್ಯೋಗ, ರಾಜಕೀಯ ಇತ್ಯಾದಿ.

ಶಿಕ್ಷಣದ ಮೂಲಕ ಹೊಸ ನಾಯಕರನ್ನು ಸೃಷಿಸಬೇಕೆಂಬ ಹಂಬಲವಿದೆ. ನಾನೇ ನಾಯಕಿಯಾಗುವ ಇಚ್ಛೆಯಿಲ್ಲ.

ಮಿತ್ರ: ನಿಮ್ಮ ತಾಯಿ ನಿಮ್ಮ ಮೇಲೆ ಹೇಗೆ ಪ್ರಭಾವ ಬೀರಿದ್ದಾರೆ? ಮತ್ತು ಅವರಿಂದ ಏನನ್ನು ಕಲಿತಿದ್ದೀರಿ?

ಐಶ್ವರ್ಯ: ನಾವು ನಮ್ಮ ತಂದೆಯ ರಾಜಕೀಯ ನಾಯಕತ್ವವನ್ನು ದೂರದಿಂದ ನೋಡಿದ್ದೇವೆ. ಆದರೆ ಅಮ್ಮ ನಮ್ಮಲ್ಲಿ ಮೌಲ್ಯಗಳನ್ನ ಬಿತ್ತಿ, ನಾವು ಉತ್ತಮರಾಗಿರುವಂತೆ ಜೀವನ ಪಾಠ ಹೇಳಿಕೊಟ್ಟಿದ್ದಾರೆ.

ಶ್ರೀಮಂತಿಕೆ ಮತ್ತು ಸಾಮಾನ್ಯ ಜೀವನ ಎರಡನ್ನೂ ನಮಗೆ ತೋರಿಸಿದ್ದಾರೆ. ಎಷ್ಟೋ ಬಾರಿ ಊರಿಗೆ ಹೋಗುವಾಗ ನಮ್ಮನ್ನು ರೈಲಿನಲ್ಲಿ ಕಳಿಸಿದ್ದಾರೆ. ಜೀವನದ ಎಲ್ಲ ಮುಖಗಳನ್ನು ನಮಗೆ ಅರ್ಥ ಮಾಡಿಸಿದ್ದಾರೆ.

ನಮಗೆ ವಿವಿಧ ಪಾತ್ರಗಳನ್ನು ಹೇಗೆ ನಿಭಾಯಿಸಬೇಕೆಂದು ನಮ್ಮ ಅಮ್ಮ ಹೇಳಿಕೊಟ್ಟಿದ್ದಾರೆ. ಸ್ವತಃ ಅವರೇ, ಮನೆ, ಕುಟುಂಬ ಮತ್ತು ನಮ್ಮೆಲ್ಲರ ಶಿಕ್ಷಣದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಅವರೆಂದೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಇಷ್ಟಪಡುವುದಿಲ್ಲ. ನಮ್ಮ ಅಮ್ಮನ ತ್ಯಾಗವೇ ಇಂದು ನಮ್ಮೆಲ್ಲರನ್ನೂ ಇಷ್ಟರಮಟ್ಟಿಗೆ ರೂಪಿಸಿರುವುದು.

ಮಿತ್ರ ಶಿಕ್ಷಣ ಮತ್ತು ಉದ್ಯಮ ಮಹಿಳೆಯನ್ನು ಹೇಗೆ ಸಬಲಗೊಳಿಸಿವೆ?

ಐಶ್ವರ್ಯ: ನಿಜ ಹೇಳಬೇಕೆಂದರೆ, ಇಂದು ಶಿಕ್ಷಣ ಕ್ಷೇತ್ರ ನಡೆಯುತ್ತಿರುವುದೇ ಹೆಣ್ಣುಮಕ್ಕಳಿಂದ. ನೀವೇ ನೋಡಿರುತ್ತೀರಿ. ಎಲ್ಲೆಡೆ ಈಗ ಅತಿ ಹೆಚ್ಚು ಶಿಕ್ಷಕಿಯರೇ ಇರುವುದು. ಶಿಕ್ಷಣ ಎಂದರೆ, ಶಕ್ತಿಶಾಲಿ ಹೆಣ್ಣುಮಕ್ಕಳು ಮತ್ತು ಜವಬ್ದಾರಿಯುತ ಗಂಡುಮಕ್ಕಳನ್ನು ಸಮಾಜಕ್ಕೆ ಕೊಡುವುದು.

ಉದ್ಯಮದಲ್ಲಿ ಸಂಪಾದಿಸುತ್ತಿರುವ ಹೆಂಗಸರು ಸಮಾಜದ ದೃಷ್ಟಿಕೋನವನ್ನು ಬದಲಾಯಿಸಿದ್ದಾರೆ. ಹಿಂದೆಯೂ ಮಹಿಳೆ ಮನೆಯಲ್ಲಿ ದುಡಿಯುತ್ತಿದ್ದಳು, ಈಗ ಆಚೆಯೂ ದುಡಿಯುತ್ತಿದ್ದಾಳೆ. ಸಬಲೀಕರಣ ಎಂದರೆ, ಬಾಸ್ ಆಗುವುದಷ್ಟೇ ಅಲ್ಲ. ಮಹಿಳೆಯರು ಯಾವಾಗಲೂ ಬಾಸ್‌ಗಳಾಗಿಯೇ ಇದ್ದಾರೆ!

> ನಮ್ಮ ತಂದೆ ಬರೀ ಒಬ್ಬ ರಾಜಕೀಯ ನಾಯಕರಲ್ಲ, ಒಬ್ಬ ಶಿಕ್ಷಣ ತಜ್ಞರಿದ್ದಾರೆ. ಅವರಿಂದ ನಾನು ತಾಳ್ಮೆ ಮತ್ತು ಕಷ್ಟಪಟ್ಟು ಕೆಲಸ ಮಾಡುವುದನ್ನು ಕಲಿತಿದ್ದೇನೆ. ನನಗೆ ಅವರು ಯಾವಾಗಲೂ ಹೇಳುತ್ತಾರೆ. ನೀನು ಸಂಸ್ಥೆಗೆ ಒಬ್ಬ 'ಮಾಲೀಕ'ಳಂತೆ ಹೋಗಬೇಡ. ನೀನೂ ಎಲ್ಲರಂತೆ ಕಷ್ಟಪಟ್ಟು ಕೆಲಸ ಮಾಡು ಎಂದು. ಜನ ನಿನಗಾಗಿ ಕೆಲಸ ಮಾಡುತ್ತಾರೆ ಎಂದು ತಿಳಿಯಬೇಡ, ಜನರಿಗಾಗಿ ನೀನು ಕೆಲಸ ಮಾಡುತ್ತಿದ್ದೀಯಾ ಎಂದು ತಿಳಿದುಕೋ ಎಂಬುದನ್ನು ಸಾರಿ ಸಾರಿ ಹೇಳಿದ್ದಾರೆ. 'ಒಳ್ಳೆಯ ಕೆಲಸವನ್ನು ಹೃದಯಕ್ಕೆ ತೆಗೆದುಕೊಳ್ಳಬೇಡ, ಕೆಟ್ಟ ಕೆಲಸವನ್ನು ನಿನ್ನ ಮೆದುಳಿಗೆ ಹೋಗಗೊಡಬೇಡ' ಎಂದು ಜೀವನ ಪಾಠ ಹೇಳಿದ್ದಾರೆ. ಇದು ನನ್ನ ದೃಷ್ಟಿಕೋನವನ್ನೇ ಬದಲಿಸಿದ ಮಾತು. ಹಾಗಾಗಿ ಪ್ರತಿ ದಿನವನ್ನೂ ನಾನು ಹೊಸ ಅವಕಾಶದಂತೆ ನೋಡುತ್ತೇನೆ.



> ಶ್ರೀಮಂತಿಕೆ ಮತ್ತು ಸಾಮಾನ್ಯ ಜೀವನ ಎರಡನ್ನೂ ನಮ್ಮ ಅಮ್ಮ ನಮಗೆ ತೋರಿಸಿದ್ದಾರೆ. ಎಷ್ಟೋ ಬಾರಿ ಊರಿಗೆ ಹೋಗುವಾಗ ನಮ್ಮನ್ನು ರೈಲಿನಲ್ಲಿ ಕಳಿಸಿದ್ದಾರೆ. ಜೀವನದ ಎಲ್ಲ ಮುಖಗಳನ್ನು ನಮಗೆ ಅರ್ಥ ಮಾಡಿಸಿದ್ದಾರೆ. ನಮಗೆ ವಿವಿಧ ಪಾತ್ರಗಳನ್ನು ಹೇಗೆ ನಿಭಾಯಿಸಬೇಕೆಂದು ಹೇಳಿಕೊಟ್ಟಿದ್ದಾರೆ. ಸ್ವತಃ ಅವರೇ, ಮನೆ, ಕುಟುಂಬ ಮತ್ತು ನಮ್ಮೆಲ್ಲರ ಶಿಕ್ಷಣದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಅವರೆಂದೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಇಷ್ಟಪಡುವುದಿಲ್ಲ. ನಮ್ಮ ಅಮ್ಮನ ತ್ಯಾಗವೇ ಇಂದು ನಮ್ಮೆಲ್ಲರನ್ನೂ ಇಷ್ಟರ ಮಟ್ಟಿಗೆ ರೂಪಿಸಿರುವುದು.

ಮಿತ್ರ: 'ಟೀಚರ್ 360' ಅನ್ನು ಪ್ರಾರಂಭಿಸಲು ನಿಮಗೇನು ಪ್ರೇರಣೆ?

ಐಶ್ವರ್ಯ: ಎಂಟು ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿದ ನನಗೆ, ಶಿಕ್ಷಕರಲ್ಲಿಯೇ ಬಹುಮುಖ್ಯ ಬದಲಾವಣೆ ಆಗಬೇಕು. ಆಗ ಮಾತ್ರ ಅವರು ನೂರಾರು ವಿದ್ಯಾರ್ಥಿಗಳಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಬಲ್ಲರು ಎನಿಸಿತು.

'ಟೀಚರ್ 360' ಮೊದಲು ನಮ್ಮ ಶಿಕ್ಷಣ ಸಂಸ್ಥೆಗಳ ಶಿಕ್ಷಕರಿಗೆ ಪ್ರಾರಂಭಿಸಿದ್ದು. ನಂತರ, ಶಿಕ್ಷಕರಿಗೆ ಬೇಕಾದ ಕೌಶಲ್ಯಗಳನ್ನು ಅವರಿರುವೆಡೆಗೇ ತೆಗೆದುಕೊಂಡು ಹೋಗಬೇಕು, ಅವರ ಸುರಕ್ಷಿತ ವಲಯಕ್ಕೇ ಹೋಗಿ ತರಬೇತಿ ನೀಡಿದರೆ ಒಳ್ಳೆಯದು ಎಂದೆನಿಸಿ, ಮೈಸೂರು, ಡೆಲ್ಲಿ, ಹೈದರಾಬಾದ್, ಬೆಳಗಾವಿ ಹೀಗೆ ವಿವಿಧೆಡೆಗಳಲ್ಲಿ ಮಾಡುವ ಯೋಜನೆ ಸಿದ್ಧಪಡಿಸಿದೆವು.

ಮಿತ್ರ: ಈಗ ಎಐ, ಸಾಮಾಜಿಕ ಜಾಲತಾಣಗಳ ಕಾಲ. ಇಂತಹ ಸಂದರ್ಭದಲ್ಲಿ ಸಾಂಪ್ರದಾಯಿಕ ಶಿಕ್ಷಣ ಉದ್ಯೋಗ ಸೃಷ್ಟಿಸುವಲ್ಲಿ ಎಷ್ಟು ಪ್ರಸ್ತುತ?

ಐಶ್ವರ್ಯ: ಇಂದು ಶಿಕ್ಷಣ ಕೇವಲ ಅಂಕ ಗಳಿಕೆಯಲ್ಲ. ಇಂದು ಕಂಪನಿಗಳು ಕೌಶಲಗಳಿಗೆ ಹೆಚ್ಚು ಒತ್ತು ನೀಡುತ್ತವೆ. ಸಾಫ್ಟ್ ಸ್ಕಿಲ್ಸ್, ಯೋಚನೆಗಳಲ್ಲಿನ ನಿಖರತೆ, ಆತ್ಮವಿಶ್ವಾಸಗಳನ್ನು ಗಮನಿಸುತ್ತದೆ. ಒಂದು ವ್ಯಕ್ತಿತ್ವವನ್ನು ಉತ್ತಮವಾಗಿ ರೂಪುಗೊಳಿಸುವುದು ಶಿಕ್ಷಣದ ಆದ್ಯತೆ ಮತ್ತು ಗುರಿ.

> ಪ್ರತಿ ಮಹಿಳೆಯೂ ತನ್ನ ಆಯ್ಕೆ ಮತ್ತು ಪ್ರಾಮುಖ್ಯತೆಗಳನ್ನು ಮೊದಲು ಗುರುತಿಸಿಕೊಳ್ಳಬೇಕು. ತನ್ನ ಜೀವನದಲ್ಲಿ ಯಾವುದಕ್ಕೆ ಎಷ್ಟು ಪ್ರಾಮುಖ್ಯತೆ ಕೊಡಬೇಕೆಂದು ಅವಳೇ ನಿರ್ಧರಿಸಬೇಕು.

ಮಿತ್ರ: ಹೊರಗೆ ಏನೇ ವೃತ್ತಿಯಲ್ಲಿದ್ದರೂ ಮಹಿಳೆಯರು ಮನೆಗೆಲಸ ಮಾಡಲೇಬೇಕೆಂದು ಸಮಾಜ ಬಯಸುತ್ತದೆ. ಇದರ ಬಗ್ಗೆ ನಿಮ್ಮ ಅನಿಸಿಕೆ?

ಐಶ್ವರ್ಯ: ಇದಕ್ಕೆ ಒಂದು ನಿರ್ದಿಷ್ಟ ಸೂತ್ರ ಎಂದಿಲ್ಲ. ಪ್ರತಿ ಮಹಿಳೆಯೂ ತನ್ನ ಆಯ್ಕೆ ಮತ್ತು ಪ್ರಾಮುಖ್ಯತೆಗಳನ್ನು ಮೊದಲು ಗುರುತಿಸಿಕೊಳ್ಳಬೇಕು. ತನ್ನ ಜೀವನದಲ್ಲಿ ಯಾವುದಕ್ಕೆ ಎಷ್ಟು ಪ್ರಾಮುಖ್ಯತೆ ಕೊಡಬೇಕೆಂದು ಅವಳೇ ನಿರ್ಧರಿಸಬೇಕು.

ಮಿತ್ರ: ನೀವು 'ಕೆಫೆ ಕಾಫಿ ಡೇ' ಕುಟುಂಬಕ್ಕೆ ಮದುವೆಯಾಗಿ ಹೋಗಿದ್ದೀರಿ. ಬಹು ಪಾತ್ರಗಳನ್ನು ಹೇಗೆ ನಿಭಾಯಿಸುತ್ತೀರಿ?

ಐಶ್ವರ್ಯ: ನನ್ನ ಅತ್ತೆ ಇಡೀ ದೇಶಾದ್ಯಂತ ಇರುವ ಕಾಫಿ ಡೇ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಅವರನ್ನು ನೋಡಿದರೆ ಮತ್ತಷ್ಟು ಸ್ಫೂರ್ತಿ ಬರುತ್ತದೆ. ನಮ್ಮ ಕುಟುಂಬದಲ್ಲಿ ನಾವೆಲ್ಲರೂ ಪರಸ್ಪರ ವಿಮರ್ಶಕರೂ ಹೌದು, ಶಕ್ತಿಯೂ ಹೌದು.

ನಾನು, ನನ್ನ ಪತಿ ಇಬ್ಬರೂ **ಅಂಬರ್ ವ್ಯಾಲಿ ರೆಸಿಡೆನ್ಷಿಯಲ್** ಶಾಲೆಯನ್ನು ನಡೆಸುತ್ತೇವೆ. ಪರಸ್ಪರ ನಮ್ಮ ನಡುವೆ ಗೌರವವಿದೆ. ನನ್ನ ಪ್ರಕಾರ ಸಮತೋಲನ ಕಾಯ್ದುಕೊಳ್ಳುವುದು, ಮತ್ತು ಜೊತೆಯಾಗಿ ನಡೆಯುವುದು ಮುಖ್ಯ, ಪರಿಪೂರ್ಣತೆಗಾಗಿ ಹಂಬಲಿಸುವುದಲ್ಲ.

ಮಿತ್ರ: ಅಂದವೆಂಬುದು ಮಹಿಳೆಯ ಆತ್ಮ ವಿಶ್ವಾಸವನ್ನು ಹೆಚ್ಚಿಸುವಲ್ಲಿ ಅಷ್ಟು ಮುಖ್ಯವೇ?

ಐಶ್ವರ್ಯ: ಹೌದು, ಅದು ಮುಖ್ಯವೇ. ಯಾವಾಗ ನಿಮ್ಮನ್ನು ನೀವು ಅಂದ–ಚಂದಗೊಳಿಸಿಕೊಳ್ಳುತ್ತೀರೋ ಆಗ ನಿಮ್ಮ ಆತ್ಮವಿಶ್ವಾಸ ಹೆಚ್ಚುತ್ತದೆ. ದೇವರು ಕೊಟ್ಟಿದ್ದನ್ನು ಬದಲಿಸಲಾಗುವುದಿಲ್ಲ, ಅದು ಬೇರೆ. ಆದರೆ ನಮ್ಮನ್ನು ಚಂದಗೊಳಿಸಿಕೊಂಡರೆ ಅದು ನಮ್ಮ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತದೆ.

ಮಿತ್ರ ನಿಮ್ಮ ದೃಷ್ಟಿಯಲ್ಲಿ ಮಹಿಳಾ ದಿನಾಚರಣೆ ಮಹತ್ವವೇನು?

ಐಶ್ವರ್ಯ: ಮಹಿಳಾ ದಿನಾಚರಣೆ ಎಂದರೆ, ನನ್ನ ಪ್ರಕಾರ ನಮ್ಮನ್ನು ನಾವೇ ಪ್ರಶಂಸಿಸಿಕೊಳ್ಳಲು ಇರುವ ದಿನ. ಜೊತೆಗೆ ಇದು ಸೋದರೀಭಾವವನ್ನು ಉಂಟುಮಾಡಬೇಕು. ಮಹಿಳೆಯರು ತಮ್ಮ ಜೊತೆಯ ಮಹಿಳೆಯರನ್ನೂ ತಮ್ಮೊಂದಿಗೆ ಮುಂದೆ ಕರೆದುಕೊಂಡು ಹೋಗಬೇಕು. ಇನ್ನೊಬ್ಬರ ಅಭ್ಯುದಯವನ್ನು ಕಂಡು ಹೊಟ್ಟೆಕಿಚ್ಚು ಪಡಬಾರದು.

ಮಿತ್ರ: ಮಹಿಳಾ ಸಬಲೀಕರಣವನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ?

ಐಶ್ವರ್ಯ: ನನ್ನ ಪ್ರಕಾರ ಮಹಿಳಾ ಸಬಲೀಕರಣವೆಂದರೆ, ಆಯ್ಕೆಯ ಸ್ವಾತಂತ್ರ್ಯ. ನನ್ನ ಕುಟುಂಬ ನನ್ನನ್ನು ಬೆಂಬಲಿಸಿ ನನಗೆ ಸ್ವಾತಂತ್ರ್ಯ ನೀಡಿರುವುದರಿಂದ ನಾನು ಸಬಲಳು ಎಂದು ನನಗೆ ಅನ್ನಿಸುತ್ತದೆ. ಹಿಂದೆಲ್ಲಾ ಮಹಿಳೆಯರು ತಮ್ಮ ಕನಸುಗಳನ್ನು ಮರೆಯುತ್ತಿದ್ದರು, ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಸ್ವಾತಂತ್ರ್ಯದ ಜೊತೆ ಅದನ್ನು ಜವಾಬ್ದಾರಿಯಿಂದ ಬಳಸುವ ವಿವೇಚನೆಯೂ ಇರಬೇಕಾಗುತ್ತದೆ.

ಮಿತ್ರ: ಕೆಲಸದ ಜೊತೆಗೆ ನಿಮ್ಮ ಹವ್ಯಾಸ, ಇಷ್ಟವಾದ ಆಹಾರ, ನಿಮ್ಮ ಜೀವನ ಶೈಲಿಯ ಬಗ್ಗೆ ಸ್ವಲ್ಪ ಹೇಳುವಿರಾ?

ಐಶ್ವರ್ಯ: ನನ್ನ ಇಷ್ಟದ ಕ್ಷೇತ್ರಗಳಿಗೆ ಹೋಗಲು ನನಗೆ ಅವಕಾಶ ದೊರಕಿರುವುದರಿಂದ ನಾನು ಅದೃಷ್ಟವಂತಳೆಂದೇ ಭಾವಿಸುತ್ತೇನೆ. ಶಿಕ್ಷಣ, ತರಬೇತಿ ಮಾತ್ರವಲ್ಲದೆ, ಹೈದರಾಬಾದ್‌ನಲ್ಲಿ Theory of Everything ಎಂಬ ನನ್ನದೇ ಫ್ಯಾಷನ್ ಬ್ರ್ಯಾಂಡ್ ಅನ್ನು ಹೊಂದಿದ್ದೇನೆ. ನನ್ನ ಪ್ರಕಾರ, ನಿಮಗೆ ಯಾವುದಾದರೂ ವಿಷಯದಲ್ಲಿ ತೀವ್ರ ಆಸಕ್ತಿ ಇದ್ದರೆ, ಆ ಕ್ಷೇತ್ರದಲ್ಲಿಯೇ ಮುಂದುವರೆಯಿರಿ ಮತ್ತು ಆ ಕ್ಷೇತ್ರದ ವಿವಿಧ ಆಯಾಮಗಳನ್ನು ಅನ್ವೇಷಿಸಿ.

ಬಿಡುವಿನ ಸಮಯದಲ್ಲಿ ನನ್ನ ಪತಿಯ ಜೊತೆ ನೆಟ್‌ಫ್ಲಿಕ್ಸ್‌ನಲ್ಲಿ ಕೆ–ಡ್ರಾಮಾಗಳನ್ನು ನೋಡುತ್ತೇನೆ. ಗೌಡರ ಅಡುಗೆಗಳು ನನಗೆ ಬಹಳ ಇಷ್ಟ. ಅದರಲ್ಲೂ ನನ್ನ ಅಮ್ಮ ಮತ್ತು ಅಜ್ಜಿ ಮಾಡುವ ಬಿರಿಯಾನಿ ಮತ್ತು ಕೋಳಿಸಾರು ನನ್ನ ಫೇವರೆಟ್. ನನ್ನ ಪ್ರಕಾರ ನನಗೆ ಆರಾಮ ಎನ್ನಿಸುವ, ನನ್ನಲ್ಲಿ ಆತ್ಮವಿಶ್ವಾಸ ತುಂಬುವ 'ಸ್ಟೈಲ್' ನನ್ನ ಫೇವರೆಟ್. ನಿಮಗೆ ಸರಿಹೊಂದಿದರೆ ಮಾತ್ರ ಬರುವ ಹೊಸ ಟ್ರೆಂಡ್‌ಗಳನ್ನು ಫಾಲೋ ಮಾಡಿ. ಸುಮ್ಮನೆ ಹೊಸತು ಎಂದು ಟ್ರೈ ಮಾಡುವ ಅಗತ್ಯವಿಲ್ಲ.

ಮೈಸೂರು ಮಿತ್ರ ಗುರುವಾರ 12 ಮಾರ್ಚ್ 2026

ಮಾ.14ರಂದು ವಿಸಿ ಫಾರಂನಲ್ಲಿ ಕ್ರೀಡಾಂಗಣ ಅಭಿವೃದ್ಧಿಗೆ ಚಾಲನೆ

ಮಂಡ್ಯ ಕ್ಷೇತ್ರದಿಂದ 15 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ



ಮಂಡ್ಯದಲ್ಲಿ ನಡೆದ ಪೂರ್ವಭಾವಿ ಸಭೆಯನ್ನು ಉದ್ಘಾಟಿಸುತ್ತಿರುವ ಜೆಡಿಎಸ್ ಮುಖಂಡರು.

ಮಂಡ್ಯ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಮಾ. 14ರಂದು ನಡೆಯಲಿರುವ ಕಾರ್ಯಕ್ರಮವು ಕೇವಲ ಒಂದು ಸರ್ಕಾರಿ ಸಮಾರಂಭವಲ್ಲ, ಇದು ನಮ್ಮ ಜಿಲ್ಲೆಯ ಅಭಿವೃದ್ಧಿಯ ಪ್ರತಿಬಿಂಬ. ಈ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಂಡ್ಯ ವಿಧಾನಸಭಾ ಕ್ಷೇತ್ರದಿಂದ 15 ಸಾವಿರ ಮಂದಿ ಭಾಗವಹಿಸಲಿದ್ದಾರೆ ಎಂದು ಜೆಡಿಎಸ್ ಮುಖಂಡ, ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರ ತಿಳಿಸಿದರು.

ನಗರದ ಹೊರ ವಲಯದ ಬೆಳಕು ರೆಸಾರ್ಟ್‌ನಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಜಾತ್ಯಾತೀತ ಜನತಾದಳ ವತಿಯಿಂದ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾ.14ರಂದು ತಾಲೂಕಿನ ವಿ.ಸಿ. ಫಾರಂ ನಲ್ಲಿ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಡಿ 14 ಕೋಟಿ ವೆಚ್ಚದಲ್ಲಿ ನಿರ್ಮಿಸಲಿರುವ ಬಹುಪಯೋಗಿ ಒಳಾಂ ಗಣ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ಹಾಗೂ ಅಂಗವಿಕಲರಿಗೆ ಉಚಿತ ಎಲೆಕ್ಟ್ರಿಕ್ ಸ್ಕೂಟರ್ ವಿತರಣೆ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಪ್ರತಿ ಗ್ರಾಮ ಪಂಚಾಯಿತಿ ಮತ್ತು ಬೂತ್ ಮಟ್ಟದಲ್ಲಿ ನಮ್ಮ ಕಾರ್ಯಕರ್ತರು ಸಕ್ರಿಯರಾಗಬೇಕು. ಜನರನ್ನು ಕಾರ್ಯಕ್ರಮಕ್ಕೆ ಕರೆತರಲು ಅಗತ್ಯವಿರುವ ವಾಹನ ಸೌಕರ್ಯ ಮತ್ತು ಇತರೆ ವ್ಯವಸ್ಥೆಗಳನ್ನು ಮಾಡಲಾಗುವುದು. ಕುಮಾರಸ್ವಾಮಿ ಅವರು ಜಿಲ್ಲೆಗೆ ನೀಡುತ್ತಿರುವ ಕೊಡುಗೆಯನ್ನು ಜನರಿಗೆ ತಲುಪಿಸಲು ಇದು ಸೂಕ್ತ ವೇದಿಕೆಯಾಗಿದೆ ಎಂದು ಹೇಳಿದರು.

ನಮ್ಮ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಅವರು ಹಮ್ಮಿಕೊಂಡಿರುವ ತಳಮಟ್ಟದಿಂದ ಜಾ.ದಳ ಸಂಘಟಿಸುವ ಮಹತ್ವಾಕಾಂಕ್ಷಿ ಕಾರ್ಯಕ್ರಮದ 'ಮಿಸ್ ಕಾಲ್ ಅಭಿಯಾನ' ಮತ್ತು ಸದಸ್ಯತ್ವ ನೋಂದಣಿ ಕಾರ್ಯಕ್ರಮಕ್ಕೆ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಹೆಚ್ಚಿನ ಬೆಂಬಲ ನೀಡಬೇಕಿದೆ. ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 2.5 ಲಕ್ಷ ಮತದಾರರ ಇದ್ದು, ಸದ್ಯ 7 ಸಾವಿರ ಸದಸ್ಯತ್ವ ನೋಂದಣಿಯಾಗಿದ್ದು, ಪ್ರತಿ ಬೂತ್‌ನಿಂದ ಕನಿಷ್ಠ 100 ಜನರಂತೆ ಒಟ್ಟು 25,000 ಸದಸ್ಯರ ನೋಂದಾವಣೆ ಆಗಬೇಕು ಎಂದು ಮನವಿ ಮಾಡಿದರು.

ನಾನು ಹಣ ಮಾಡಲು ಅಥವಾ ಆಸ್ತಿ ಮಾಡಲು ರಾಜಕೀಯಕ್ಕೆ ಬಂದಿಲ್ಲ. ಕಾರ್ಯಕರ್ತರು ಮತ್ತು ಮುಖಂಡರನ್ನು ಬೆಳೆಸುವುದೇ ನನ್ನ ಗುರಿ. ಮುಂದಿನ 2 ವರ್ಷಗಳ ಕಾಲ ಯಾವುದೇ ಚುನಾವಣೆ ಇರಲಿ ನಾನು ನಿಮ್ಮ ಸೇವಕನಾಗಿ, ನಿಮ್ಮ ನೋವು-ನಲಿವುಗಳಲ್ಲಿ ಭಾಗಿಯಾಗಲು ಸಿದ್ಧನಿದ್ದೇನೆ. ಜನತೆ ಮತ್ತು ಪಕ್ಷಕ್ಕಾಗಿ ದಿನದ 24 ಗಂಟೆ ಶ್ರಮಿಸಲು ನಾನು ಮತ್ತು ನನ್ನ ಕುಟುಂಬ ಸಿದ್ಧವಾಗಿದೆ ಎಂದು ಭರವಸೆ ನೀಡಿದರು.

ನಾನು ಗುತ್ತಿಗೆದಾರರ ಕೆಲಸ ಮಾಡುವುದಿಲ್ಲ ಮತ್ತು ಯಾರಿಗೂ ಅನ್ಯಾಯ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಮಂಡ್ಯ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಯೇ ನನ್ನ ಮೊದಲ ಆದ್ಯತೆ ಎಂದರು. ಜಾ.ದಳ ಜಿಲ್ಲಾಧ್ಯಕ್ಷ ಡಿ.ರಮೇಶ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಜಿ.ಬಿ. ಶಿವಕುಮಾರ್, ನಗರಸಭೆ ಮಾಜಿ ಅಧ್ಯಕ್ಷ ಎಂ.ವಿ.ಪ್ರಕಾಶ್(ನಾಗೇಶ್), ಎಸ್.ಸಿ, ಎಸ್.ಟಿ ವಿಭಾಗದ ಜಿಲ್ಲಾಧ್ಯಕ್ಷ ಸಾತನೂರು ಜಯರಾಮ್, ಮಾಹಿತಿ ತಂತ್ರಜ್ಞಾನ ವಿಭಾಗದ ಜಿಲ್ಲಾಧ್ಯಕ್ಷ ನವೀನ್ ಕುಮಾರ್, ಅಲ್ಪಸಂಖ್ಯಾತರ ವಿಭಾಗದ ಮಹಮದ್, ಮುಖಂಡರಾದ ಲೋಕೇಶ್, ರಾಮಲಿಂಗೇಗೌಡ, ಕಿರಣ್, ಪಾಪಯ್ಯ, ಇಂದ್ರಮ್ಮ, ಜಯಶೀಲಮ್ಮ, ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ ಉಪಸ್ಥಿತರಿದ್ದರು.

ಮಂಚಮ್ಮ ದೇವಿಗೆ ವರ್ಷದಲ್ಲಿ 8 ದಿನ ವಿಶೇಷ ಪೂಜೆ

ಭಾರತೀನಗರ: ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದಲ್ಲಿ ಶ್ರೀಮಂಚಮ್ಮ ದೇವಾಲಯದಲ್ಲಿ ದೇವಿಗೆ ವರ್ಷದಲ್ಲಿ 8 ದಿನ ಮಾತ್ರ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ದೊರಕಿತು.

ಮಂಗಳವಾರ ರಾತ್ರಿ ಕೊಂಡ ಬಂಡಿ ಉತ್ಸವದ ನಂತರ ಕೊಂಡಕ್ಕೆ ಹಾಕಲಾಗಿದ್ದ ಸೌದೆಗೆ ವಿಶೇಷ ಪೂಜೆ ಸಲ್ಲಿಸಿ ಬೆಂಕಿಯನ್ನು ಹಾಕಲಾಯಿತು. ನಂತರ ಮಂಚಮ್ಮ, ಮಾಕಳಮ್ಮ, ಮಾರಮ್ಮ, ಅಟ್ಟಿಮಾರಮ್ಮ, ಬೊಪ್ಪಸಮುದ್ರ ಚೌಡೇಶ್ವರಿ ಸೇರಿದಂತೆ ಗ್ರಾಮ ದೇವತೆಗಳ ಹೂ-ಹೊಂಬಾಳೆ ಹಾಗೂ ಉತ್ಸವವು ಭಕ್ತಿಪ್ರಧಾನವಾಗಿ ಜರುಗಿದವು. ಬುಧವಾರ ಮುಂಜಾನೆ ಮಾರಮ್ಮ ದೇವತೆಯ ಕೊಂಡೋತ್ಸವವು ಜರುಗಿತು. ವರ್ಷವೆಲ್ಲಾ ಬಾಗಿಲು ಮುಚ್ಚಿದ್ದ ಮಂಚಮ್ಮ ದೇವಿಗೆ ಮಂಗಳವಾರ ರಾತ್ರಿಯಿಂದ ಬಾಗಿಲು ತೆರೆದು ಮಾ.17ರ ಮಂಗಳವಾರದವರೆಗೆ 8 ದಿನಗಳ ಕಾಲ ವಿಶೇಷ ಪೂಜೆ ಸಲ್ಲಿಸಲಾಗುವುದು. ಮಾರಮ್ಮ ದೇವಿಯ ಕೊಂಡೋತ್ಸವ, ಸಾವಿರಾರು ಭಕ್ತಾಧಿಗಳ ಸಮ್ಮುಖದಲ್ಲಿ ಗ್ರಾಮ ದೇವತೆಗಳ ಉತ್ಸವ ಸಂಭ್ರಮದಿಂದ ಜರುಗಿದವು. ಮಾರಮ್ಮ ದೇವಿಯ ಹಬ್ಬದ ವಿಶೇಷವಾಗಿ ಮಂಗಳವಾರದಿಂದಲೇ ದೇವರುಗಳಿಗೆ ಹೋಮ, ಹವನ ಮತ್ತು ವಿಶೇಷ ಪೂಜಾಕೈಂಕರ್ಯಗಳು ಜರುಗುವುದರೊಂದಿಗೆ ಗ್ರಾಮದಲ್ಲಿ ಹಬ್ಬಕ್ಕೆ ಮೆರಗು ಬಂದಿತು. ಗ್ರಾಮ ದೇವತೆಗಳ ಉತ್ಸವ ಮತ್ತು ಮೆರವಣಿಗೆ ತಂಬಿಟ್ಟಿನ ಆರತಿ ಪ್ರತಿಯೊಂದು ಬೀದಿಯಲ್ಲಿ ಬುಧವಾರ ಮಧ್ಯಾಹ್ನ 3 ಗಂಟೆಯ ತನಕ ಜರುಗಿತು.

ಹೇಮಾವತಿ ನಾಲೆ ಆಧುನೀಕರಣದಲ್ಲಿ ಭಾರೀ ಅವ್ಯವಹಾರ ಆರೋಪ

ಕೆ.ಆರ್.ಪೇಟೆಯಲ್ಲಿ ರೈತರಿಂದ ಬೈಕ್ ರ‍್ಯಾಲಿ

ಕೆ.ಆರ್.ಪೇಟೆ,ಮಾ.11– ತಾಲೂಕು ರೈತ ಸಂಘದ ವತಿಯಿಂದ ಕೆಆರ್ ಪೇಟೆ ತಾಲೂಕಿನ ಮೂಲಕ ಹಾದು ಹೋಗಿರುವ ಹೇಮಾವತಿ ಎಡದಂಡೆಯ ಸಾಹುಕಾರ್ ಚನ್ನಯ್ಯ ನಾಲೆಯ ಆಧುನೀಕರಣ ಕಾಮಗಾರಿಯಲ್ಲಿ ಸುಮಾರು 500 ಕೋಟಿಗೂ ಹೆಚ್ಚು ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ನೂರಾರು ರೈತ ಸಂಘದ ಕಾರ್ಯಕರ್ತರು ಪಟ್ಟಣದಲ್ಲಿ ಬೈಕ್ ರ‍್ಯಾಲಿ ಮೂಲಕ ಪ್ರತಿಭಟನೆ ನಡೆಸಿದರು.



ರೈತ ಸಂಘದ ನೂರಾರು ಕಾರ್ಯಕರ್ತರು ಪಟ್ಟಣದಲ್ಲಿ ಬೈಕ್ ರ‍್ಯಾಲಿ ಮೂಲಕ ಪ್ರತಿಭಟನೆ ನಡೆಸಿದರು.

ಮಂಡ್ಯ ಜಿಲ್ಲಾ ರೈತ ಸಂಘದ ಮಾಜಿ ಅಧ್ಯಕ್ಷರು ಹಾಗೂ ರೈತ ಸಂಘದ ಹಿರಿಯ ನಾಯಕರಾದ ಮುದುಗೆರೆ ರಾಜೇಗೌಡ, ತಾಲೂಕು ರೈತ ಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ, ಕಾರ್ಯದರ್ಶಿ ಬೂಕನಕೆರೆ ನಾಗರಾಜು, ಕರೋಟಿ ತಮ್ಮಯ್ಯ, ಸಾಮಾಜಿಕ ಕಾರ್ಯಕರ್ತ ಜಯಣ್ಣ ಸೇರಿದಂತೆ ಹಲವಾರು ರೈತ ಮುಖಂಡರ ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೈಕ್ ರ‍್ಯಾಲಿ ನಡೆಸಿ ಹೇಮಾವತಿ ಕಚೇರಿಯ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ರೈತ ನಾಯಕ ಮುದುಗೆರೆ ರಾಜೇಗೌಡ ಹೇಮಾವತಿ ನಾಲೆಯ ಆಧುನೀಕರಣ ಕಾಮಗಾರಿಗೆ ಸುಮಾರು 1000ಕೋಟಿ ರೂ. 2017ರಲ್ಲಿ ಬಿಡುಗಡೆಯಾಗಿತ್ತು. ಆಧುನೀಕರಣ ಹೆಸರಿನಲ್ಲಿ ಕಾಮಗಾರಿಯನ್ನೇ ನಡೆಸದೆ ಅಧಿಕಾರಿಗಳು, ಗುತ್ತಿಗೆದಾರರು ಪರಸ್ಪರ ಶಾಮೀಲಾಗಿ ಸುಮಾರು 500 ಕೋಟಿಗೂ ಹೆಚ್ಚು ಭ್ರಷ್ಟಾಚಾರ ನಡೆಸಿದ್ದಾರೆ. ಈ ಬಗ್ಗೆ ದಾಖಲೆ ಸಮೇತ ಸುಮಾರು 500ಪುಟಗಳ ದೂರನ್ನು ಸರ್ಕಾರಕ್ಕೆ, ಮುಖ್ಯಮಂತ್ರಿಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವರುಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಹಾಗಾಗಿ ಈ ಬೈಕ್ ರ‍್ಯಾಲಿ ಮೂಲಕ ಅವ್ಯವಹಾರ ನಡೆಸಿರುವ ಹೇಮಾವತಿ ನಾಲೆಗಳ ಮೂಲಕ ಜಾಥಾ ನಡೆಸಿ ನಾಗಮಂಗಲ ಪಟ್ಟಣದಲ್ಲಿರುವ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಚೆಲುವರಾಯಸ್ವಾಮಿ ಅವರ ನಿವಾಸದ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ರೈತ ಮುಖಂಡರಾದ ಲಕ್ಷ್ಮಿಪುರ ಜಗದೀಶ್, ಮಿಲ್ ರಾಜಣ್ಣ ಮರು ವನಹಳ್ಳಿ ಶಂಕರ್, ಕರೋಟಿ ತಮ್ಮಯ್ಯ, ಪಿ.ಬಿ.ಮಂಚನಹಳ್ಳಿ ನಾಗೇಗೌಡ, ಮಾಕವಳ್ಳಿ ರವಿ, ಯೋಗೇಶ್, ಹೊನ್ನೇಗೌಡ, ಹಿರೀಕಳಲೆ ಬಸವರಾಜು, ಚೌಡೇನಹಳ್ಳಿ ಶಂಕರ್, ಮಹಿಳಾ ಘಟಕದ ಅಧ್ಯಕ್ಷೆ ಲತಾ ಕೇಶವ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಚಿಕ್ಕಮರಳಿಯಲ್ಲಿ ಶ್ರೀ ಕಾಳಿಕಾಂಬ ಕಮಠೇಶ್ವರಿ ಅಮ್ಮನ ವಿಜೃಂಭಣೆಯ ಉತ್ಸವ

ಪಾಂಡವಪುರ, ಮಾ.11– ತಾಲೂಕಿನ ಚಿಕ್ಕಮರಳಿ ಗ್ರಾಮದ ಗ್ರಾಮದೇವತೆ ಶ್ರೀಕಾಳಿಕಾಂಭ ಕಮಠೇಶ್ವರಿ ಅಮ್ಮನವರ ಉತ್ಸವವು ಮಂಗಳವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ವಿಶ್ವಕರ್ಮ ಸಮುದಾಯದ ಕುಲದೇವತೆಯಾದ ಶ್ರೀಕಾಳಿಕಾಂಭ ಕಮಠೇಶ್ವರಿ ಅಮ್ಮನವರ ಉತ್ಸವದ ಅಂಗವಾಗಿ ಗ್ರಾಮದ ಎಲ್ಲಾ ಬೀದಿಗಳಲ್ಲೂ ವಿದ್ಯುತ್ ದೀಪಲಂಕಾರ ಮಾಡಲಾಗಿತ್ತು. ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು.

ಮಂಗಳವಾರ ಸಂಜೆ ಶ್ರೀಕಾಳಿಕಾಂಭ ಕಮಠೇಶ್ವರಿ ಅಮ್ಮನವರ ಮೂರ್ತಿಯನ್ನು ಗ್ರಾಮದ ಹೊರವಲಯದಲ್ಲಿ ಇರುವ ಲೋಕಪಾವನಿ ನದಿ ತೀರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಉತ್ಸವ ರೆಡಿ ಮಾಡಿ ದೇವಿಗೆ ಕೀರಿಟ ಧಾರಣೆ ಮಾಡಿ ಹೂವು ಹೊಂಬಾಳೆಗಳಿಂದ ಅಲಂಕರಿಸಲಾಯಿತು.

ಬಳಿಕ ಅಲ್ಲಿಂದ ಮೆರವಣಿಗೆಯ ಮೂಲಕ ಗ್ರಾಮಕ್ಕೆ ತರಲಾಯಿತು. ಗ್ರಾಮದಲ್ಲಿ ರಾತ್ರಿ ವಿಡಿ ಮೆರವಣಿಗೆಯನ್ನು ವಿಜೃಂಭಣೆಯಿಂದ ನಡೆಸಲಾಯಿತು. ಉತ್ಸವವು ಮನೆಯ ಮುಂದೆ ಬರುತ್ತಿದ್ದಂತೆಯೇ ಭಕ್ತರು ದೇವಿಗೆ



ಪೂಜೆಸಲ್ಲಿಸಿ ಭಕ್ತಿಭಾವ ಪ್ರದರ್ಶಿಸಿದರು.

ಬುಧವಾರ ಬೆಳಗ್ಗೆ ದೇವಸ್ಥಾನದ ಮುಂಭಾಗ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ನಡೆಸಲಾಯಿತು. ಚಿಕ್ಕಮರಳಿ ಗ್ರಾಮ ಸೇರಿದಂತೆ ವಿವಿಧ ಗ್ರಾಮಗಳಿಂದ ಭಕ್ತರು, ಸಂಬಂಧಿಕರು ನೂರಾರು ಸಂಖ್ಯೆಯಲ್ಲಿ ಆಗಮಿಸಿ ಪ್ರಸಾದ ಸ್ವೀಕರಿಸಿದರು. ಶ್ರೀಕಾಳಿಕಾಂಬ ಕಮಠೇಶ್ವರಿ ಅಮ್ಮನವರ ಉತ್ಸವದಲ್ಲಿ ವಿಶ್ವಕರ್ಮ ಸಮುದಾಯ ಸೇರಿದಂತೆ ಗ್ರಾಮದ ಎಲ್ಲಾ ಸಮುದಾಯದ ಯಜಮಾನರು, ಮುಖಂಡರು ಭಾಗವಹಿಸಿದ್ದರು.

ಕೆಆರ್‌ಎಸ್ ಪೊಲೀಸರಿಂದ ಕೊಲೆ ಪ್ರಯತ್ನ ಕೇಸ್ ಮುಚ್ಚಿ ಹಾಕಲು ಯತ್ನ

ಡಿವೈಎಸ್ಪಿಗೆ ಹಲ್ಲೆಗೊಳಗಾದ ವ್ಯಕ್ತಿಯ ಪತ್ನಿ ದೂರು



ಶ್ರೀರಂಗಪಟ್ಟಣ: ವ್ಯಕ್ತಿ ಮೇಲೆ ಹಲ್ಲೆ ಮಾಡಿ, ಕೊಲೆಗೆ ಯತ್ನಿಸಿದ್ದ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ಡಿವೈಎಸ್‌ಪಿ ಯು.ಡಿ ಕೃಷ್ಣಕುಮಾರ್ ಅವರಿಗೆ ಹಲ್ಲೆಗೊಳಗಾದ ಕುಟುಂಬಸ್ಥರು ದೂರು ನೀಡಿದ್ದಾರೆ.

ಪಟ್ಟಣದ ಡಿವೈಎಸ್‌ಪಿ ಕಚೇರಿಗೆ ಹಿಂದೂ ಜಾಗರಣಾ ವೇದಿಕೆ ಜಿಲ್ಲಾ ಸಂಚಾಲಕ ಚಂದನ್ ಜೊತೆಗೆ ಹಲ್ಲೆಗೊಳಗಾಗಿದ್ದ ಬಿ.ಎಸ್ ಅನಿಲ್ ಅವರ ಪತ್ನಿ ರಕ್ಷಿತಾ ಭೇಟಿ ನೀಡಿ ಕೆಆರ್‌ಎಸ್ ಪೊಲೀಸ್ ಠಾಣಾ ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಿದರು.

ತಾಲೂಕಿನ ಬೆಳಗೊಳ ಗ್ರಾಮದಲ್ಲಿ ವಾಸವಾಗಿರುವ ನನ್ನ ಪತಿ ಬಿ.ಎಸ್.ಅನಿಲ್ ಫೆ.5ರಂದು ತೋಟದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹಾಡಹಗಲೇ ವ್ಯಕ್ತಿಯೊಬ್ಬ ಮಚ್ಚಿನಿಂದ ಹಲ್ಲೆ ಮಾಡಿ, ಕೊಲೆಗೆ ಯತ್ನಿಸಿದ್ದಾನೆ. ನನ್ನ ಗಂಡನ ಸಮಯ ಪ್ರಜ್ಞೆಯಿಂದ ತಲೆ ಮತ್ತು ಕುತ್ತಿಗೆ ಭಾಗಕ್ಕೆ ಬೀಳುತ್ತಿದ್ದ ಏಟು ಎಡಗೈನ ಮುಂಗೈಗೆ ಬಿದ್ದು, ಮುಂಗೈ ಮುರಿದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆ ವೇಳೆ ಕೆಆರ್‌ಎಸ್ ಪೊಲೀಸ್ ಠಾಣೆಗೆ ವಿಷಯ ತಿಳಿಸಿದ್ದರಿಂದ ಸ್ಥಳಕ್ಕೆ ಆಗಮಿಸಿದ ಪೊಲೀಸರು ಸ್ಥಳದಲ್ಲೇ ಇದ್ದ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ನಂತರ ಆತನನ್ನು ಪೊಲೀಸರೇ ಬಿಟ್ಟು ಕಳುಹಿಸಿದರು. ಪರಿಣಾಮ ಕೃತ್ಯಕ್ಕೆ ಬಳಸಿದ್ದ ಮಚ್ಚಿನ ಸಹಿತ ತಲೆ ಮರೆಸಿಕೊಂಡಿದ್ದಾನೆ. ಆರೋಪಿಯ ಆಮಿಷಕ್ಕೆ ಒಳಗಾದ ಕೆಆರ್‌ಎಸ್ ಪೊಲೀಸರು ನ್ಯಾಯಾಲಯ ಹಾಗೂ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದು, ತಮಗೆ ರಕ್ಷಣೆ ನೀಡುವಂತೆ ಕೋರಿದ್ದಾರೆ.

ಒಂದನೇ ಪುಟದಿಂದ

ಅಡುಗೆ ಅನಿಲದ ಆತಂಕ ಬೇಡ

ಅವರಿಗೆ ಪೂರೈಕೆಯನ್ನು ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿದೆ. ವಿದ್ಯಾರ್ಥಿ ನಿಲಯಗಳು, ಆಸ್ಪತ್ರೆ ಮತ್ತು ಸಾರ್ವಜನಿಕ ಉಪಯುಕ್ತ ಕೇಂದ್ರಗಳಿಗೆ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಾಸ ಆಗುವುದಿಲ್ಲ. ಹೋಟೆಲ್, ಮದುವೆ ಮತ್ತು ಇತರೆ ಸಮಾರಂಭಗಳಿಗೆ ಪೂರೈಕೆ ಮಾಡಲಾಗದು ಎಂದು ಸ್ಪಷ್ಟಪಡಿಸಿದರು.

ಶೂನ್ಯವೇಳೆಯಲ್ಲಿ ಡಾ.ರಂಗನಾಥ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಇಲ್ಲಿಯವರೆಗೂ ಅಡುಗೆ ಅನಿಲ ಸಿಲಿಂಡರ್ ಸರಬರಾಜಿನಲ್ಲಿ ಯಾವುದೇ ಸಮಸ್ಯೆ ಉಂಟಾಗಿಲ್ಲ. ಸಮಸ್ಯೆ ಆಗುತ್ತದೆ ಎಂಬ ಹಿನ್ನೆಲೆಯಲ್ಲಿ ಸಿಲಿಂಡರ್‌ಗಳ ಸಂಗ್ರಹಕ್ಕೆ ಮುಂದಾಗುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು. ಇದು ಯುದ್ಧದ ಸಮಯ ಒಬ್ಬರ ಮೇಲೆ ಒಬ್ಬರು ಆರೋಪ ಮಾಡುವುದ ರಿಂದ ಏನೂ ಪ್ರಯೋಜನ ಇಲ್ಲ, ಕೇಂದ್ರದ ಮೇಲೆ ಆರೋಪ ಹೊರಿಸುವುದೂ ಸರಿಯಲ್ಲ.

ನಮ್ಮಲ್ಲಿಯೇ ಶೇಕಡ 35ರಷ್ಟು ಅಡುಗೆ ಅನಿಲ ಉತ್ಪಾದನೆ ಆಗುತ್ತಿದೆ. ಉಳಿ ದದ್ದನ್ನು ಅಮೆರಿಕ, ರಷ್ಯಾ ಹಾಗೂ ಅರಬ್ ರಾಷ್ಟ್ರಗಳಿಂದ ಪಡೆದುಕೊಳ್ಳಲಾಗುತ್ತಿದೆ.

ಹಾರ್ಮುಜ್ ಕೊಲ್ಲಿಯಲ್ಲಿ ತೈಲ ಹಡಗುಗಳ ಸಂಚಾರಕ್ಕೆ ಇರಾನ್ ಅಡ್ಡಿ ಉಂಟು ಮಾಡುತ್ತಿರುವುದರಿಂದ ನಮಗೆ ಕೊರತೆ ಎದುರಾಗಿದೆ. ನಮಗೆ ದಿನಕ್ಕೆ 3.50 ಲಕ್ಷ ಗೃಹ ಬಳಕೆ ಸಿಲಿಂಡರ್ ಅಗತ್ಯವಿದೆ. ಹಾಗೆಯೇ ವಾಣಿಜ್ಯ 50,000 ಸಿಲಿಂಡರ್ ಅಗತ್ಯವಿದೆ. ತೈಲ ಕಂಪನಿ ಅಧಿಕಾರಿಗಳ ಮಾಹಿತಿ ಆಧರಿಸಿ ವಿವರಣೆ ನೀಡಿದ್ದೇನೆ. ಮುಂದೆಯೂ ನಮ್ಮ ಅಧಿಕಾರಿಗಳು ಅಡುಗೆ ಅನಿಲ ಅಭಾವ ಆಗದಂತೆ ಕ್ರಮ ಕೈಗೊಳ್ಳಲಿದ್ದಾರೆ ಎಂಬ ಭರವಸೆ ನೀಡಿದರು.

ಎಲ್‌ಪಿಜಿ ಭೀತಿ ಬೇಡ; ಕೇಂದ್ರ ಅಭಯ

ಭಾರತವು ಸರಿಸುಮಾರು 40 ದೇಶಗಳಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ನಮಗೆ ಪ್ರತಿದಿನ 55 ಲಕ್ಷ ಬ್ಯಾರಲ್ ಕಚ್ಚಾ ತೈಲ ಬೇಕು. ವಿವಿಧ ಮೂಲಗಳಿಂದ ನಾವು ಇಂದು ಪಡೆದಿರುವ ಕಚ್ಚಾ ತೈಲವು, ಇದೇ ಅವಧಿಯಲ್ಲಿ ಹೊರ್ಮುಜ್ ಜಲಸಂಧಿಯ ಮೂಲಕ ಬರಬಹುದಾಗಿದ್ದ ಕಚ್ಚಾ ತೈಲದ ಪ್ರಮಾಣಕ್ಕಿಂತ ಹೆಚ್ಚಿದೆ ಎಂದು ಕೂಡ ಸುಜಾತಾ ಅವರು ಮಾಹಿತಿ ನೀಡಿದ್ದಾರೆ. ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಬೇರೆ ಬೇರೆ ಕಡೆಗಳಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿವೆ. ಹೀಗಾಗಿ, ಈಗ ಶೇ.70ರಷ್ಟು ಕಚ್ಚಾ ತೈಲ ಆಮದಿಗೆ ಹೊರ್ಮುಜ್ ಜಲಸಂಧಿಯನ್ನು ಬಳಸಬೇಕಾದ ಅಗತ್ಯ ಇಲ್ಲ ಎಂದು ಅವರು ತಿಳಿಸಿದ್ದಾರೆ. ಎಲ್‌ಎನ್‌ಜಿ ಹೊತ್ತ ಎರಡು ಹಡಗುಗಳು ಕೆಲವೇ ದಿನಗಳಲ್ಲಿ ಭಾರತ ತಲುಪಲಿವೆ, ಆಗ ದೇಶದಲ್ಲಿ ಇಂಧನ ಪೂರೈಕೆಯು ಇನ್ನಷ್ಟು ಸುಧಾರಿಸಲಿದೆ ಎಂದು ಹೇಳಿದ್ದಾರೆ.

ಸೇರ್ಪಡೆ ಸಂಬಂಧ ಯದುವೀರ್ ಮನವಿ

ಹಣಕಾಸು ಸಚಿವರಿಗೆ ಮನವಿ ಸಲ್ಲಿಕೆ: ಈ ಕುರಿತು ಮಾಹಿತಿ ನೀಡಿರುವ ಸಂಸದ ಯದುವೀರ್ ಒಡೆಯರ್, ನಗರ ಆರ್ಥಿಕ ವಲಯಕ್ಕೆ ಮೈಸೂರನ್ನು ಸೇರಿಸಬೇಕು ಎಂದು ಹಣಕಾಸು ಸಚಿವರಿಗೆ ಮನವಿ ಸಲ್ಲಿಸಲಾಗಿತ್ತು. ಬುಧವಾರ ಮತ್ತೊಮ್ಮೆ ಈ ಕುರಿತು ಮನವಿ ಸಲ್ಲಿಸಿದಾಗ, ಕೂಡಲೇ ಕ್ರಮ ಕೈಗೊಳ್ಳುವುದಾಗಿ ಎಂದು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು. ಈ ಯೋಜನೆಗೆ ಮೈಸೂರು ಸೇರ್ಪಡೆಯಾದರೆ ಎಲ್ಲ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅವಕಾಶ ದೊರೆಯುತ್ತದೆ ಎಂದರು. ಮೈಸೂರು ಈಗಾಗಲೇ ಶ್ರೀಮಂತ ಪಾರಂಪರೆ ಹಾಗೂ ಪರಿಸರವನ್ನು ಹೊಂದಿದೆ. ಅದಕ್ಕೆ ಯಾವುದೇ ಧಕ್ಕೆಯಾಗದಂತೆ, ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಮುಂದಾಗಬೇಕಿದೆ ಎಂದು ಸಂಸದರು ತಿಳಿಸಿದರು.

ಎಲ್ಲರ ಅಭಿಪ್ರಾಯ ಸಂಗ್ರಹ: ಮೈಸೂರು ಅಭಿವೃದ್ಧಿ ಕುರಿತು ಎಲ್ಲ ಕ್ಷೇತ್ರದ ತಜ್ಞರು, ರಾಜಕೀಯ ನಾಯಕರು ಹಾಗೂ ಮುಖಂಡರು, ಸಾರ್ವಜನಿಕರೊಂದಿಗೆ ಸಭೆ ನಡೆಸಿ ಸಲಹೆ-ಸೂಚನೆ, ಅಭಿಪ್ರಾಯ ಸಂಗ್ರಹಿಸಿ ಯೋಜನೆ ರೂಪಿಸಲಾಗುವುದು. ಐದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎರಡು ಮತ್ತು ಮೂರನೇ ಸ್ತರದ ನಗರಗಳು, ತೀರ್ಥಕ್ಷೇತ್ರಗಳಲ್ಲಿ ಅತ್ಯಾಧುನಿಕ ಮೂಲಸೌಕರ್ಯ ಸುಧಾರಣೆ ಕೈಗೊಳ್ಳಲಾಗುತ್ತದೆ. ಹಲವು ಬಾರಿ ಮನವಿ ಮಾಡಿದ್ದರಿಂದ ನಿರ್ಮಲಾ ಸೀತಾರಾಮನ್ ಅವರು ಮೈಸೂರನ್ನು ಈ ಯೋಜನೆಗೆ ಸೇರಿಸುವ ಭರವಸೆ ನೀಡಿದ್ದಾರೆ ಎಂದರು. ಈ ಯೋಜನೆಗಳು ಆವಿಷ್ಕಾರ ಮತ್ತು ಅವಕಾಶಗಳ ಹೆಬ್ಬಾಗಿಲು ತೆರೆಯಲಿವೆ. ನಮ್ಮ ನಗರವನ್ನು ಇನ್ನಷ್ಟು ಸುಂದರ ಹಾಗೂ ಅಭಿವೃದ್ಧಿಗೊಳಿಸಲು ಈಗ ಅವಕಾಶ ದೊರೆಯುತ್ತದೆ. ಈ ನಿಟ್ಟಿನಲ್ಲಿ ಎಲ್ಲರೂ ಪಕ್ಷಾತೀತವಾಗಿ ಕೈಜೋಡಿಸೋಣ, ಮೈಸೂರನ್ನು ಜಗದ್ವಿಖ್ಯಾತಿಗೊಳಿಸೋಣ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದ್ದಾರೆ.

ಮಹಿಳೆ ಸೇರಿ ಇಬ್ಬರ ಹತ್ಯೆ: ಆರೋಪಿ ಬಂಧನ

ದಾಖಲಿಸಿಕೊಂಡಿದ್ದಾರೆ. ಮೇಲ್ನೋಟಕ್ಕೆ ಅಕ್ರಮ ಸಂಬಂಧವೇ ಘಟನೆಗೆ ಕಾರಣ ಎನ್ನಲಾಗುತ್ತಿದ್ದು ಆರೋಪಿಯ ವಿಚಾರಣೆ ಪೂರ್ಣಗೊಂಡ ಬಳಿಕ ಸತ್ಯಾಸತ್ಯತೆ ಹೊರ ಬರಬೇಕಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ಮಡಿಕೇರಿ ಡಿವೈಎಸ್‌ಪಿ ಸೂರಜ್, ವೃತ್ತ ನಿರೀಕ್ಷಕ ಚಂದ್ರಶೇಖರ್, ವಿಧಿ ವಿಜ್ಞಾನ ಘಟಕದ ಅಧಿಕಾರಿಗಳು, ಶ್ವಾನದಳ ಮತ್ತು ಕ್ರೈಂ ಸಿಬ್ಬಂದಿ ತೆರಳಿ ಮಹಜರು ನಡೆಸಿದರು. ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೈಸೂರು ಕೈಗಾರಿಕಾ ವಲಯಕ್ಕೂ ಗ್ಯಾಸ್ ಟ್ರಬಲ್!

ಇದೇ ರೀತಿಯಲ್ಲಿ ಸಿಲಿಂಡರ್ ಪೂರೈಕೆಯಲ್ಲಿ ಸಮಸ್ಯೆಯಾದರೆ ಪರ್ಯಾಯ ಮಾರ್ಗಗಳ ಮೊರೆ ಹೋಗಬೇಕಾಗುತ್ತದೆ. ಪರಿಸ್ಥಿತಿ ಸುಧಾರಣೆ ಕಾಣುವ ನಿರೀಕ್ಷೆ ಇದೆ. ಅದರಂತೆ ಆಗದಿದ್ದರೆ ಗಂಭೀರ ಸಮಸ್ಯೆ ಎದುರಿಸಬೇಕಾಗುತ್ತದೆ. ಕಾರ್ಖಾನೆಗಳನ್ನು ಮುಚ್ಚದಿದ್ದರೂ ಉತ್ಪಾದನಾ ವೆಚ್ಚ ಹೆಚ್ಚಾಗಲಿದೆ ಎಂದು ಹೇಳಿದರು.

ಯುದ್ಧದ ಹಿನ್ನೆಲೆಯಲ್ಲಿ ಇಂತಹ ಸನ್ನಿವೇಶ ನಿರ್ಮಾಣವಾಗಿರುವ ಕಾರಣ ಸರ್ಕಾರಗಳು ಸಮಸ್ಯೆಗಳನ್ನು ಸಂಪೂರ್ಣವಾಗಿ ಬಗೆಹರಿಸಲು ಸಾಧ್ಯವಾಗದೇ ಹೋಗಬಹುದು. ಹಾಗಾಗಿ ಪರ್ಯಾಯ ಮಾರ್ಗಗಳತ್ತ ಗಮನಹರಿಸುವುದು ಸೂಕ್ತವಾಗುತ್ತದೆ. ಆಯಾಯ ಕೈಗಾರಿಕೆಗಳು ಇಂತಹ ತುರ್ತು ಪರಿಸ್ಥಿತಿಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ವಿಧಾನದಡಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವುದು ಅಗತ್ಯವಾಗುತ್ತದೆ. ಕೋವಿಡ್ ಸಂದರ್ಭದಲ್ಲೇ ದೇಶ ಯಶಸ್ವಿಯಾಗಿ ಮುನ್ನಡೆದಿದೆ. ಹಾಗಾಗಿ ಇದೇನು ದೊಡ್ಡ ಸವಾಲು ಆಗಲ್ಲವೆಂದು ಭಾವಿಸಿದ್ದೇನೆ ಎಂದು ತಿಳಿಸಿದರು.

ಮೈಸೂರು ನಗರದ ಅಮರ್‌ದೀಪ್ ಗ್ಯಾಸ್ ಏಜೆನ್ಸಿ ಮಾಲೀಕರೂ ಆದ ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸೋಮವಾರವೇ ವಾಣಿಜ್ಯ ಸಿಲಿಂಡರ್ ಪೂರೈಕೆ ಸ್ಥಗಿತವಾಗಿರುವ ಕಾರಣ ಕೈಗಾರಿಕೆಗಳು, ಹೋಟೆಲ್‌ಗಳು, ಕಲ್ಯಾಣ ಮಂಟಪ, ಅನಿಲ ಚಿತಾಗಾರ ಸೇರಿದಂತೆ ಇನ್ನಿತರ ವಲಯಗಳಲ್ಲಿ ಸಹಜವಾಗಿಯೇ ಸಮಸ್ಯೆ ಎದುರಾಗಿದೆ. ಇಡೀ ದೇಶದಲ್ಲೇ ಇಂತಹ ಸನ್ನಿವೇಶ ಸೃಷ್ಟಿಯಾಗಿದೆ. ಆಸ್ಪತ್ರೆ, ಹಾಸ್ಟೆಲ್ ಹಾಗೂ ಶಾಲಾ ಕಾಲೇಜುಗಳಿಗೆ ಗೃಹ ಬಳಕೆ ಸಿಲಿಂಡರ್ ಪೂರೈಕೆ ಮಾಡಲಾಗುತ್ತದೆ. ಹಾಗಾಗಿ ಈಗ ಅವುಗಳಿಗೆ ತೊಂದರೆಯಾಗದು ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಗೃಹ ಬಳಕೆ ಸಿಲಿಂಡರ್ ಬುಕ್ ಮಾಡಿದ ಬಳಿಕ 25 ದಿನಗಳಲ್ಲಿ ಲಭ್ಯ

ಮೈಸೂರು,ಮಾ.11(ಪಿಎಂ)– ಜಿಲ್ಲೆಯಲ್ಲಿ ಗೃಹ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ಸಮಸ್ಯೆಗಳು ಇಲ್ಲ. ಬುಕ್ ಮಾಡಿದ 25 ದಿನಗಳಲ್ಲಿ ಸಿಲಿಂಡರ್ ಪೂರೈಕೆಯಾಗಲಿದೆ ಎಂದು ಆಹಾರ ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆ, ಹಾಸ್ಟೆಲ್‌ಗಳಿಗೆ ಅಡುಗೆ ಅನಿಲ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗಿಲ್ಲ. ಇಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಇಂಡಿಯನ್ ಆಯಿಲ್ ಕಾರ್ಪೋರೇಷನ್ ಸೇರಿದಂತೆ ಇತರೆ ಕಂಪನಿಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಅವರಿಂದ ಸಿಲಿಂಡರ್ ಲಭ್ಯತೆ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು. ಗೃಹ ಬಳಕೆ ಸಿಲಿಂಡರ್ ಪೂರೈಕೆಗೆ ಯಾವುದೇ ಸಮಸ್ಯೆಯಾಗಿಲ್ಲ ಎಂದು ಪ್ರತಿನಿಧಿಗಳು ಮಾಹಿತಿ ನೀಡಿದರು ಎಂದರು.

ವಾಣಿಜ್ಯ ಬಳಕೆ ಸಿಲಿಂಡರ್ ಮಾತ್ರ ಸ್ಥಗಿತಗೊಂಡಿದೆ. ಗೃಹಬಳಕೆ ಸಿಲಿಂಡರ್ ಸಂಬಂಧ ಬುಕ್ ಮಾಡಿದ 25 ದಿನಗಳ ನಂತರ ಪೂರೈಸಲು ಅವಕಾಶ ಕಲ್ಪಿಸಲಾಗಿದೆ. ಕಂಪನಿಗಳ ಪ್ರತಿನಿಧಿಗಳ ಪ್ರಕಾರ ಜಿಲ್ಲೆಯಲ್ಲಿ ಗೃಹ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದು ತಿಳಿಸಿದರು.

ಕಾಳಸಂತೆಯಲ್ಲಿ 4 ಸಾವಿರ ರೂ.ಗೆ ವಾಣಿಜ್ಯ ಸಿಲಿಂಡರ್ ಖರೀದಿ

ಮೈಸೂರು,ಮಾ.11(ಪಿಎಂ)– ಕಾಳಸಂತೆಯಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಒಂದಕ್ಕೆ 4 ಸಾವಿರ ರೂ.ನಷ್ಟು ದುಬಾರಿ ಹಣ ನೀಡಿ ಖರೀದಿಸು ತ್ತಿರುವ ಬಗ್ಗೆ ಮಾಹಿತಿ ಬಂದಿದೆ. ಇಂತಹ ಕಾಳಸಂತೆಯ ವಿರುದ್ಧ ಆಹಾರ ಇಲಾಖೆ ಕಠಿಣ ಕ್ರಮ ಜರುಗಿಸಬೇಕೆಂದು ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ ಒತ್ತಾಯಿಸಿದರು. ಮೈಸೂರು ಮಿತ್ರನೊಂದಿಗೆ ಮಾತನಾಡಿದ ಅವರು, ಗೃಹ ಬಳಕೆಯ ಸಿಲಿಂಡರ್‌ಗಳಲ್ಲಿನ ಅನಿಲವನ್ನು ವಾಣಿಜ್ಯ ಸಿಲಿಂಡರ್‌ಗಳಿಗೆ ಮರುಪೂರಣ ಮಾಡಿ ಕಾಳಸಂತೆಯಲ್ಲಿ ಒಂದಕ್ಕೆ 4 ಸಾವಿರ ರೂ.ನಷ್ಟು ದುಬಾರಿ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಯಾರೂ ಸಹ ಕಾಳಸಂತೆ ಯಲ್ಲಿ ಇಂತಹ ಸಿಲಿಂಡರ್ ಖರೀದಿ ಮಾಡಬಾರದು. ಶೀಘ್ರದಲ್ಲಿ ಸರ್ಕಾರಗಳು ಕ್ರಮ ವಹಿಸಲಿದ್ದು, ಆವರೆಗೆ ತಾಳ್ಮೆ ವಹಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಟಾಸ್ಕ್‌ಫೋರ್ಸ್ ರಚನೆ

ಬೇಸಿಗೆ ಆರಂಭ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಮುಂಜಾಗ್ರತೆಯಾಗಿ ಮುಂದಿನ ವಾರವೇ ಟಾಸ್ಕ್‌ಫೋರ್ಸ್ ರಚನೆ ಮಾಡಲಾಗುತ್ತಿದೆ ಎಂದರು.

ಗ್ರಾಪಂ ಸಿಬ್ಬಂದಿ ವೇತನ: ಗ್ರಾಮ ಪಂಚಾಯತ್ ಸಿಬ್ಬಂದಿ ವೇತನ ಪರಿಷ್ಕರಣೆಗೆ ಆರ್ಥಿಕ ಇಲಾಖೆ ಜೊತೆ ಚರ್ಚೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಇದೇ ವೇಳೆ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು. ಟಿ.ಡಿ.ರಾಜೇಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಮಲೆನಾಡು ಮಾತ್ರವಲ್ಲದೆ, ರಾಜ್ಯಾದ್ಯಂತ ಗ್ರಾಮ ಪಂಚಾಯತ್ ಬಿಲ್ ಕಲೆಕ್ಟರ್, ನೀರುಗಂಟಿಗಳು ಹಾಗೂ ಸಹಾಯಕರಿಗೆ ಕನಿಷ್ಠ ವೇತನ ಜಾರಿಗೊಳಿಸಬೇಕು ಎಂಬ ಬೇಡಿಕೆ ಇದೆ. ಈ ಮೊದಲು 2022ರಲ್ಲಿ ಕನಿಷ್ಠ ವೇತನ ಜಾರಿಗೊಳಿಸಲಾಗಿದೆ ಎಂದರು. ಕಾರ್ಮಿಕ ಇಲಾಖೆ ಕನಿಷ್ಠ ವೇತನ ಮಿತಿ ಪರಿಷ್ಕರಿಸಿ 2025 ಏಪ್ರಿಲ್ 11ರಂದು ಕರಡು ಅಧಿಸೂಚನೆ ಹೊರಡಿಸಿದೆ. ಅಂತಿಮ ಅಧಿಸೂಚನೆ ಜಾರಿ ನಂತರ ಗ್ರಾಮ ಪಂಚಾಯಿತ್‌ಗಳಲ್ಲಿ ಅಳವಡಿಸಲಾಗುವುದು. ವೇತನ ಪರಿಷ್ಕರಣೆಗೆ ರಾಜ್ಯ ಆರ್ಥಿಕ ಇಲಾಖೆಗೆ 2024 ಫೆಬ್ರವರಿ 22 ಮತ್ತು 2025 ಆಗಸ್ಟ್ 7ರಂದು ಎರಡು ಬಾರಿ ಪ್ರಸ್ತಾವನೆ ಕಳುಹಿಸಿದ್ದೇವೆ. ಖಾಲಿ ಇರುವ ಹುದ್ದೆಗಳಿಗೆ ಸ್ಥಳೀಯವಾಗಿ ಜಿಲ್ಲಾ ಪಂಚಾಯಿತ್‌ನಿಂದಲೇ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ ಎಂದರು.

ಸ್ಟೌವ್‌ಗೆ ಈಗ ಭಾರೀ ಬೇಡಿಕೆ

ಮಾತನಾಡಿ, ಮನೆ ಬಳಕೆಗಾಗಿ ಇಂಡಕ್ಷನ್ ಸ್ಟೌವ್‌ಗಳ ಖರೀದಿ ಇಂದಿನಿಂದ ಹೆಚ್ಚಾಗಿದ್ದು, ಈ ಸ್ಟೌವ್‌ಗಳ ಲಭ್ಯತೆ ಬಗ್ಗೆ ಗ್ರಾಹಕರು ವಿಚಾರಣೆ ಸಹ ಮಾಡುತ್ತಿದ್ದಾರೆ. ನಮ್ಮ ಮಳಿಗೆಗಳಲ್ಲಿ ಮಾತ್ರವಲ್ಲದೆ, ಬೇರೆ ಮಳಿಗೆಗಳಲ್ಲೂ ಇದೇ ರೀತಿಯ ಬೇಡಿಕೆ ಇರುವುದು ಕೇಳಿಬಂದಿದೆ ಎಂದರು. ಜೊತೆಗೆ ನಮ್ಮ ಬೇಕರಿ ಹಾಗೂ ರೆಸ್ಟೋರೆಂಟ್‌ಗಳಿಗೂ ಸೌದೆ ಸೇರಿದಂತೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಎದುರಾಗಿದೆ. 10 ಮೆನುವಿನಲ್ಲಿ ಕನಿಷ್ಠ ಮೂರ್‍ನಾಲ್ಕು ಆದರೂ ಗ್ರಾಹಕರಿಗೆ ಪೂರೈಕೆ ಮಾಡಬೇಕಾಗುತ್ತದೆ. ಹೀಗಾಗಿ ವಹಿವಾಟು ಮುನ್ನಡೆಸಲು ಪರ್ಯಾಯ ವ್ಯವಸ್ಥೆಗಳ ಬಗ್ಗೆ ಗಮನ ನೀಡಬೇಕಿದೆ ಎಂದು ತಿಳಿಸಿದರು. ಗೃಹೋಪಯೋಗಿ ಸಾಮಾಗ್ರಿಗಳ ಅಧಿಕೃತ ಮಾರಾಟಗಾರ ಮಹಾವೀರ ಜೈನ್ ಮಾತನಾಡಿ, ಎಲೆಕ್ಟ್ರಿಕಲ್ ಸ್ಟೌವ್ ದರದಲ್ಲಿ ಸದ್ಯಕ್ಕೆ ಯಾವುದೇ ವ್ಯತ್ಯಾಸವಾಗಿಲ್ಲ. ಈ ಸ್ಟೌವ್‌ಗಳ ಜೊತೆಗೆ ಅವುಗಳ ಮೇಲೆ ಇಟ್ಟು ಅಡುಗೆ ಮಾಡುವ ಸೂಕ್ತ ವಿನ್ಯಾಸದ ಪಾತ್ರೆಗಳಿಗೆ ಬೇಡಿಕೆ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ.

ಸಿಲಿಂಡರ್ ಕೊರತೆ ಆಗಬಾರದು

ಇದಕ್ಕೆ ನಿರಂತರವಾಗಿ ಎಲ್‌ಪಿಜಿ ಪೂರೈಕೆಯು ಅಗತ್ಯವಿರುತ್ತದೆ. ಅಲ್ಲದೆ, ಈ ಸಾಲಿನ 10.04.2026 ರವರೆಗೆ ಶೈಕ್ಷಣಿಕ ವರ್ಷದ ಕೊನೆಯ ದಿನವಾಗಿದ್ದು, ಅಲ್ಲಿಯವರೆಗೂ ಬಿಸಿಯೂಟ ಯೋಜನೆಗೆ ಯಾವುದೇ ತೊಂದರೆ ಆಗದಂತೆ ಇದನ್ನು ಅಗತ್ಯ ವಸ್ತು ಕಾಯ್ದೆಯಡಿ ಪರಿಗಣಿಸಿ ಶಾಲೆಗಳಿಗೆ ಎಲ್‌ಪಿಜಿ ಇಂಧನವನ್ನು ಆದ್ಯತೆಯ ಮೇರೆಗೆ ಪೂರೈಸುವಂತೆ ತಮ್ಮ ವ್ಯಾಪ್ತಿಯ ಎಲ್ಲಾ ಅಡುಗೆ ಅನಿಲ ವಿತರಕರಿಗೆ ಸೂಚಿಸುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು, ರಾಜ್ಯದ ಎಲಾ ಡಿಸಿ, ಸಿಇಓಗಳಿಗೆ ಸೂಚಿಸಿದ್ದಾರೆ.

ಯುದ್ಧದ ನೇರ ಪರಿಣಾಮ

ರೀಫಿಲ್ಲಿಂಗ್ ಪೂರ್ಣ ಸ್ಥಗಿತ: ಮೈಸೂರು ನಗರ ಮತ್ತು ಜಿಲ್ಲೆಯ ಹೋಟೆಲ್ ಸೇರಿದಂತೆ ವಿವಿಧ ವಾಣಿಜ್ಯ ಉದ್ದೇಶಕ್ಕೆ ಕಮರ್ಷಿಯಲ್ ಸಿಲಿಂಡರ್ ಪೂರೈಸುತ್ತಿರುವ ಹೆಚ್‌ಪಿಸಿಎಲ್, ಐಓಸಿಎಲ್, ಪಿಪಿಸಿಎಲ್ ಪ್ಲಾಂಟ್‌ಗಳಿಂದ ವಾಣಿಜ್ಯ ಸಿಲಿಂಡರ್‌ಗಳ ರೀಫಿಲ್ಲಿಂಗ್ ಕೂಡ ಪೂರ್ಣ ಪ್ರಮಾಣದಲ್ಲಿ ಸ್ಥಗಿತಗೊಳಿಸಿರುವುದರಿಂದ ಹೋಟೆಲ್‌ನವರ ಪಾಡು ಹೇಳತೀರದಾಗಿದೆ.

ಗೃಹ ಬಳಕೆ ಸಿಲಿಂಡರ್‌ಗೆ ಆದ್ಯತೆ: ದೇಶದಲ್ಲಿ ಬಳಸುವ ಅಡುಗೆ ಅನಿಲ ಪ್ರಮಾಣದಲ್ಲಿ ಶೇ.40ರಷ್ಟು ಮಾತ್ರ ಭಾರತದಲ್ಲಿ ಉತ್ಪಾದಿಸಲಾಗುತ್ತಿದ್ದು, ಉಳಿದ ಶೇ.60ರಷ್ಟು ಅಡುಗೆ ಅನಿಲ ಅರಬ್ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಯುದ್ಧದ ಪರಿಣಾಮ ದೇಶಕ್ಕೆ ಪೂರೈಕೆಯಾಗುತ್ತಿದ್ದ ಅಡುಗೆ ಅನಿಲ್ ಸ್ಥಗಿತಗೊಂಡಿದ್ದು, ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಅಡುಗೆ ಅನಿಲವನ್ನು ಗೃಹಬಳಕೆಗೆ ಮಾತ್ರ ಪೂರೈಸಲು ನಿರ್ಧರಿಸಲಾಗಿದೆ.

ಮೈಸೂರಿನಲ್ಲಿರುವ ಮೂರು ಅಡುಗೆ ಅನಿಲ ಸರಬರಾಜು ಸಂಸ್ಥೆಗಳ ಪ್ಲಾಂಟ್‌ಗಳಲ್ಲಿರುವ ಅನಿಲವನ್ನು ಗೃಹ ಬಳಕೆಯ ಸಿಲಿಂಡರ್‌ಗಳಿಗೆ ಮಾತ್ರ ರೀಫಿಲ್ ಮಾಡುವಂತೆ ಸೂಚನೆ ನೀಡಲಾಗಿದೆ. ಗೃಹ ಬಳಕೆಗೆ ಆದ್ಯತೆ ನೀಡಿರುವುದರಿಂದ ವಾಣಿಜ್ಯ ಉದ್ದೇಶದ ಸಿಲಿಂಡರ್ ಕೊರತೆ ಹೋಟೆಲ್‌ಗಳ ಮೇಲೆ ದುಷ್ಪರಿಣಾಮ ಬೀರಲಿದೆ.

ಎರಡು ದಿನದಲ್ಲಿ ಪೂರ್ಣ ಬಂದ್: ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಸಸ್ಯಾಹಾರ, ಮಾಂಸಾಹಾರ, ಫಾಸ್ಟ್‌ಫುಡ್ ಸೇರಿ 1500 ಹೋಟೆಲ್‌ಗಳಿದ್ದು 15 ಸಾವಿರಕ್ಕೂ ಹೆಚ್ಚು ನೌಕರರು ಕೆಲಸ ಮಾಡುತ್ತಿದ್ದಾರೆ. ಪ್ರತಿದಿನ ಈ ಎಲ್ಲಾ ಹೋಟೆಲ್, ಫಾಸ್ಟ್‌ಫುಡ್‌ಗಳಿಗೆ 4500 ವಾಣಿಜ್ಯ ಸಿಲಿಂಡರ್ ಬೇಕಾಗಿತ್ತು. ಆದರೆ, ಎರಡು ದಿನದಿಂದ ವಾಣಿಜ್ಯ ಸಿಲಿಂಡರ್ ಸರಬರಾಜಾಗುತ್ತಿಲ್ಲ ಎಂದರು. ಏಜೆನ್ಸಿಗಳು ಬಾಗಿಲು ಹಾಕಿಕೊಂಡಿವೆ. ಗ್ಯಾಸ್ ಫಿಲ್ಲಿಂಗ್ ಪ್ಲಾಂಟ್‌ಗಳಲ್ಲಿ ವಾಣಿಜ್ಯ ಸಿಲಿಂಡರ್‌ಗೆ ರೀಫಿಲ್ಲಿಂಗ್ ಮಾಡುವುದನ್ನು ಪೂರ್ಣ ಪ್ರಮಾಣದಲ್ಲಿ ನಿಲ್ಲಿಸಲಾಗಿದೆ. ಇದರಿಂದ ಹೋಟೆಲ್‌ಗಳಲ್ಲಿ ಕೇವಲ ಎರಡು ದಿನಕ್ಕೆ ಆಗುವಷ್ಟು ಸಿಲಿಂಡರ್ ಮಾತ್ರ ಇರುವುದರಿಂದ ಶುಕ್ರವಾರ ಮಧ್ಯಾಹ್ನದೊಳಗೆ ವಾಣಿಜ್ಯ ಸಿಲಿಂಡರ್ ಪೂರೈಕೆಯಾಗದಿದ್ದರೆ, ಪೂರ್ಣ ಪ್ರಮಾಣದಲ್ಲಿ ಹೋಟೆಲ್ ಬಂದ್ ಆಗುವುದು ಖಚಿತವಾಗಿದೆ ಎಂದು ತಿಳಿಸಿದರು.

ಸೌದೆ, ಹೊಟ್ಟು ಬಳಸಬೇಕಾಗುತ್ತದೆ: ಕಮರ್ಷಿಯಲ್ ಸಿಲಿಂಡರ್ ಸಿಗದೇ ಹೋದರೆ ಹೋಟೆಲ್ ಮಾಲೀಕರು ಸೌದೆ ಹಾಗೂ ಮರ, ಭತ್ತದ ಹೊಟ್ಟು ಬಳಸಬೇಕಾಗುತ್ತದೆ. ಆದರೆ, ಬಹುತೇಕ ಹೋಟೆಲ್‌ಗಳಲ್ಲಿ ಸೌದೆ ಒಲೆ ಇಲ್ಲ. ಬೆರಳೆಣಿಕೆಯಷ್ಟು ಹಳೆಯ ಹೋಟೆಲ್‌ಗಳಲ್ಲಿ ಸೌದೆ ಒಲೆ ಇರಬಹುದು. ಎಲ್ಲಾ ಹೋಟೆಲ್‌ಗಳಲ್ಲೂ ಸೌದೆ ಒಲೆ ನಿರ್ಮಿಸಿ, ಅಡುಗೆ ತಯಾರಿಸುತ್ತೇವೆ ಎನ್ನುವುದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಈ ನಡುವೆ ಇಂಡಕ್ಷನ್ ಸ್ಟೌವ್ ಬಳಸಿ, ಕಾಫಿ, ಟಿ. ಮಾಡಬಹುದು. ಈಗಾಗಲೇ ಜಯಲಕ್ಷ್ಮೀಪುರಂ ಎಸ್‌ಪಿಆರ್ ಹೋಟೆಲ್, ಸರಸ್ವತಿಪುರಂನ ಅಮ್ಮನ ಕೈ ರುಚಿ ಹೋಟೆಲ್ ಸೇರಿ ಕೆಲವು ಫಾಸ್ಟ್‌ಫುಡ್ ಬಂದ್ ಆಗಿವೆ ಎಂದು ತಿಳಿಸಿದರು.

ಆದರೆ ದರ ಏರಿಕೆಯ ಬರೆ!

ಇತ್ತ ಆಟೋ ಗ್ಯಾಸ್‌ಗಳ ದರ ಏಕಾಏಕಿ 10 ರೂ. ಏರಿಕೆಯಾಗಿದ್ದು, ಇದಕ್ಕೆ ಹಲವು ಆಟೋ ಚಾಲಕರು ಆಕ್ರೋಶ ವ್ಯಕ್ತಪಡಿಸಿದರೆ, ಮತ್ತೆ ಕೆಲವರು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಪ್ರೊಪೆಲ್ ಆಟೋ ಗ್ಯಾಸ್ ದರದಲ್ಲಿ ಭಾರೀ ಏರಿಕೆ: ಮಧ್ಯಪ್ರಾಚ್ಯ ರಾಷ್ಟ್ರಗಳ ಬಿಕ್ಕಟ್ಟಿನ ನಡುವೆ ಅನಿಲ ಪೂರೈಕೆಯಲ್ಲಿ ವ್ಯತ್ಯಯದಿಂದಾಗಿ ದರದಲ್ಲಿ ಭಾರೀ ಬದಲಾವಣೆಯಾಗಿದೆ. ಕೇವಲ ನಾಲ್ಕೈದು ದಿನಗಳಲ್ಲಿ ಒಂದು ಕೆಜಿ ಆಟೋ ಗ್ಯಾಸ್‌ಗೆ ಬರೋಬ್ಬರಿ 10 ರೂ. ಏರಿಕೆ ಮಾಡಲಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪ್ರೊಪೆಲ್ ಗ್ಯಾಸ್ ಮ್ಯಾನೇಜರ್ ನವೀನ್, ಮೊದಲು ಗ್ಯಾಸ್ ಬೆಲೆ ಕೆಜಿಗೆ 53.76 ರೂ. ಇತ್ತು. ಪ್ರತಿ ತಿಂಗಳು ಬೆಲೆ ಏರಿಕೆ, ಇಲ್ಲ ಇಳಿಕೆಯಾಗುತ್ತಿತ್ತು. ಆದರೆ ಯುದ್ಧದಿಂದಾಗಿ ಕಳೆದ ನಾಲ್ಕೈದು ದಿನಗಳಲ್ಲಿ ಬರೋಬ್ಬರಿ 10 ರೂ. ದರ ಏರಿಕೆಯಾಗಿ 63.76 ರೂ. ಆಗಿದೆ. ನಮಗೂ ಅದೇ ದರದಲ್ಲಿಯೇ ಗ್ಯಾಸ್ ಸಿಗುತ್ತಿದೆ. ಇದನ್ನು ಕೆಲವು ಮಂದಿ ತಪ್ಪಾಗಿ ಅರ್ಥೈಸಿಕೊಳ್ಳುತ್ತಿದ್ದಾರೆ, ಮತ್ತೆ ಕೆಲವರು ಅರ್ಥ ಮಾಡಿಕೊಳ್ಳುತ್ತಿದ್ದಾರೆ ಎಂದರು.

ನಗರದ ಹಲವು ಕಡೆಗಳಲ್ಲಿ ಗ್ಯಾಸ್ ಖಾಲಿಯಾಗಿ ಮುಂಗಡ ಬುಕಿಂಗ್ ಮಾಡಿ, ಬರುವಿಕೆಗಾಗಿ ಕಾಯುತ್ತಿದ್ದಾರೆ. ನಾವೂ ಅದೇ ಕೆಲಸ ಮಾಡುತ್ತಿದ್ದೇವೆ. ಗ್ಯಾಸ್ ಬಂದ ಒಂದೆರೆಡು ದಿನಗಳಲ್ಲಿಯೇ ಖಾಲಿಯಾಗುತ್ತಿದೆ ಎಂದು ಮಾಹಿತಿ ನೀಡಿದರು.

ಥಿಂಕ್ ಗ್ಯಾಸ್ ಸಿಎನ್‌ಜಿ ಸ್ಟೇಷನ್‌ನ ರೀಜನಲ್ ಮ್ಯಾನೇಜರ್ ಸಂಜೀತ್ ಕುಮಾರ್ ಸುಮನ್ ಈ ಸಂಬಂಧ ಮಾತನಾಡಿ, ನಮಗೆ ಈವರೆಗೆ ಯಾವುದೇ ಕೊರತೆ ಉಂಟಾಗಿಲ್ಲ. 87 ರೂ. ಗಳಿಂದ 85 ರೂ.ಗಳಿಗೆ ಇಳಿಸಲಾಗಿದೆ. ಯುದ್ಧದ ಪರಿಣಾಮ ನಮ್ಮ ಗ್ಯಾಸ್ ಮೇಲೆ ಬೀರಿಲ್ಲ. ಸದ್ಯ ಎಲ್ಲವೂ ಸರಾಗವಾಗಿ ನಡೆದುಕೊಂಡು ಹೋಗುತ್ತಿದೆ. ಕೇಂದ್ರ ಸರ್ಕಾರ ತೆಗೆದುಕೊಳ್ಳುವ ನಿರ್ಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮೈಸೂರು ತಾಲೂಕು ಕಚೇರಿಗೆ ಪ್ರಾದೇಶಿಕ ಆಯುಕ್ತರ ದಿಢೀರ್ ಭೇಟಿ; ಪರಿಶೀಲನೆ



ಮೈಸೂರು ತಾಲೂಕು ಕಚೇರಿಗೆ ದಿಢೀರ್ ಭೇಟಿ ನೀಡಿದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಅಲ್ಲಿನ ಕಾರ್ಯನಿರ್ವಹಣೆ ಸಂಬಂಧ ಪರಿಶೀಲನೆ ನಡೆಸಿದರು.

ಮೈಸೂರು, ಮಾ.11(ಎಂಕೆ)– ಮೈಸೂರಿನ ನಜರ್‌ಬಾದ್‌ನಲ್ಲಿರುವ ತಾಲೂಕು ಕಚೇರಿ(ಮಿನಿ ವಿಧಾನಸೌಧ)ಗೆ ಬುಧವಾರ ದಿಢೀರ್ ಭೇಟಿ ನೀಡಿದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಕಡತಗಳು ಹಾಗೂ ಅಧಿಕಾರಿ–ಸಿಬ್ಬಂದಿಯ ಕರ್ತವ್ಯ ನಿರ್ವಹಣೆ ಪರಿಶೀಲಿಸಿದರು.

ಬಳಿಕ ಅಧಿಕಾರಿ ಮತ್ತು ಸಿಬ್ಬಂದಿಯ ಸಭೆ ನಡೆಸಿದ ಅವರು, 1–5 ಪ್ರಕರಣಗಳು ಮತ್ತು ಪೋಡಿ ಪ್ರಕರಣಗಳು, ಇ–ಪೌತಿ ಖಾತೆಯ ಪ್ರಗತಿ, ಹಕ್ಕುಪತ್ರ ವಿತರಣೆ ಮತ್ತು ಇ–ಸ್ವತ್ತು, ಆರ್‌ಆರ್‌ಟಿ ತಿದ್ದುಪಡಿ ಬಾಕಿ ಇರುವ ಪ್ರಕರಣಗಳು ಸೇರಿದಂತೆ ತಾಲೂಕು ಕಚೇರಿಯಿಂದ ಸಾರ್ವಜನಿಕರಿಗೆ ನೀಡುವ ಎಲ್ಲಾ ಬಗೆಯ ಸೇವೆಗಳ ಕುರಿತು ಮಾಹಿತಿ ಪಡೆದು ಸಲಹೆ ಹಾಗೂ ಸೂಚನೆಗಳನ್ನು ನೀಡಿದರು.

ಅಲ್ಲದೆ ಸಾರ್ವಜನಿಕರ ಮನವಿಗೆ ಸ್ಪಂದಿಸಿ, ಸಕಾಲದಲ್ಲಿ ಸಾರ್ವಜನಿಕರ ಕೆಲಸಗಳನ್ನು ಮಾಡುವತ್ತ ಅಧಿಕಾರಿ ಮತ್ತು ಸಿಬ್ಬಂದಿ ಗಮನಹರಿಸಬೇಕು. ವೃತ್ತಿಯಲ್ಲಿ ಸಮಯ ಪಾಲಿಸಬೇಕು ಎಂದು ಎಚ್ಚರಿಸಿದರು. ತಹಸೀಲ್ದಾರ್ ಮಹೇಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಶೋಧನೆ ಎಂದರೆ ಸತ್ಯ ಶೋಧನೆ ಇದ್ದಂತೆ

ತಂತ್ರಜ್ಞಾನ ನಮ್ಮ ನಿಯಂತ್ರಣದಲ್ಲಿ ಇರಬೇಕು: ಹಿರಿಯ ಪ್ರಾಧ್ಯಾಪಕ ಪ್ರೊ.ಆರ್.ಮಹೇಶ್ ಅಭಿಮತ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಶೋಧನಾ ವಿಧಾನಗಳು' ಕುರಿತು ಮೂರು ದಿನಗಳ ಕಾರ್ಯಾಗಾರವನ್ನು ಮೈಸೂರು ವಿವಿಯ ಬಹದ್ದೂರ್ ನಿರ್ವಹಣಾ ಸಂಸ್ಥೆಯ ಹಿರಿಯ ಪ್ರಾಧ್ಯಾಪಕ ಪ್ರೊ.ಆರ್.ಮಹೇಶ್ ಉದ್ಘಾಟಿಸಿದರು.

ಮೈಸೂರು, ಮಾ.11(ಎಂಟಿವೈ)– ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿರುವ ಸಂಶೋಧನೆಗಳು ತಂತ್ರಜ್ಞಾನ ಆಧಾರಿತವಾಗಿದೆ. ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಸಂಶೋಧನೆ ನಡೆಸಿ ಸತ್ಯಾಂಶವನ್ನು ತಿಳಿಸಲು ಮುಂದಾಗಬೇಕು ಎಂದ ಮೈಸೂರು ವಿಶ್ವವಿದ್ಯಾನಿಲಯದ ಬಹದ್ದೂರ್ ನಿರ್ವಹಣಾ ಸಂಸ್ಥೆಯ ಹಿರಿಯ ಪ್ರಾಧ್ಯಾಪಕ ಪ್ರೊ.ಆರ್.ಮಹೇಶ್, ಸಂಶೋಧನೆ ಎಂದರೆ ಸತ್ಯಶೋಧನೆ ಇದ್ದಂತೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಮತ್ತು ಡಾ.ಬಾಬುಜಗಜೀವನರಾವ್ ಸಂಶೋಧನಾ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ 'ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಶೋಧನಾ ವಿಧಾನಗಳು' ಕುರಿತು ಮೂರು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಶೋಧನೆಗೆ ಪೂರಕವಾದ ಎಲ್ಲಾ ವ್ಯವಸ್ಥೆಯನ್ನು ತಂತ್ರಜ್ಞಾನ ನೀಡುತ್ತಿವೆ. ಎಐ ತಂತ್ರಜ್ಞಾನ ಇಂದು ನಮಗಿಂತ ಚೆನ್ನಾಗಿ ಯೋಚನೆ ಮಾಡುತ್ತಿದೆ. ಎಐ ತಂತ್ರಜ್ಞಾನ ಮುಂದೆ ಅದರ ಯೋಚನೆಗಳತ್ತ ನಮ್ಮನ್ನು ಕೊಂಡೊಯ್ಯಬಹುದು ಎಂದು ವಿಷಾದಿಸಿದರು.

ಸಂಶೋಧನೆ ಎಂದರೆ ಸತ್ಯ ಶೋಧನೆ. ಸತ್ಯ ಶೋಧನೆಗಾಗಿ ತಂತ್ರಜ್ಞಾನದ ಮೊರೆ ಹೋದಾಗ ಅದು ಅದನ್ನು ಬೇಕಾದ್ದನ್ನು ಕೊಡುತ್ತದೆ. ಅದನ್ನೇ ನಾವು ಹಿಂಬಾಲಿಸುತ್ತೇವೆ. ಅದು ಕೊಡುವ ಸಮಗ್ರ ಚಿತ್ರಣವನ್ನು ತೋರಿಸಿ ಅದನ್ನೇ ಹೇಳಿದ ಹಾಗೆ ಮಾಡುತ್ತಾ ಹೋಗುತ್ತೇವೆ. ನಾವು ತಂತ್ರಜ್ಞಾನದ ಕೈಗೊಂಬೆಗಳಾಗಬಾರದು. ತಂತ್ರಜ್ಞಾನ ನಮ್ಮ ನಿಯಂತ್ರಣದಲ್ಲಿರಬೇಕು. ನಾವು ಪ್ರಾಮಾಣಿಕವಾಗಿ ಕೆಲಸ ಮಾಡಿದಾಗ ನಾವು ತಂತ್ರಜ್ಞಾನದ ಜಾಲದಿಂದ ಹೊರಬರಬಹುದು. ಹೀಗಾಗಿ ಸಂಶೋಧನೆಗಳಲ್ಲಿ ಪ್ರಾಮಾಣಿತೆ ಇರಬೇಕು ಎಂದು ಹೇಳಿದರು.

ನಮ್ಮ ದೇಶಕ್ಕೆ ಸಂಶೋಧನೆ ಬಹಳ ಅವಶ್ಯಕವಾಗಿದೆ. ಯಾವುದಾದರೂ ಕ್ಷೇತ್ರದ ಮೇಲೆ ಸಂಶೋಧನೆ ಮಾಡಿದರೆ ಉಜ್ವಲ ಭವಿಷ್ಯ ಸಿಗುತ್ತದೆ. ಇದರಿಂದ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬಹುದು. ಇಂತಹ ವಿಫುಲವಾದ ಅವಕಾಶ ಇರುವಾಗ ನಾವು ಎಐ ತಂತ್ರಜ್ಞಾನದಿಂದ ಬೇರೆ ದಾರಿಯ ಕಡೆ ಹೋಗುವ ಸಾಧ್ಯತೆಗಳಿರುತ್ತದೆ. ನಿರ್ದಿಷ್ಟ ವಿಷಯದ ಬಗ್ಗೆ ಪ್ರಬಲವಾದ ಸಂಶೋಧನೆ ಮಾಡುವುದರೊಂದಿಗೆ ಅದಕ್ಕೆ ಪೂರಕವಾಗಿ ಬೇರೆ ಬೇರೆ ವಿಷಯಗಳನ್ನು ಸಂಗ್ರಹಿಸಬೇಕು ಎಂದರು.

> "ಹೊಸ ಆಯಾಮದಿಂದ ನೋಡುವ ಸಂಶೋಧನೆಗಳು ಬಹಳಷ್ಟು ಮೌಲ್ಯವನ್ನು ಹೆಚ್ಚಿಸುವ ಕೆಲಸ ಮಾಡುತ್ತವೆ. ಸಂಶೋಧನೆಯನ್ನು ಬಹು ಆಯಾಮಗಳಿಂದ ನೋಡಿದಾಗ ಮಾತ್ರ ಅಮೂಲಾಗ್ರವಾಗಿ ಸಂಶೋಧನೆಯ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ನಾವು ಮಾಡುವ ಸಂಶೋಧನೆ ಸಮಾಜಕ್ಕೆ ಸಮಾಜಮುಖಿಯಾಗಿರುತ್ತದೆ.
> –ಪ್ರೊ.ಆರ್.ಮಹೇಶ್

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ರಾಮನಾಥಂ ನಾಯುಡು, ಪರೀಕ್ಷಾಂಗ ಕುಲಸಚಿವ ಸಿ.ಎಸ್.ಆನಂದಕುಮಾರ್, ಹಣಕಾಸು ಅಧಿಕಾರಿ ಪ್ರೊ.ನಿರಂಜನ್ ರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪೂರ್ಣಗೊಂಡ ಕಟ್ಟಡಗಳಿಗೆ ವಿದ್ಯುತ್ ಕಲ್ಪಿಸಲು ಆಗ್ರಹಿಸಿ ರಾಜ್ಯ ವಿದ್ಯುತ್ ಗುತ್ತಿಗೆದಾರರ ಪ್ರತಿಭಟನೆ



ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿಂದು ಪ್ರತಿಭಟನೆ ನಡೆಯಿತು.

ಬೆಂಗಳೂರು, ಮಾ. 11(ಕೆಎಂಶಿ)– ನಿರ್ಮಾಣ ಹಂತದ ಅಥವಾ ಪೂರ್ಣಗೊಂಡ ಕಟ್ಟಡಗಳಿಗೆ ವಾಸ ಯೋಗ್ಯ ಪ್ರಮಾಣಪತ್ರದ ಬಗ್ಗೆ ಸ್ಪಷ್ಟತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಫ್ರೀಡಂ ಪಾರ್ಕ್‌ನಲ್ಲಿಂದು ಪ್ರತಿಭಟನೆ ನಡೆಸಿತು.

ಸಂಘದ ನೂರಾರು ಪದಾಧಿಕಾರಿಗಳು ಸರ್ಕಾರದ ವಿರುದ್ಧ ಭಿತ್ತಿ ಪತ್ರಗಳನ್ನು ಹಿಡಿದು ಘೋಷಣೆ ಕೂಗಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಸಿ.ರಮೇಶ್, ಸುಪ್ರೀಂಕೋರ್ಟ್ ಆದೇಶದ ಅನ್ವಯ 2025ರ ಏಪ್ರಿಲ್‌ನಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಹಾಗೂ ವಿವಿಧ ಹಂತಗಳಲ್ಲಿ ನಿರ್ಮಾಣ ಹಂತದಲ್ಲಿರುವ, ಪೂರ್ಣಗೊಂಡ ಕಟ್ಟಡಗಳಿಗೆ ಪೂರ್ಣ ಪ್ರಮಾಣಪತ್ರ (ಓ.ಸಿ) ಅಥವಾ ವಾಸ ಯೋಗ್ಯ ಪ್ರಮಾಣಪತ್ರ ನೀಡುವ ಕುರಿತು ಸ್ಪಷ್ಟ ಮಾರ್ಗಸೂಚಿ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯಾದ್ಯಂತ ಲಕ್ಷಾಂತರ ಗ್ರಾಹಕರು ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು, ಭೂ ಪರಿವರ್ತಿತ ಹಾಗೂ ಭೂ ಪರಿವರ್ತನೆಯಾಗದ ಪ್ರದೇಶಗಳು ಮತ್ತು ಗ್ರಾಮೀಣ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಯಗಳನ್ನು ಬ್ಯಾಂಕ್‌ಗಳಿಂದ ಸಾಲ ಪಡೆದು ವಿವಿಧ ಹಂತಗಳಲ್ಲಿ ನಡೆಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸುಪ್ರೀಂಕೋರ್ಟ್ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದಲ್ಲಿ ರಾಜ್ಯದ ಲಕ್ಷಾಂತರ ನಾಗರಿಕರಿಗೆ ಆರ್ಥಿಕ, ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆ ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ, ಅರ್ಜಿ ಸಲ್ಲಿಸಿರುವ, ಮಂಜೂರಾತಿ ಪಡೆದಿರುವ ಕಾರ್ಯಾದೇಶಗೊಂಡ ಕಟ್ಟಡಗಳಿಗೆ ಸೂಕ್ತ ವಿನಾಯಿತಿ ನೀಡುವ ಮೂಲಕ ನಿರ್ಮಾಣಗೊಂಡ ಕಟ್ಟಡಗಳ ಗ್ರಾಹಕರಿಗೆ ಅನುಕೂಲವಾಗುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು.

ಯಾವ ಕಟ್ಟಡಗಳಿಗೆ ವಾಸಯೋಗ್ಯ ಪ್ರಮಾಣಪತ್ರ ಕಡ್ಡಾಯ ಎಂಬುದನ್ನು ಸ್ಪಷ್ಟಪಡಿಸಬೇಕು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಕಟ್ಟಡದ ನಕ್ಷೆಗೆ ಅನುಮೋದನೆ ಪಡೆಯದೇ ನಿರ್ಮಾಣಗೊಂಡ ಕಟ್ಟಡಗಳಿಗೆ ಸಂಬಂಧಿಸಿದ ಲಕ್ಷಾಂತರ ಅರ್ಜಿಗಳು ಬಾಕಿ ಇರುವುದರಿಂದ ಅವುಗಳನ್ನು ಒಂದು ಬಾರಿಯ ಕ್ರಮವಾಗಿ ಪರಿಹರಿಸಲು ವಿಶೇಷ ಕಾನೂನು ರೂಪಿಸುವಲ್ಲಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದರು.

ಎಂಎಸ್‌ಎಂಇ ಪ್ರಮಾಣ ಪತ್ರದ ಮೂಲಕ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸುತ್ತಿದ್ದು, ಸಂಪರ್ಕ ನೀಡುವುದಕ್ಕೆ ಸಮಸ್ಯೆಗಳಿದ್ದು, ಈ ಹಿನ್ನೆಲೆಯಲ್ಲಿ ಸೂಕ್ತ ಮಾರ್ಗಸೂಚಿ ನೀಡಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ವಿ. ಚಂದ್ರಬಾಬು ಒತ್ತಾಯಿಸಿದ್ದಾರೆ.

ಅಣ್ಣ, ಅತ್ತಿಗೆ ಕೊಂದ ವ್ಯಕ್ತಿಗೆ ಜೀವಾವಧಿ ಶಿಕ್ಷೆ

ಮೈಸೂರು, ಮಾ.11(ಎಂಕೆ)– ತನ್ನ ಅಣ್ಣ ಮತ್ತು ಅತ್ತಿಗೆಯ ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿದ್ದ ಆರೋಪಿಗೆ ಜೀವಾವಧಿ ಶಿಕ್ಷೆ ಹಾಗೂ 1 ಲಕ್ಷ ರೂ.ದಂಡ ವಿಧಿಸಿ ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ.

ಟಿ.ನರಸೀಪುರ ತಾಲೂಕಿನ ನುಗ್ಗಹಳ್ಳಿ ಕೊಪ್ಪಲು ಗ್ರಾಮದ ಹನುಮಂತ ಅಲಿಯಾಸ್ ಹನುಮಂತೇಗೌಡ(55) ಶಿಕ್ಷೆಗೆ ಗುರಿಯಾದ ಆರೋಪಿ. ಬನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯ ಜೇನುಗುಡ್ಡೆ ಹತ್ತಿರದ ಗದ್ದೆಜಾಡಿನ ರಸ್ತೆಯಲ್ಲಿನ ಗೋಮಾಳಕ್ಕೆ ಸೇರಿದ ಸರ್ವೆ ನಂ.101ರ 20 ಗುಂಟೆ ಜಮೀನಿನಲ್ಲಿ ತನ್ನ ಅಣ್ಣ ಶಿವಲಿಂಗೇಗೌಡ ತನಗೆ ವ್ಯವಸಾಯ ಮಾಡಲು ಅವಕಾಶ ನೀಡದೇ ತಾನೇ ಬೇಸಾಯ ಮಾಡುತ್ತಿದ್ದಾನೆ ಎಂಬ ಕಾರಣಕ್ಕೆ ದ್ವೇಷ ಸಾಧಿಸಿದ್ದ ಹನುಮಂತ, 2023ರ ಮಧ್ಯಾಹ್ನ 3.30 ರಿಂದ 4 ಗಂಟೆ ನಡುವೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ತನ್ನ ಅಣ್ಣ ಶಿವಲಿಂಗೇಗೌಡ ಹಾಗೂ ಅತ್ತಿಗೆ ಭಾರತಿಯನ್ನು ಕೊಡಲಿಯಿಂದ ಮನಬಂದಂತೆ ಕೊಚ್ಚಿ ಕೊಲೆ ಮಾಡಿದ್ದ.

ಈ ಬಗ್ಗೆ ಆರೋಪಿ ಹನುಮಂತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಬನ್ನೂರು ಠಾಣೆಯ ಈ ಹಿಂದಿನ ಆರಕ್ಷಕ ನಿರೀಕ್ಷಕ ಮನೋಜ್‌ಕುಮಾರ್, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಉಷಾರಾಣಿ, ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಆರೋಪ ರುಜುವಾತಾಗಿದೆ ಎಂದು ಅಭಿಪ್ರಾಯಪಟ್ಟು ಆರೋಪಿತನಿಗೆ ಕಲಂ 302 ಐಪಿಸಿ ಅಡಿಯ ಜೀವಾವಧಿ ಶಿಕ್ಷೆ ಹಾಗೂ 1 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಎಂ.ಎನ್.ರಂಜನಾರಾವ್ ಸರ್ಕಾರದ ಪರ ವಾದ ಮಂಡಿಸಿದ್ದರು.

ಪಾಲಿಕೆಯ ಖಾಲಿ ಬಿದ್ದ ಆಸ್ತಿಗಳ ಸಾರ್ವಜನಿಕ ಉದ್ದೇಶಕ್ಕೆ ಬಳಸಲು ಹರೀಶ್‌ಗೌಡರ ಮನವಿ



ಮೈಸೂರು,ಮಾ.11(ಎಂಕೆ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಗರಪಾಲಿಕೆಯ ಖಾಲಿ ನಿವೇಶನಗಳು ಹಾಗೂ ಆಸ್ತಿಗಳ ಸಂರಕ್ಷಿಸಿ ಸಾರ್ವಜನಿಕರ ಉಪಯೋಗಕ್ಕೆ ಬಳಕೆ ಮಾಡುವಂತೆ ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಅವರಲ್ಲಿ ಶಾಸಕ ಕೆ.ಹರೀಶ್‌ಗೌಡ ಮನವಿ ಮಾಡಿದರು.

ವಿಧಾನಸಭೆಯಲ್ಲಿ ಮಾತನಾಡಿದ ಗೌಡರು, ಸಯ್ಯಾಜಿರಾವ್ ರಸ್ತೆ ಆರ್‌ಎಂಸಿ ಬಸ್ ನಿಲ್ದಾಣ ಸಮೀಪದ ಖಾಲಿ ಜಾಗ, ಯಾದವಗಿರಿ 8ನೇ ಮತ್ತು 4ನೇ ಮುಖ್ಯ ರಸ್ತೆಯ ರೈಲ್ವೆ ಟ್ರ್ಯಾಕ್ ಪಕ್ಕದಲ್ಲಿರುವ ಖಾಲಿ ಜಾಗ, ಬಯಲು ರಂಗಮಂದಿರದ ಖಾಲಿ ಜಾಗ, ಮೇದರ್ ಬ್ಲಾಕ್‌ನ 3ನೇ ಮುಖ್ಯ ರಸ್ತೆಯ ರೈಲ್ವೆ ಟ್ರ್ಯಾಕ್ ಪಕ್ಕದ ಖಾಲಿ ಜಾಗ ಹಾಗೂ ಹೆಬ್ಬಾಳು ಸರ್ವೆ ನಂ.141ರಲ್ಲಿ ಆಶ್ರಯ ಯೋಜನೆಗೆ ಮೀಸಲಿಟ್ಟಿರುವ ಖಾಲಿ ಜಾಗವನ್ನು ಸಾರ್ವಜನಿಕ ಕಾರ್ಯಗಳಿಗೆ ಸದ್ಬಳಕೆ ಮಾಡಲು ಕೋರಿದರು. ಹಾಗೆಯೇ ಕಾಲ ಕಾಲಕ್ಕೆ ಖಾಲಿ ಜಾಗದ ಸ್ವಚ್ಛತೆ ಮತ್ತು ಸಂರಕ್ಷಣೆ ಮಾಡುವಂತೆ ಹಾಗೂ ಕ್ಷೇತ್ರದಲ್ಲಿರುವ 33 ಸಮುದಾಯ ಭವನಗಳಲ್ಲಿ ಬಡ ವರ್ಗದವರ ಸಭೆ–ಸಮಾರಂಭಗಳು ಮತ್ತು ಸಾರ್ವಜನಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ, ಪಲ್ಸ್ ಪೋಲಿಯೋ ಸೇರಿದಂತೆ ಇನ್ನಿತರೆ ಶಿಬಿರಗಳನ್ನು ನಡೆಸಲು ಉಚಿತವಾಗಿ ನೀಡುವಂತೆ ಮನವಿ ಮಾಡಿದರು.

ಮಾ.17ರಂದು ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು, ಮಾ.11– ಹೂಟಗಳ್ಳಿ ನಗರ ಸಭೆಯ 2026–27ನೇ ಸಾಲಿನ ಆಯವ್ಯಯ ತಯಾರಿಸಲು ನಗರಸಭಾ ವ್ಯಾಪ್ತಿಯ ಅಭಿವೃದ್ಧಿ ದೃಷ್ಟಿಯಿಂದ ಆಯವ್ಯಯದ ಬಗ್ಗೆ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆಯಲು ಸಾರ್ವಜನಿಕ ಸಮಾಲೋಚನಾ ಸಭೆಯನ್ನು ಮಾ.17ರಂದು ಮಧ್ಯಾಹ್ನ 3 ಗಂಟೆಗೆ ನಗರಸಭೆಯಲ್ಲಿ ಏರ್ಪಡಿಸಲಾಗಿದೆ. ನಗರಸಭೆ ವ್ಯಾಪ್ತಿಯ ನಾಗರಿಕರು ಹಾಗೂ ಸಂಘ ಸಂಸ್ಥೆಗಳವರು ಸಭೆಗೆ ಹಾಜರಾಗಿ ನಗರಸಭಾ ವ್ಯಾಪ್ತಿಯ ನಾಗರಿಕರಿಗೆ ಉತ್ತಮ ರೀತಿಯ ಮೂಲಭೂತ ಸೌಕರ್ಯ ಒದಗಿಸಲು ಅನುವಾಗುವಂತೆ ಸಾರ್ವಜನಿಕರು ಸಲಹೆಗಳನ್ನು ನೀಡಲು ಹೂಟಗಳ್ಳಿ ನಗರಸಭೆಯ ಪೌರಾಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವೇಶ್ವರ ರಸ್ತೆಯಲ್ಲಿ ವಿಜೃಂಭಣೆಯ ಬಂದಮ್ಮ ಉತ್ಸವ



ಮೈಸೂರಿನ ಬಸವೇಶ್ವರ ರಸ್ತೆಯಲ್ಲಿ ಜರುಗಿದ ಬಂದಮ್ಮನವರ ಪೂಜಾ ಮಹೋತ್ಸವದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿ ದರ್ಶನ ಪಡೆದರು. ಈ ವೇಳೆ ಮುಖಂಡರಾದ ಹರೀಶ್, ವಿಜಯ್‌ಕುಮಾರ್, ಎಲೆಕ್ಟ್ರಿಕಲ್ ಚಂದ್ರು, ರವಿಶಂಕರ್, ರಮೇಶ್, ಮಹ್ಮದ್ ಫಾರೂಖ್, ಮದನ್ ಇತರರಿದ್ದರು.

ಇಂದಿನಿಂದ ಮೂತ್ರಪಿಂಡ ತಪಾಸಣೆ

ಮೈಸೂರು, ಮಾ.11(ಜಿಎ)–ವಿಶ್ವ ಮೂತ್ರಪಿಂಡ ದಿನಾಚರಣೆ ಅಂಗವಾಗಿ ನಗರದ ಭಾನವಿ ಆಸ್ಪತ್ರೆಯಲ್ಲಿ ಮಾ.12ರಿಂದ ತಿಂಗಳವರೆಗೆ ಮೂತ್ರಪಿಂಡ ಆರೋಗ್ಯ ರಕ್ಷಣೆಗೆ ಅಗತ್ಯ ತಪಾಸಣೆಗಳನ್ನು ರಿಯಾಯಿತಿ ದರದಲ್ಲಿ ಮಾಡಲಾಗುವುದು ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವೈದ್ಯ ಕೆ.ಮನು ತಿಳಿಸಿದರು.

4,000 ರೂ ಮೌಲ್ಯದ ವಿವಿಧ ತಪಾಸಣೆಗಳನ್ನು ಕೇವಲ 999 ರೂ. ದರದಲ್ಲಿ ಮಾಡಲಾಗುವುದು. ಪ್ರಸ್ತುತ ಮೂತ್ರಪಿಂಡ ಸಂಬಂಧಿ ಕಾಯಿಲೆಗಳು ಹೆಚ್ಚುತ್ತಿದ್ದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಅಗತ್ಯ ಸಲಹೆ ನೀಡುವುದು ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆ ಪ್ರಧಾನ ವ್ಯವಸ್ಥಾಪಕ ಆರ್.ಪ್ರಶಾಂತ್, ನರ್ಸಿಂಗ್ ಅಧೀಕ್ಷಕ ಕೆ.ಎಸ್.ನಿರಂಜನ್‌ಸ್ವಾಮಿ ಉಪಸ್ಥಿತರಿದ್ದರು.

ವರಕೋಡು ಶ್ರೀ ಬೀರೇಶ್ವರ ದೇವಾಲಯದಲ್ಲಿ ಶಿವಲಿಂಗ ಪ್ರತಿಷ್ಠಾಪನೆ

ನಾಳೆ ದೇವಾಲಯ ಉದ್ಘಾಟನೆ, ಕಳಸ ಪ್ರತಿಷ್ಠಾಪನೆ



ನೂತನವಾಗಿ ಪುನರ್ ನಿರ್ಮಿಸಿರುವ ವರಕೋಡು ಶ್ರೀ ಬೀರೇಶ್ವರಸ್ವಾಮಿ ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿ ಪೂಜಿಸಲಾಯಿತು.

ಮೈಸೂರು, ಮಾ.11(ಎಂಟಿವೈ)– ಮೈಸೂರು ತಾಲೂಕಿನ ವರಕೋಡು ಗ್ರಾಮದಲ್ಲಿರುವ ಶ್ರೀ ಬೀರೇಶ್ವರಸ್ವಾಮಿ ದೇವಾಲಯದ ಪುನರ್ ಪ್ರತಿಷ್ಠಾಪನೆ ಕುಂಭಾಭಿಷೇಕದ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯುತ್ತಿದ್ದು, ದೇವಾಲಯದ ಗರ್ಭಗುಡಿಯಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿ ವಿವಿಧ ಪೂಜಾ ಕೈಂಕರ್ಯ ನಡೆಸಲಾಗುತ್ತಿದೆ.

ವರಕೋಡು ಗ್ರಾಮದಲ್ಲಿರುವ ಶ್ರೀ ಬೀರೇಶ್ವರಸ್ವಾಮಿ ದೇವಾಲಯವನ್ನು ಪುನರ್ ನಿರ್ಮಿಸಿರುವ ದೇವಾಲಯದ ಆವರಣದಲ್ಲಿ ಮಾ.10ರಿಂದ ವಿವಿಧ ಪೂಜಾ ಕಾರ್ಯ ಜರುಗುತ್ತಿದ್ದು, ಶಾಸ್ತ್ರೋಕ್ತವಾಗಿ ಗರ್ಭಗುಡಿಯಲ್ಲಿ ಶಿವಲಿಂಗ ಪ್ರತಿಷ್ಠಾಪನೆ ಮಾಡಲಾಗಿದೆ. ಅರ್ಚಕ ಗಣೇಶ್ ದೀಕ್ಷಿತ್ ಅವರ ನೇತೃತ್ವದಲ್ಲಿ ಗುಡ್ಡಪ್ಪ ಶಿವು, ಮಹದೇವ ಸೇರಿದಂತೆ ಇನ್ನಿತರರ ಸಮ್ಮುಖದಲ್ಲಿ ಶಿವಲಿಂಗ ಪ್ರತಿಷ್ಠಾಪನಾ ಕಾರ್ಯಕ್ರಮ ಜರುಗಿದ್ದು, ದಿನವಿಡಿ ಧಾರ್ಮಿಕ ಕಾರ್ಯ ನೆರವೇರಿಸಲಾಗಿದೆ.

ಇಂದು ಬೆಳಗ್ಗೆ ದೇವಾಲಯದ ಆವರಣದಲ್ಲಿ ಗಣಪತಿ ಹೋಮ, ಮೂಲ ದೇವರ ಪ್ರಾರ್ಥನೆ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮ ಜರುಗಿತು. ಸಂಜೆ 6 ಗಂಟೆಗೆ ವರಕೋಡು ಪುರಾತನ ಕಲ್ಯಾಣಿಯಿಂದ ಮಂಗಳವಾದ್ಯದೊಂದಿಗೆ ಗಡಿಕೂಟಗಳು ಮೆರವಣಿಗೆ ಮೂಲಕ ಬೀರೇಶ್ವರಸ್ವಾಮಿ ದೇವಾಲಯದ ಆವರಣಕ್ಕೆ ಆಗಮಿಸಿದವು. ಬಳಿಕ ದೇವಾಲಯದ ಮುಂಭಾಗವಿರುವ ಕೊಳದಲ್ಲಿ ಶಾಸ್ತ್ರೋಕ್ತವಾಗಿ ದೀಪದಾರತಿ ಬೆಳಗಲಾಯಿತು. ರಾಜ್ಯದ ವಿವಿಧೆಡೆಯಿಂದ ಭಕ್ತರು ಆಗಮಿಸಿದ್ದು, ಇದರೊಂದಿಗೆ ದುದ್ದಗೆರೆ, ತಾಯೂರು, ಸಿದ್ದರಾಮನಹುಂಡಿ, ಕಾಳಿಸಿದ್ದನಹುಂಡಿ, ಬಿದರಹಳ್ಳಿಹುಂಡಿ, ಅಹಲ್ಯ ಗಡಿ ಗ್ರಾಮದ ದೇವರಕೂಟ, ಪೂಜೆ, ಬಸವ ಹಾಗೂ ವೀರಮಕ್ಕಳು ಪೂಜಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದಾರೆ.

ಮಾ.12ರಂದು ಬೆಳಗ್ಗೆ 7.30ಕ್ಕೆ ಕಾಗಿನೆಲೆ ಮಹಾಸಂಸ್ಥಾನದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನಿಧ್ಯದಲ್ಲಿ, ವರಕೋಡು ಗಡಿ ಗುರುಮಠದ ಶ್ರೀ ಗುರುಸ್ವಾಮಿ, ಗುರುದೇವು ಹಾಗೂ ಗಡಿ ದೇವಾಲಯದ ಗುಡ್ಡಪ್ಪರ ಸಮ್ಮುಖದಲ್ಲಿ ಬೀರೇಶ್ವರಸ್ವಾಮಿ ದೇವಾಲಯದಲ್ಲಿ ಗಣಪತಿ ಪೂಜೆ, ನವಗ್ರಹ ಪೂಜೆ, ಗೋಪೂಜೆ, ಯೋಗಶಾಲ ಪ್ರವೇಶ ನಡೆಯಲಿದೆ. ಬಳಿಕ ಕಲ್ಯಾಣಿಯಿಂದ 101 ಹೆಣ್ಣು ಮಕ್ಕಳೊಂದಿಗೆ ಖೇಲು ಬಸವದೇವರ ಮೇಲೆ ಮಜ್ಜನ, ನಂದಿ ಧ್ವಜ, ಪೂಜಾ ಕುಣಿತ, ಬಸವ ಸತ್ತಿಗೆ ಸೂರಿಪಾನಿ, ವೀರಗಾಸೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ. ಬಳಿಕ ಬೀರೇಶ್ವರಸ್ವಾಮಿ ದೇವಾಲಯದಲ್ಲಿ ಪ್ರಸಾದ ವಿತರಣೆ ಜರುಗಲಿದೆ. ಪೂಜಾ ಮಹೋತ್ಸವ ಅಂಗವಾಗಿ ಅಂದು ಸಂಜೆ 7 ಗಂಟೆಗೆ ಮೂಡಲಹುಂಡಿ ಗ್ರಾಮದಲ್ಲಿ 'ದಕ್ಷಯಜ್ಞ' ಅಥವಾ 'ಭೃಗುಮುನಿಯ ಗರ್ವಭಂಗ' ಪೌರಾಣಿಕ ನಾಟಕ ಪ್ರದರ್ಶನ ಜರುಗಲಿದೆ.

ಮಾ.13ರಂದು ಮುಂಜಾನೆ 5.10ರಿಂದ 6.10ರೊಳಗೆ ಸಲ್ಲುವ ಬ್ರಾಹ್ಮಿ ಮುಹೂರ್ತದಲ್ಲಿ ಬೀರೇಶ್ವರಸ್ವಾಮಿ ಲಿಂಗ ಪ್ರತಿಷ್ಠಾಪನೆ, ಕುಂಭ ಕಳಸ ಪ್ರತಿಷ್ಠಾಪನೆ, ಕುಂಭಾಭಿಷೇಕ ನೆರವೇರಲಿದೆ. ನಂತರ ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ ನಡೆಯಲಿದೆ. ಮಾ.14ರಂದು ಬೆಳಗ್ಗೆ 9 ಗಂಟೆಗೆ ಕೂಟ ವಿಸರ್ಜನೆಯಾಗಲಿದೆ.

ಬೀರೇಶ್ವರ ದೇವಾಲಯ ಉದ್ಘಾಟಿಸಲಿರುವ ಸಿಎಂ



ಪುನರ್ ನಿರ್ಮಿಸಿರುವ ಬೀರೇಶ್ವರ ಸ್ವಾಮಿ ದೇವಾಲಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಮಾ.13ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಪ್ರಯಾಣಿಸಿಲಿರುವ ಸಿಎಂ ಸಿದ್ದರಾಮಯ್ಯ ದೇವಾಲಯದ ಸಮೀಪವೇ ನಿರ್ಮಿಸಿರುವ ಹೆಲಿಪ್ಯಾಡ್‌ಗೆ ಬೆಳಗ್ಗೆ 11.40ಕ್ಕೆ ಆಗಮಿಸಲಿದ್ದಾರೆ. ಬಳಿಕ ದೇವಾಲಯಕ್ಕೆ ಬಂದು, ಕಾಗಿನೆಲೆ ಮಹಾಸಂಸ್ಥಾನದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನಿಧ್ಯದಲ್ಲಿ ನೂತನ ದೇವಾಲಯವನ್ನು ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವ ಭೈರತಿ ಸುರೇಶ್, ಸಂಸದ ಸುನೀಲ್ ಬೋಸ್, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ದೇಶ – ವಿದೇಶ

13 ವರ್ಷದಿಂದ ಕೋಮಾದಲ್ಲಿರುವ ವ್ಯಕ್ತಿಯ ದಯಾಮರಣಕ್ಕೆ ಸುಪ್ರೀಂಕೋರ್ಟ್ ಅನುಮತಿ



ನವದೆಹಲಿ: 13 ವರ್ಷಗಳಿಂದ ಕೋಮಾದಲ್ಲಿರುವ 32 ವರ್ಷದ ವ್ಯಕ್ತಿಯ ದಯಾಮರಣಕ್ಕೆ ಅನುಮತಿ ನೀಡಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಕಳೆದ 13 ವರ್ಷಗಳಿಂದ ಕೋಮಾದಲ್ಲಿರುವ 32 ವರ್ಷದ ತನ್ನ ಮಗನಿಗೆ ದಯಾಮರಣಕ್ಕೆ ಕೋರಿ ತಂದೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಬುಧವಾರ ತೀರ್ಪು ನೀಡಿದೆ. ಘನತೆ ಕಾಪಾಡಿಕೊಳ್ಳುವುದರ ಜತೆಗೆ ಸೂಕ್ತ ಯೋಜನೆಯೊಂದಿಗೆ ಹರೀಶ್ ರಾಣಾ ಅವರ ವೈದ್ಯಕೀಯ ಚಿಕಿತ್ಸೆಯನ್ನು ಹಿಂಪಡೆಯಬಹುದು' ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಕೆ.ವಿ.ವಿಶ್ವನಾಥನ್ ಅವರ ಪೀಠವು ದೆಹಲಿಯ ಏಮ್ಸ್‌ಗೆ ನಿರ್ದೇಶನ ನೀಡಿದೆ. 2013ರಲ್ಲಿ ವಸತಿ ಕಟ್ಟಡದ ನಾಲ್ಕನೇ ಮಹಡಿಯಿಂದ ಬಿದ್ದು ತಲೆಗೆ ಪೆಟ್ಟಾಗಿ ಹರೀಶ್ ರಾಣಾ ಅವರು ಕೋಮಾಗೆ ಹೋಗಿದ್ದರು. ತಕ್ಷಣ ಅವರನ್ನು ದೆಹಲಿಯ ಏಮ್ಸ್‌ಗೆ ದಾಖಲಿಸಲಾಗಿತ್ತು. ಹರೀಶ್ ಒಂದು ದಶಕಕ್ಕೂ ಹೆಚ್ಚು ಕಾಲ ಕೋಮಾದಲ್ಲಿದ್ದರು. 2025ರ ಡಿಸೆಂಬರ್ 11ರಂದು ಹರೀಶ್ ಚೇತರಿಸಿಕೊಳ್ಳುವ ಸಾಧ್ಯತೆ ತೀರಾ ಕಡಿಮೆ ಎಂದು ಏಮ್ಸ್‌ನ ವೈದ್ಯಕೀಯ ಮಂಡಳಿ ಹೇಳಿತ್ತು.

ಹೆಂಡತಿ ಕೊಂದ ಭಾರತೀಯನ ಸುಳಿವು ನೀಡಿದರೆ 92 ಲಕ್ಷ ಬಹುಮಾನ!



ನ್ಯೂಯಾರ್ಕ್: ಅಮೆರಿಕದಲ್ಲಿ ಹೆಂಡತಿಯ ಹತ್ಯೆ ಮಾಡಿರುವ ಭಾರತ ಮೂಲದ ವ್ಯಕ್ತಿಯ ಸುಳಿವು ನೀಡಿದವರಿಗೆ 1 ಮಿಲಿಯನ್ ಡಾಲರ್ (ಸುಮಾರು 92 ಲಕ್ಷ) ಬಹುಮಾನ ನೀಡುವುದಾಗಿ ಎಫ್‌ಬಿಐ ಘೋಷಿಸಿದೆ.

ಈ ಹಿಂದೆ ಘೋಷಿಸಲಾಗಿದ್ದ 2.5 ಲಕ್ಷ ಡಾಲರ್ ಬಹುಮಾನವನ್ನು ಈಗ 4 ಪಟ್ಟು ಹೆಚ್ಚಿಸಿದೆ. ಭಾರತ ಮೂಲದ ಭದ್ರೇಶ್ ಕುಮಾರ್ ಚೇತನ್‌ಭಾಯ್ ಪಟೇಲ್(35) ನ್ಯೂಜೆರ್ಸಿಯಿಂದ ತಲೆಮರೆಸಿಕೊಂಡಿದ್ದಾರೆ. ಚೂಪಾದ ಆಯುಧದಿಂದ ಹಲವು ಬಾರಿ ಚುಚ್ಚಿ ಹೆಂಡತಿ ಪಾಲಕ್ ಪಟೇಲ್ ಹತ್ಯೆ ಪ್ರಕರಣದಲ್ಲಿ ಆತ ಆರೋಪಿಯಾಗಿದ್ದಾನೆ. 2015ರ ಏಪ್ರಿಲ್ 12ರಂದು ಕೊಲೆ ನಡೆದಿತ್ತು. ಇಬ್ಬರೂ ಡೋನಟ್ ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದರು. ಪಟೇಲ್ ಅವರು ಎಫ್‌ಬಿಐನ 10 ಮೋಸ್ಟ್ ವಾಂಟೆಡ್ ವ್ಯಕ್ತಿಗಳ ಪಟ್ಟಿಯಲ್ಲಿದ್ದಾರೆ. ಅವರ ಕುರಿತಂತೆ ಖಚಿತ ಮಾಹಿತಿ ನೀಡುವವರಿಗೆ 1 ಮಿಲಿಯನ್ ಡಾಲರ್ ವರೆಗೆ ಬಹುಮಾನ ನೀಡುವುದಾಗಿ ಎಫ್‌ಬಿಐ ಘೋಷಿಸಿದೆ. ಆರಂಭದಲ್ಲಿ, 1,00,000 ಡಾಲರ್ ಇದ್ದ ಬಹುಮಾನವನ್ನು 2,50,000 ಡಾಲರ್‌ಗೆ, ಈಗ 10,00,000 ಡಾಲರ್‌ಗೆ ಹೆಚ್ಚಿಸಲಾಗಿದೆ. 2015ರಲ್ಲೇ ಮೇರಿಲ್ಯಾಂಡ್‌ನ ಬಾಲ್ಟಿ ಮೋರ್‌ನ ಜಿಲ್ಲಾ ನ್ಯಾಯಾಲಯದಲ್ಲಿ ಬಂಧನ ವಾರಂಟ್ ಹೊರಡಿಸಲಾಗಿತ್ತು. ಕಾನೂನುಬಾಹಿರ ವೈಮಾನಿಕ ಪ್ರಯಾಣದ ಆರೋಪವನ್ನೂ ಪಟೇಲ್ ಮೇಲೆ ಹೊರಿಸಲಾಗಿತ್ತು.

ರಸ್ತೆ ದಾಟುವಾಗ ಕಾರು ಡಿಕ್ಕಿ : ವಿದೇಶಿ ಯುವತಿ ಸ್ಥಳದಲ್ಲೇ ಸಾವು



ಚಂಡೀಗಢ: ರಸ್ತೆ ದಾಟುವಾಗ ಕಾರು ಡಿಕ್ಕಿಯಾಗಿ ಯುವತಿಯೋರ್ವಳು 14 ಅಡಿ ಎತ್ತರದಿಂದ ಹಾರಿ ಬಿದ್ದು, ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಂಜಾಬ್‌ನ ಜಿರಾಕ್‌ಪುರದಲ್ಲಿ ನಡೆದಿದೆ.

ಮೃತಳನ್ನು ವಿದೇಶಿ ಪ್ರಜೆ ಮಾವ್ನಡಾ ಎಂದು ಗುರುತಿಸಲಾಗಿದ್ದು, ಸ್ನೇಹಿತ ಅಭಿಷೇಕಗೂ ಸಣ್ಣಪುಟ್ಟ ಗಾಯಗಳಾಗಿವೆ. ಇಬ್ಬರು ಸ್ಥಳೀಯ ಆಸ್ಪತ್ರೆಯಿಂದ ಮರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಸ್ನೇಹಿತ ಅಭಿಷೇಕ ಮಾಹಿತಿ ಪ್ರಕಾರ, ತಮ್ಮ ಪತ್ನಿಯನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲು ಬಂದಿದ್ದರು. ಈ ವೇಳೆ ಆಸ್ಪತ್ರೆಗೆ ದಾಖಲಿಸಿ, ಇಬ್ಬರು ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಇದೇ ಸಮಯಕ್ಕೆ ಕಪ್ಪು ಬಣ್ಣದ ಆಡಿ ಕಾರೊಂದು ವೇಗವಾಗಿ ಬಂದು ಡಿಕ್ಕಿ ಹೊಡೆದಿದೆ. ಪರಿಣಾಮ ಮಾವ್ನಡಾ ಸುಮಾರು 14 ಅಡಿ ಎತ್ತರದಿಂದ ಹಾರಿ ರಸ್ತೆ ಬದಿಗೆ ಬಿದ್ದು, ಗಂಭೀರವಾಗಿ ಗಾಯಗೊಂಡಿದ್ದಳು. ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ ಎಂದು ಮಾಹಿತಿ ನೀಡಿದ್ದಾರೆ. ಅಪಘಾತದ ಬಳಿಕ ಸ್ಥಳೀಯರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದರೂ ಒಂದು ಗಂಟೆ ನಂತರ ಸ್ಥಳಕ್ಕೆ ಬಂದಿದ್ದಾರೆ. ಸದ್ಯ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸಿವಿಲ್ ಆಸ್ಪತ್ರೆಗೆ ರವಾನಿಸಲಾಗಿದೆ. ಇನ್ನೂ ಅಧಿಕಾರಿಗಳು ಹತ್ತಿರದ ಸಿಸಿಟಿವಿ ಕ್ಯಾಮರಾಗಳನ್ನು ಪರಿಶೀಲಿಸಿ ತನಿಖೆ ಆರಂಭಿಸಿದ್ದಾರೆ.

ಮುಂಭಾಗದ ಚಕ್ರಗಳು ಕಳಚಿದರೂ ಯಶಸ್ವಿಯಾಗಿ ಲ್ಯಾಂಡ್ ಆದ ವಿಮಾನ



ಫುಕೆಟ್: ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸಂಸ್ಥೆಗೆ ಸೇರಿದ ವಿಮಾನವೊಂದು ಬುಧವಾರ ಥಾಯ್ಲೆಂಡ್‌ನ ಫುಕೆಟ್ ವಿಮಾನ ನಿಲ್ದಾಣದಲ್ಲಿ ಹಾರ್ಡ್ ಲ್ಯಾಂಡಿಂಗ್ ಮಾಡಿದ್ದು, ಮುಂಭಾಗದ ಎರಡು ಚಕ್ರಗಳು (ನೋಸ್ ವೀಲ್ಸ್) ಕಳಚಿಕೊಂಡಿವೆ. ಹೈದರಾಬಾದ್‌ನಿಂದ ಫುಕೆಟ್‌ಗೆ ಹಾರಾಟ ನಡೆಸುತ್ತಿದ್ದ ಬೋಯಿಂಗ್ 737 ಮ್ಯಾಕ್ಸ್ 8 ವಿಮಾನದ ಮುಂದಿನ ಎರಡು ಚಕ್ರಗಳು ಕಳಚಿ ಹೋಗಿವೆ. ವಿಮಾನದಲ್ಲಿದ್ದ ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿದ್ದು, ಯಾವುದೇ ಗಾಯಗಳಾಗಿಲ್ಲ ಎಂದು ಡಿಜಿಸಿಎ ಅಧಿಕಾರಿಗಳು ತಿಳಿಸಿದ್ದಾರೆ. ಥಾಯ್ಲೆಂಡ್ ವಿಮಾನಯಾನ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಸಂಬಂಧಿತ ಪ್ರಾಧಿಕಾರದಿಂದ ಈ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ. ವಿಮಾನವು ರನ್‌ವೇಯಲ್ಲಿ ಸಿಲುಕಿಕೊಂಡಿದ್ದು, ನಿಲುಗಡೆ ಜಾಗಕ್ಕೆ ಎಳೆದುಕೊಂಡು ಹೋಗುವ ಪ್ರಕ್ರಿಯೆ ನಡೆಯುತ್ತಿದೆ. ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಅವಘಡದ ಬಗ್ಗೆ ಪ್ರತಿಕ್ರಿಯಿಸಿರುವ ಏರ್ ಇಂಡಿಯಾ ಎಕ್ಸ್‌ಪ್ರೆಸ್, ಲ್ಯಾಂಡಿಂಗ್ ವೇಳೆ ವಿಮಾನದ ಮುಂಭಾಗದ ಚಕ್ರದಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದೆ. ಸುರಕ್ಷತಾ ನಿಯಮಗಳನ್ನು ಪಾಲಿಸುವ ಮೂಲಕ ನಮ್ಮ ಸಿಬ್ಬಂದಿ, ಪ್ರಯಾಣಿಕರನ್ನು ಸುರಕ್ಷಿತವಾಗಿ ಕೆಳಗಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಿದೆ.

500ಕ್ಕೂ ಅಧಿಕ ಎಲ್‌ಪಿಜಿ ಸಿಲಿಂಡರ್ ಹೊಂದಿದ್ದ ಟ್ರಕ್ ಕಳ್ಳತನ!



ಜಾನ್ಸಿ(ಉತ್ತರ ಪ್ರದೇಶ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ದೇಶದಾದ್ಯಂತ ಎಲ್‌ಪಿಜಿ ಕೊರತೆ ಉಂಟಾಗಿರುವ ಬೆನ್ನಲ್ಲೇ 500ಕ್ಕೂ ಅಧಿಕ ಎಲ್‌ಪಿಜಿ ಸಿಲಿಂಡರ್ ಹೊಂದಿದ್ದ ಟ್ರಕ್ ಕಳ್ಳತನವಾಗಿರುವ ಘಟನೆಯು ಉತ್ತರ ಪ್ರದೇಶದಲ್ಲಿ ಬುಧವಾರ ನಡೆದಿದೆ.

ರಾಯಗಂಜ್ ಮೂಲದ ನೀರಜ್ ಅಗರವಾಲ್ ಅವರಿಗೆ ಸೇರಿದ ಟ್ರಕ್‌ನಲ್ಲಿ ಭಾರತ್ ಪೆಟ್ರೋಲಿಯಂಗೆ ಸೇರಿದ 524 ಎಲ್‌ಪಿಜಿ ಸಿಲಿಂಡರ್ ಸಾಗಿಸಲಾಗುತ್ತಿತ್ತು. ಮಾರ್ಚ್ 2ರಂದು ಟ್ರಕ್ ಚಾಲಕ ರಾಜ್‌ಕುಮಾರ್ ಎನ್ನುವವರು ಗಾಡಿಯನ್ನು ಕರಾರಿ ಡಿಪೊ ಬಳಿ ನಿಲ್ಲಿಸಿ, ಹೋಳಿ ಹಬ್ಬಕ್ಕಾಗಿ ಊರಿಗೆ ತೆರಳಿ ಮಾರ್ಚ್ 6ರಂದು ಮರಳಿ ಬಂದಾಗ ಟ್ರಕ್ ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನೀರಜ್ ಅಗರವಾಲ್ ಅವರ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಮಾ.7ರಂದು ಬರಗಾಂವ್ ಪ್ರದೇಶದ ನಿರ್ಜನ ಸ್ಥಳವೊಂದರಲ್ಲಿ ಟ್ರಕ್ ಪತ್ತೆಯಾಗಿದೆ. ಆದರೆ, ಅದರಲ್ಲಿದ್ದ ಸಿಲಿಂಡರ್‌ಗಳು ಕಳ್ಳತನವಾಗಿವೆ ಎಂದು ಹೇಳಿದ್ದಾರೆ. ಪ್ರಕರಣದ ತನಿಖೆ ನಡೆಯುತ್ತಿದ್ದು, ಆದಷ್ಟು ಬೇಗ ಕಳ್ಳರನ್ನು ಪತ್ತೆ ಮಾಡುತ್ತೇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರು ಮಿತ್ರ ಗುರುವಾರ 12 ಮಾರ್ಚ್ 2026

ನಗರಸಭೆಯ 1.71 ಕೋಟಿ ರೂ. ಉಳಿತಾಯ ಬಜೆಟ್ ಮಂಡನೆ

ಮಡಿಕೇರಿ, ಮಾ.11– ನಗರಸಭೆಯ 1.71 ಕೋಟಿ ರೂ. ಉಳಿತಾಯವನ್ನು ತೋರುವ ಆಯವ್ಯಯವನ್ನು ಬುಧವಾರ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಲಾಯಿತು.

ನಗರಸಭೆಯ ಸಭಾಂಗಣದಲ್ಲಿ ಪಿ. ಕಲಾವತಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಡನೆಯಾದ ಆಯವ್ಯಯದಲ್ಲಿ ಆರಂಭಿಕ ಶಿಲ್ಕು 13.31 ಕೋಟಿ ಹಾಗೂ ನಿರೀಕ್ಷಿತ ಆದಾಯ 38.57 ಕೋಟಿ ಸೇರಿದಂತೆ ಒಟ್ಟು 51.87 ಕೋಟಿ ಒಟ್ಟು ಆದಾಯವನ್ನು ನಿರೀಕ್ಷಿಸಲಾಗಿದೆ. ಇದಕ್ಕೆ ಎದುರಾಗಿ ನಗರವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 50.17ಕೋಟಿ ವೆಚ್ಚವನ್ನು ಅಂದಾಜಿಸಲಾಗಿದ್ದು, 1.71 ಕೋಟಿ ರೂ. ಉಳಿತಾಯವನ್ನು ತೋರಿಸಲಾಗಿದೆ.

ಆದಾಯದ ಮೂಲಗಳು: ಆಯವ್ಯಯದಲ್ಲಿ ಪ್ರಮುಖವಾಗಿ ಎಸ್‌ಎಫ್‌ಸಿ ವೇತನ ಅನುದಾನವಾಗಿ 500 ಲಕ್ಷ, ಎಸ್‌ಎಫ್‌ಸಿ ವಿದ್ಯುತ್ ಅನುದಾನ 422 ಲಕ್ಷ, ಎಸ್‌ಎಫ್‌ಸಿ ಮುಕ್ತ ನಿಧಿಯಿಂದ 26 ಲಕ್ಷ, 15–16ನೇ ಹಣಕಾಸು ಅನುದಾನವಾಗಿ 332 ಲಕ್ಷ, ಎಸ್‌ಎಫ್‌ಸಿ ವಿಶೇಷ ಅನುದಾನವಾಗಿ 50 ಲಕ್ಷ , ಘನತ್ಯಾಜ್ಯ ನಿರ್ವಹಣೆ ಅನುದಾನವಾಗಿ 50 ಲಕ್ಷ ಸೇರಿದಂತೆ ವಿವಿಧ ಬಾಬ್ತುಗಳಿಂದ ದೊರಕಬಹುದಾದ ಅನುದಾನಗಳ ಬಗ್ಗೆ ಅಧ್ಯಕ್ಷರು ಮಾಹಿತಿ ನೀಡಿದರು.



ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ ಆಯವ್ಯಯ ಮಂಡಿಸಿದರು.

ಪ್ರಸಕ್ತ ಸಾಲಿನಲ್ಲಿ ನಗರ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮತ್ತು ದಂಡದ ರೂಪದಲ್ಲಿ 558 ಲಕ್ಷ, ವಾಣಿಜ್ಯ ಮಳಿಗೆ ಬಾಡಿಗೆ ಮತ್ತು ದಂಡವಾಗಿ 118.50 ಲಕ್ಷ, ವ್ಯಾಪಾರ ಪರವಾನಗಿ ಶುಲ್ಕ ಮತ್ತು ದಂಡದ ರೂಪದಲ್ಲಿ 50 ಲಕ್ಷ, ನೀರಿನ ತೆರಿಗೆ ಶುಲ್ಕಗಳು, ನೀರು ಸರಬರಾಜು ಸಂಪರ್ಕ ಶುಲ್ಕ ಮತ್ತು ದಂಡದ ರೂಪದಲ್ಲಿ 126.50 ಲಕ್ಷ, ಮಾರುಕಟ್ಟೆ ಶುಲ್ಕವಾಗಿ 65 ಲಕ್ಷ ಸೇರಿದಂತೆ ವಿವಿಧ ಬಾಬ್ತುಗಳಿಂದ ಬರಬಹುದಾದ ಆದಾಯಗಳ ಬಗ್ಗೆ ವಿವರಿಸಿದರು.

ಉದ್ದೇಶಿತ ಕಾಮಗಾರಿಗಳು: ವಾಣಿಜ್ಯ ಮಳಿಗೆಗಳ ನಿರ್ಮಾಣ ಕಾಮಗಾರಿಗೆ 150 ಲಕ್ಷ ರೂ.ಗಳನ್ನು ನಿಗಧಿಪಡಿಸಲಾಗಿದ್ದರೆ, ಸ್ವಾಗತ ಕಮಾನು, ಕಾಂಪೌಂಡ್, ರಸ್ತೆ ಬದಿ ಮಾರ್ಗಸೂಚಿ ಫಲಕಗಳ ಅಳವಡಿಕೆ, ಸಿಸಿ ಟಿವಿ ಅಳವಡಿಕೆ, ವೃತ್ತಗಳ ಅಭಿವೃದ್ಧಿ, ಬಸ್ ನಿಲ್ದಾಣ ಅಭಿವೃದ್ಧಿಗೆ 75 ಲಕ್ಷ ರೂ.ಗಳನ್ನು ಆಯವ್ಯಯದಲ್ಲಿ ಕಾಯ್ದಿರಿಸಲಾಗಿದೆ.

ಅಗತ್ಯವಿರುವೆಡೆ ತಡೆಗೋಡೆ ನಿರ್ಮಾಣ, ರಸ್ತೆ, ಪಾದಚಾರಿ ರಸ್ತೆ, ಚರಂಡಿ ಅಭಿವೃದ್ಧಿಗೆ 375 ಲಕ್ಷ, ವಾರ್ಡ್‌ಗಳ ಅಭಿವೃದ್ಧಿಗೆ 200 ಲಕ್ಷ, ಬೀದಿ ದೀಪಗಳು, ಸಂಚಾರಿ ದೀಪಗಳು, ವಿದ್ಯುತ್ ಕಂಬಗಳ ಕಾಮಗಾರಿಗೆ 50 ಲಕ್ಷ, ಮಳೆ ನೀರಿನ ಚರಂಡಿಗಳು, ಸೇತುವೆ ಕಾಮಗಾರಿಗೆ 65 ಲಕ್ಷ, ಸಾರ್ವಜನಿಕ ಶೌಚಾಲಯ ಕಟ್ಟಡಗಳ ನಿರ್ಮಾಣಕ್ಕೆ 30 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದೆ.

ಪೇ ಅಂಡ್ ಯೂಸ್ ಶೌಚಾಲಯ ನಿರ್ಮಾಣಕ್ಕೆ 225 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದ್ದರೆ, ನೈರ್ಮಲ್ಯ ವಾಹನ ಖರೀದಿಗೆ 100 ಲಕ್ಷ, ಘನತ್ಯಾಜ್ಯ ನಿರ್ವಹಣಾ ಘಟಕ ಕಾಮಗಾರಿಗೆ 50 ಲಕ್ಷ , ಪಂಪ್ ಹೌಸ್ ಅಭಿವೃದ್ಧಿಗೆ 15 ಲಕ್ಷ, ಕೆರೆ ಅಭಿವೃದ್ಧಿ ಕಾಮಗಾರಿಗೆ 100 ಲಕ್ಷ, ಮಾರ್ಕೆಟ್ ಕಟ್ಟಡ ಅಭಿವೃದ್ಧಿಗೆ 25 ಲಕ್ಷ, ರಸ್ತೆಗಳು ಮತ್ತು ಚರಂಡಿಗಳ ದುರಸ್ತಿ ಮತ್ತು ನಿರ್ವಹಣೆಗೆ 140 ಲಕ್ಷ ಸೇರಿದಂತೆ ವಿವಿಧ ಬಾಬ್ತುಗಳಲ್ಲಿ ಬಳಕೆಯಾಗಬಹುದಾದ ವೆಚ್ಚದ ಮಾಹಿತಿಯನ್ನು ಅಧ್ಯಕ್ಷರು ಸಭೆಗೆ ನೀಡಿದರು.

ಚರ್ಚೆಗೆ ವಿಶೇಷ ಸಭೆ: ಆಯವ್ಯಯದ ಮಂಡನೆಯ ಬಳಿಕ ವಿರೋಧ ಪಕ್ಷ ಎಸ್‌ಡಿಪಿಐನ ಅಮಿನ್ ಮೊಹಿಸಿನ್, ಮನ್ಸೂರ್ ಅವರು, ಆಯವ್ಯಯ ಸಮರ್ಪಕವಾಗಿಲ್ಲ. ಸರ್ಕಾರಕ್ಕೆ ಹಿಂದಿರುಗಿದ ಅನುದಾನಗಳ ಬಗ್ಗೆ ಮಾಹಿತಿಗಳಿಲ್ಲ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ಸಂದರ್ಭ ಉಪಾಧ್ಯಕ್ಷ ಮಹೇಶ್ ಜೈನಿ ಅವರು, ಆಯವ್ಯಯ ಕುರಿತು ಚರ್ಚೆಗೆ ವಿಶೇಷ ಸಭೆ ಕರೆಯುವುದಾಗಿ ತಿಳಿಸಿದರು.

ಉಪಾಧ್ಯಕ್ಷ ಮಹೇಶ್ ಜೈನಿ ಅವರು ಆಯವ್ಯಯದ ಪೂರ್ಣವಿವರವನ್ನು ಸಭೆಯ ಮುಂದಿಟ್ಟರು. ಸಭೆಯಲ್ಲಿ ಪೌರಾಯುಕ್ತ ಹೆಚ್.ಆರ್.ರಮೇಶ್, ನಗರಸಭಾ ಸದಸ್ಯರುಗಳು ಉಪಸ್ಥಿತರಿದ್ದರು.

ಉಪಾಧ್ಯಕ್ಷರಿಂದ ಆಯವ್ಯಯ ಮಂಡನೆ

ಯಾವುದೇ ಸ್ಥಳೀಯ ಸಂಸ್ಥೆಗಳಾಗಲಿ ಸಾಮಾನ್ಯವಾಗಿ ಆಯವ್ಯಯವನ್ನು ಸಭೆಯ ಅಧ್ಯಕ್ಷತೆ ವಹಿಸುವ ಅಧ್ಯಕ್ಷರೇ ಮಂಡಿಸಬೇಕು. ಆದರೆ ಮಡಿಕೇರಿ ನಗರಸಭೆಯಲ್ಲಿ ಮೊದಲ ಬಾರಿಗೆ ಉಪಾಧ್ಯಕ್ಷರು ಆಯವ್ಯಯವನ್ನು ಮಂಡಿಸಿದ್ದಾರೆ.

ಸಭೆಯ ಆರಂಭದಲ್ಲೆ ಉಪಾಧ್ಯಕ್ಷ ಮಹೇಶ್ ಜೈನಿ ಬಜೆಟ್ ಮಂಡಿಸಲು ಮುಂದಾದಾಗ ಎಸ್‌ಡಿಪಿಐ ಸದಸ್ಯರು ಇದಕ್ಕೆ ತೀವ್ರ ವಿರೋಧ ವ್ಯಕ್ತ ಪಡಿಸಿ ಅಧ್ಯಕ್ಷರೆ ಆಯವ್ಯಯವನ್ನು ಮಂಡಿಸಬೇಕೆಂದು ಆಗ್ರಹಿಸಿದರು.

ತಮಗೆ ಆರೋಗ್ಯ ಸರಿಯಿಲ್ಲದ ಹಿನ್ನೆಲೆಯಲ್ಲಿ ಆಯವ್ಯಯ ಮಂಡನೆಗೆ ತಾನೇ ಉಪಾಧ್ಯಕ್ಷರಿಗೆ ಸೂಚಿಸಿರುವುದಾಗಿ ಅಧ್ಯಕ್ಷೆ ಪಿ.ಕಲಾವತಿ ತಿಳಿಸಿದರು. ಇದಕ್ಕೆ ಸಹಮತ ವ್ಯಕ್ತಪಡಿಸದ ಎಸ್‌ಡಿಪಿಐ ಸದಸ್ಯರು, ಕನಿಷ್ಟ ಆಯವ್ಯಯದ ಮೊದಲ ನಾಲ್ಕು ಸಾಲುಗಳನ್ನಾದರೂ ತಾವು ಸಭೆಗೆ ಮಂಡಿಸಬೇಕು. ಇದು ನಿಮಗೆ ದೊರಕಿರುವ ಅಧಿಕಾರವೆಂದು ತಿಳಿಸಿದರು. ಈ ವೇಳೆ ಬಿಜೆಪಿ ಮತ್ತು ಎಸ್‌ಡಿಪಿಐ ಸದಸ್ಯರ ನಡುವೆ ತೀವ್ರ ವಾಗ್ವಾದ ನಡೆಯಿತು. ಬಳಿಕ ಅಧ್ಯಕ್ಷೆ ಪಿ.ಕಲಾವತಿ ಅವರು ಆಯವ್ಯಯದ ಮೊದಲ ನಾಲ್ಕು ಸಾಲುಗಳನ್ನು ಓದಿದ ಬಳಿಕ, ಉಪಾಧ್ಯಕ್ಷ ಮಹೇಶ್ ಜೈನಿ ಅವರು ಆಯವ್ಯಯದ ಪೂರ್ಣ ವಿವರವನ್ನು ಸಭೆಯ ಮುಂದಿಟ್ಟರು.

ಶನಿವಾರ ಅರೆಭಾಷೆ ಪ್ರಶಸ್ತಿ ಪ್ರದಾನ

ಮಡಿಕೇರಿ ಮಾ.11– ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿತರಣಾ ಸಮಾರಂಭವು ಮಾ 14ರಂದು ಮಂಗಳೂರಿನ ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ತಿಳಿಸಿದ್ದಾರೆ.

ಪ್ರಶಸ್ತಿಯು 50 ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ. ಈ ಬಾರಿಯ ಪ್ರಶಸ್ತಿಗೆ ಸಂಶೋಧಕ ಪುತ್ತೂರು ಅನಂತರಾಜ ಗೌಡ, ಅರೆ ಭಾಷೆ ಸಂಘಟಕಿ ಲೋಕೇಶ್ವರಿ ವಿನಯಚಂದ್ರ ಹಾಗೂ ಅರೆಭಾಷೆ ಸಾಹಿತಿ ಕಟ್ರತನ ಲಲಿತಾ ಅಯ್ಯಣ್ಣ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಇದೇ ಸಂದರ್ಭದಲ್ಲಿ ವಿವಿಧ ಲೇಖಕರು ಸಲ್ಲಿಸಿ ರುವ ಆಯ್ದ 12 ಪುಸ್ತಕಗಳ ಬಿಡುಗಡೆಯಾಗಲಿದೆ.

ಪರಿಕರಗಳ ವಿತರಣೆ: ಅರೆಭಾಷೆ ಅಕಾಡೆಮಿಯಿಂದ ಇದೇ ಸಂದರ್ಭದಲ್ಲಿ ಅರೆಭಾಷೆ ಮಾತನಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾವಿದರಿಗೆ ವಾದ್ಯ ಪರಿ ಕರಗಳನ್ನು ವಿತರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಇಂದಿನ ಪ್ರತಿಭಟನೆ ಮುಂದೂಡಿಕೆ

ವಿರಾಜಪೇಟೆ, ಮಾ.11–ಪುರಸಭೆ ವ್ಯಾಪ್ತಿಯಲ್ಲಿ ನಿವಾಸಿಗಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಈಡೇರಿಕೆಗೆ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಮುಂದೂಡಿರುವುದಾಗಿ ಸಮಿತಿಯ ಮುಖಂಡ ಡಾ. ದುರ್ಗಾಪ್ರಸಾದ್ ತಿಳಿಸಿದ್ದಾರೆ.

ಜನಪರ ಬೇಡಿಕೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿ ನಾಗರಿಕ ಸಮಿತಿ ಮತ್ತು ಸಾರ್ವಜನಿಕ ಕಾರ್ಯಕರ್ತರ ಕೂಟದ ಸಂಯುಕ್ತ ಹೋರಾಟ ಸಮಿತಿಗಳ ಆಶ್ರಯದಲ್ಲಿ ಮಾ.12 ರಂದು ಪುರಸಭೆ ಕಚೇರಿ ಎದುರು ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಕಾರಣಾಂತರದಿಂದ ಮುಂದೂಡಲಾಗಿದೆ, ಮುಂದೆ ನಡೆಸಲಾಗುವ ಪ್ರತಿಭಟನೆಯ ದಿನಾಂಕವನ್ನು ಪ್ರಕಟಿಸಲಾಗುವುದು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಹಿಳೆಯರು ಸಂಘಟಿತರಾಗಿ ಸಮಾಜವನ್ನು ಬಲವರ್ಧನೆಗೊಳಿಸಿ

ನಾಪೋಕ್ಲು, ಮಾ.11(ದುಗ್ಗಳ)– ಮಹಿಳೆಯರು ಸಂಘಟಿತರಾಗಿ ಸಮಾಜವನ್ನು ಬಲವರ್ಧನೆಗೊಳಿಸಬೇಕೆಂದು ಅರೆಯಡ ತೇಜ ಮಾದಪ್ಪ ಹೇಳಿದ್ದಾರೆ.

ಇಲ್ಲಿನ ಮಹಿಳಾ ಸಮಾಜದ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮಹಿಳೆಯರು ಸಂಘಟನೆಯ ಮನೋಭಾವವನ್ನು ಬೆಳೆಸಿಕೊಂಡು ಒಟ್ಟಾಗಿ ಸೇರಿ ಸಮಾಜವನ್ನು ಉತ್ತಮ ಮಟ್ಟಕ್ಕೆ ಕೊಂಡೊಯ್ಯಬೇಕು ಎಂದು ಆಶಿಸಿದರು.

ಸಮಾಜದ ಬೆಳವಣಿಗೆ ನಿಟ್ಟಿನಲ್ಲಿ ಇಂದು ಮಹಿಳೆಯರು ಒಂದು ಹೆಜ್ಜೆ ಮುಂದೆ ಇದ್ದಾರೆ. ಎಲ್ಲ ರಂಗಗಳಲ್ಲೂ ಮಹಿಳೆಯರು ಸಮಾಜಕ್ಕೆ ಉತ್ತಮ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ತನಗೆ ವಹಿಸಿದ ಎಲ್ಲಾ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾಳೆ. ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರ ಸಾಧನೆ ಶ್ಲಾಘನೀಯ ಎಂದರು.

ಮಹಿಳಾ ಸಮಾಜದ ನೂತನ ಅಧ್ಯಕ್ಷೆ ಬಿದ್ದಾಟಂಡ ಮೇರಿ ಚಿಟ್ಟಿಯಪ್ಪ ಮಾತನಾಡಿ, ಸಮಾಜ, ಸಂಘ ಸಂಸ್ಥೆಗಳು ಅಭಿವೃದ್ಧಿ ಹೊಂದಬೇಕಾದರೆ ಸರ್ವ ಸದಸ್ಯರ ಸಹಕಾರ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ನಿಸ್ವಾರ್ಥ ಸೇವೆಯನ್ನು ನೀಡಿ ಉನ್ನತಿಗೆ ಶ್ರಮಿಸುವಂತಾಗಬೇಕೆಂ ದರು.

ಇದೇ ಸಂಧರ್ಭದಲ್ಲಿ ಮಹಿಳಾ ಸಮಾಜದಿಂದ ಮಾಜಿ ಅಧ್ಯಕ್ಷೆ ಕೇಟೋಳಿರ ಶಾರದಾ ಪಳಂಗಪ್ಪ, ಮೂವೇರ ಧರಣಿ ಗಣಪತಿ, ಮಂಡೀರ ವಿಮಲಾ ಸೋಮಣ್ಣ ಅವರನ್ನು ಗೌರವಿಸಲಾಯಿತು.

ಕಾರಿಗೆ ಕಾಡುಕೋಣ ಡಿಕ್ಕಿ: ಪ್ರಯಾಣಿಕರು ಪಾರು

ಸಿದ್ದಾಪುರ, ಮಾ.11–ಕಾಡುಕೋಣವೊಂದು ಕಾರಿನ ಮೇಲೆ ದಾಳಿನಡೆಸಿ ಜಖಂಗೊಳಿದ ಘಟನೆ ವಿರಾಜಪೇಟೆ ತಾಲೂಕು ಸಿದ್ದಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕರಡಿಗೋಡು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಆರೆಂಜ್ ಕೌಂಟಿ ಸಂಸ್ಥೆಗೆ ಸೇರಿದ ಕಾರು ಪಟ್ಟಣಕ್ಕೆ ಬರುತ್ತಿದ್ದ ಸಂದರ್ಭದಲ್ಲಿ ಕಾಡುಕೋಣ ಒಂದು ತೋಟದಿಂದ ಮತ್ತೊಂದು ತೋಟಕ್ಕೆ ಸಾಗುವ ರಭಸದಲ್ಲಿ ಕಾರಿಗೆ ಡಿಕ್ಕಿ ಹೊಡೆದಿದ್ದು ಕಾರಿನ ಮುಂಭಾಗ ಜಖಂಗೊಂಡಿದೆ. ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಲಯ ಅರಣ್ಯಸಂರಕ್ಷಣಾಧಿಕಾರಿ ಶಿವರಾಂ ನಿರ್ದೇಶನದ ಮೇರೆಗೆ ವಲಯ ಉಪ ವಲಯ ಅರಣ್ಯ ಅಧಿಕಾರಿ ಸಂಜಿತ್ ಸೋಮಯ್ಯ, ಆರ್‌ಆರ್‌ಟಿ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈ ಭಾಗದಲ್ಲಿ ಕಾಡುಕೋಣ ಹಾವಳಿ ಮಿತಿಮೀರಿದ್ದು, 20 ದಿನಗಳ ಹಿಂದೆ ಗೂಡ್ಸ್ ವಾಹನದ ಮೇಲೆ ಕಾಡುಕೋಣವೊಂದು ದಾಳಿಮಾಡಿದ ಘಟನೆಯೂ ನಡೆದಿತ್ತು. ಇದೀಗ ಕಾಡಾನೆಯೊಂದಿಗೆ ಕಾಡು ಕೋಣಗಳು ಕೂಡ ಕಾಫಿ ತೋಟಗಳಲ್ಲಿ ಕಾಣಿಸಿಕೊಂಡು ಕಾರ್ಮಿಕರು ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡುತ್ತಿವೆ.

ಕರಡಿಗೋಡು ಭಾಗದಲ್ಲಿರುವ ಕಾಡು ಪ್ರಾಣಿಗಳನ್ನು ಕಾಡಿಗಟ್ಟಬೇಕೆಂದು ಸಾಮಾಜಿಕ ಕಾರ್ಯಕರ್ತ ಅಪ್ಸು ಅಣ್ಣು ಇಲಾಖೆಯನ್ನು ಒತ್ತಾಯಿಸಿದ್ದಾರೆ. ನಿರಂತರ ಕಾಡು ಪ್ರಾಣಿಗಳ ಹಾವಳಿಯಿಂದ ಫಸಲು ನಷ್ಟವಾಗುವುದರೊಂದಿಗೆ ಕಾರ್ಮಿಕರು ಹಾಗೂ ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡುತ್ತಿವೆ. ಕಾಡು ಪ್ರಾಣಿಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟದಿದ್ದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಪ್ರಸನ್ನ ಕುಶಾಲಪ್ಪಗೆ ಕುಟುಂಬ ಸದಸ್ಯರಿಂದ ಸನ್ಮಾನ

ನಾಪೋಕ್ಲು: ವಿಜಯವಾಣಿ ಸಂಸ್ಥೆಯ ವಿಜಯ ರತ್ನ ಪ್ರಶಸ್ತಿ ಪುರಸ್ಕೃತರಾದ ಎಡಿಕೇರಿ ಪ್ರಸನ್ನ ಅವರನ್ನು ಎಡಕೇರಿ ಕುಟುಂಬದ ಎಲ್ಲಾ ಸದಸ್ಯರು ಆತ್ಮೀಯತೆಯಿಂದ ಸನ್ಮಾನಿಸಿದರು

ಜಿಲ್ಲೆಯಲ್ಲಿ ಎಡಿಕೇರಿ ಪ್ರಸನ್ನ ಮಾಡುತ್ತಿರುವ ಉತ್ತಮ ಸಮಾಜ ಸೇವೆಯನ್ನು ಗುರುತಿಸಿ ಅತ್ಯುತ್ತಮ ಬಿಸಿನೆಸ್ ಮ್ಯಾನ್ ಎಂದು ವಿಜಯವಾಣಿ ಸಂಸ್ಥೆ ನೀಡಿದ ವಿಜಯ ರತ್ನ ಅವಾರ್ಡ್ ಅನ್ನು ದುಬೈನಲ್ಲಿ ನೀಡಿದ ಪ್ರಶಸ್ತಿಯನ್ನು ಸ್ವೀಕರಿಸಿ ಹಿಂದಿರುಗಿ ಬಂದಿರುವ ಸಂತೋಷದ ಸಂದರ್ಭದಲ್ಲಿ ಈ ಸನ್ಮಾನ ನೆರವೇರಿದೆ.

ಗುರುಹಿರಿಯರು ಮತ್ತು ಬಂಧು–ಬಳಗ ಸೇರಿ ಅಭಿನಂದಿಸಿ, ಪ್ರಸನ್ನ ಅವರ ಸೇವೆ ಮತ್ತು ಸಾಧನೆಗಳು ಇನ್ನಷ್ಟು ಎತ್ತರಕ್ಕೆ ಬೆಳೆದು ಮುಂದಿನ ಭವಿಷ್ಯ ಇನ್ನಷ್ಟು ಉಜ್ವಲವಾಗಿರಲಿ ಎಂದು ಹಾರೈಸಿದರು.



ದುರ್ಬಲ ವರ್ಗದವರಿಗೆ ಉಚಿತ ಕಾನೂನು ನೆರವು



ಕುಶಾಲನಗರ, ಮಾ.11–ಸಮಾಜದ ದುರ್ಬಲ ವರ್ಗದವರಿಗೆ ಉಚಿತ ಕಾನೂನು ನೆರವು ಒದಗಿಸಲು ಕಾನೂನು ಸೇವಾ ಪ್ರಾಧಿಕಾರ ಸ್ಥಾಪಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆದ ಹಿರಿಯ ನ್ಯಾಯಾಧೀಶೆ ಶುಭಾ ತಿಳಿಸಿದ್ದಾರೆ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕೊಡಗು, ಮಡಿಕೇರಿ ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ವತಿಯಿಂದ ಇಲ್ಲಿನ ನ್ಯಾಯಾಲಯ ಸಂಕೀರ್ಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಕಾರ್ಯ ಕ್ರಮದಲ್ಲಿ ನೂತನವಾಗಿ ಸ್ಥಾಪನೆಯಾದ ತಾಲೂಕು ಕಾನೂನು ಸೇವಾ ಪ್ರಾಧಿಕಾರವನ್ನು ಉದ್ಘಾಟಿಸಿ, ಮೂಲಭೂತವಾಗಿ ಸಮಾಜದ ದುರ್ಬಲ ವರ್ಗಗಳಿಗೆ ಉಚಿತ ಮತ್ತು ಸಮರ್ಥ ಕಾನೂನು ಸೇವೆಯನ್ನು ಒದಗಿಸುವ ಗುರಿಯನ್ನು ಕಾನೂನು ಸೇವೆಗಳ ಕಾಯಿದೆ ಹೊಂದಿದೆ ಎಂದರು. ಸ್ಥಳೀಯ ಕುಂದು ಕೊರತೆಗಳನ್ನು ನಿವಾರಿಸಿ ಬಡವರಿಗೆ ನ್ಯಾಯವನ್ನು ಒದಗಿಸುವ ಜವಾಬ್ದಾರಿ ವಕೀಲರ ಮೇಲಿದೆ. ಪ್ರತಿಯೊಬ್ಬರೂ ಪ್ರಾಧಿಕಾರದ ಸೇವೆಯನ್ನು ಸದುಪಯೋಗಪಡಿಸಿಕೊಂಡು ತಮ್ಮ ವ್ಯಾಜ್ಯವನ್ನು ಬೇಗ ಮುಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವಕೀಲರ ಸಂಘದ ಅಧ್ಯಕ್ಷ ಆರ್.ಕೆ. ನಾಗೇಂದ್ರ ಬಾಬು ಮಾತನಾಡಿ, ನ್ಯಾಯಾಲಯದಲ್ಲಿ ವ್ಯಾಜ್ಯಗಳನ್ನು ದೀರ್ಘಕಾಲ ಮುಂದುವರೆಸುವ ಬದಲು ಪ್ರಾಧಿಕಾರದ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ಎಲ್ಲರು ಪ್ರಯತ್ನಿಸಬೇಕು ಎಂದರು.

ತಾಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಸಿವಿಲ್ ಹಿರಿಯ ನ್ಯಾಯಾಧೀಶೆ ರೇಖಾ ಹಾಗೂ ಸದಸ್ಯ ಕಾರ್ಯದರ್ಶಿ ಸಿವಿಲ್ ನ್ಯಾಯಾಧೀಶೆ ಎಲ್. ಚೈತ್ರ ಮಾತನಾಡಿದರು. ಸಿವಿಲ್ ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕ ಕೆ.ಪಿ. ಹೇಮಂತ್, ತಹಸೀಲ್ದಾರ್ ಕಿರಣ್ ಜಿ. ಗೌರಯ್ಯ, ಇಓ ಟಿ.ಎಸ್.ಗಿರೀಶ್ ಇದ್ದರು.

ಹೋಟೇಲ್ ಉದ್ಯಮದ ಮೇಲೆ ಪರಿಣಾಮ ಬೀರಿರುವ ಯುದ್ಧ

ವಾಣಿಜ್ಯ ಬಳಕೆ ಸಿಲಿಂಡರ್‌ಗಳು ಸಿಗದೆ ಉದ್ಯಮ ಬಂದ್ ಸಾಧ್ಯತೆ

ದುಬಾರಿ ಬೆಲೆಗೆ ಸಿಲಿಂಡರ್‌ಗಳ ಮಾರಾಟ, ಆದರೂ ಸಮರ್ಪಕ ಪೂರೈಕೆ ಇಲ್ಲ

ಚಾಮರಾಜನಗರ: ಮಧ್ಯಪ್ರಾಚ್ಯ ಯುದ್ಧ ಬಿಕ್ಕಟ್ಟಿನ ಪರಿಣಾಮದಿಂದಾಗಿ ದೇಶಾದ್ಯಂತ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಲಭ್ಯವಾಗದ ಪರಿಣಾಮ ಇದರ ಬಿಸಿ ಜಿಲ್ಲೆಯಲ್ಲೂ ತಟ್ಟಿದೆ. ಇದರಿಂದಾಗಿ ಜಿಲ್ಲೆಯಲ್ಲಿ ಹೋಟೆಲ್ ಉದ್ಯಮ ಬಂದ್ ಆಗುವ ಸಾಧ್ಯತೆಗಳಿವೆ.

ಜಿಲ್ಲೆಯ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ಹನೂರು ಹಾಗೂ ಗುಂಡ್ಲುಪೇಟೆ ತಾಲೂಕು ಕೇಂದ್ರಗಳು ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿರುವ ಚಿಕ್ಕ ಹೋಟೆಲ್, ಫಾಸ್ಟ್‌ಫುಡ್, ಟೀ ಕ್ಯಾಂಟೀನ್, ಪಾನಿಪುರಿ ಮಾರಾಟಗಾರರಿಗೆ ಸಿಲಿಂಡರ್ ಪೂರೈಕೆ ಆಗುತ್ತಿಲ್ಲ. ಇದರಿಂದ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ತಾತ್ಕಾಲಿಕವಾಗಿ ಉದ್ಯಮ ಸ್ಥಗಿತಗೊಳಿಸಲಾಗುತ್ತಿದೆ.

ವಾಣಿಜ್ಯ ಉದ್ದೇಶಕ್ಕೆ ಬಳಸುವ ಸಿಲಿಂಡರ್‌ಗಳನ್ನು ಕಂಪನಿಗಳು ಸಬ್ಸಿಡಿ ರಹಿತವಾಗಿ ಮಾರಾಟ ಮಾಡುತ್ತಿದ್ದು, 19 ಕೆ.ಜಿ. ತೂಕದ ಸಿಲಿಂಡರ್ ಒಂದರ ಬೆಲೆ 1,800 ರೂ.ಗಳು ನಿಗಧಿಗೊಳಿಸಿ ಮಾರಾಟ ಮಾಡಲಾಗುತ್ತಿದೆ. ಆದರೆ, ಸಮರ್ಪಕವಾಗಿ ಸಿಲಿಂಡರ್ ಪೂರೈಕೆ ಆಗದಿರುವ ಪರಿಣಾಮ ಉದ್ಯಮಿಗಳು ಬ್ಲಾಕ್‌ನಲ್ಲಿ ಸಿಲಿಂಡರ್ ಕೊಳ್ಳಲು ಮುಂದಾಗಿದ್ದು, ಸೋಮವಾರ 2 ಸಾವಿರವಿದ್ದ ಒಂದು ಸಿಲಿಂಡರ್ ಬೆಲೆ ಮಂಗಳವಾರ 2,580ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ. ಅವರು ಕೇಳಿದಷ್ಟು ಹಣ ನೀಡಿದರು ಕೂಡ ಸಿಲಿಂಡರ್ ಸಿಗುತ್ತಿಲ್ಲ ಎಂದು ಹೋಟೇಲ್‌ವೊಂದರ ಮಾಲೀಕರು ತಿಳಿಸಿದರು.



ಹೋಟೇಲ್ ಉದ್ಯಮದಾರರಿಗೆ ಸಂಕಷ್ಟ: ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ಸುತ್ತಮುತ್ತ ಹಾಗೂ ಜಿಲ್ಲೆಯಲ್ಲಿ ಸುಮಾರು ಸಾವಿರಾರು ಹೋಟೆಲ್‌ಗಳು, ಟೀ–ಕ್ಯಾಂಟೀನ್, ಬೇಕರಿ, ಫಾಸ್ಟ್‌ಫುಡ್ ಸೆಂಟರ್‌ಗಳಿದ್ದು, ನಿತ್ಯ ಲಕ್ಷಾಂತರ ಮಂದಿಗೆ ಆಹಾರ ಉಣಬಡಿಸುತ್ತಿವೆ. ಪುಟ್ಟ ಗೂಡಂಗಡಿಯಿಂದ ಹಿಡಿದು ಸ್ಟಾರ್ ಹೋಟೆಲ್‌ಗಳವರೆಗೆ ಎಲ್ಲವೂ ಅಡುಗೆಗಾಗಿ ವಾಣಿಜ್ಯ ಸಿಲಿಂಡರ್‌ಗಳನ್ನೇ ಬಳಕೆ ಮಾಡುತ್ತ ಬಂದಿವೆ. ಆದರೆ ಕಳೆದೊಂದು ವಾರದಿಂದಲೂ ಇವುಗಳ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ.

> ಕಳೆದೊಂದು ವಾರದಿಂದ ಸಿಲಿಂಡರ್ ಬುಕ್ಕಿಂಗ್ ಆಗುತ್ತಿಲ್ಲ. ಸದ್ಯಕ್ಕೆ ಎಡ್ಮೂರು ದಿನಗಳಿಗೆ ಆಗುವಷ್ಟು ದಾಸ್ತಾನು ಇದ್ದು, ಪರಿಸ್ಥಿತಿ ಹೀಗೆ ಮುಂದುವರಿದಲ್ಲಿ ಹೋಟೆಲ್ ಬಂದ್ ಮಾಡಬೇಕಾಗುತ್ತದೆ.
> – ಗೋಪಿನಾಥ್, ಗೋಪಿ ಟಿಫಾನೀಸ್ ಮಾಲೀಕರು.

ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ವಾಣಿಜ್ಯ ಸಿಲಿಂಡರ್ ಬುಕಿಂಗ್ ಆಗುತ್ತಿಲ್ಲ. ಇದರಿಂದ ಸಿಲಿಂಡರ್ ಪೂರೈಕೆ ಬಂದ್ ಆಗುವ ಆತಂಕವಿದೆ. ಸದ್ಯ ಬಹುತೇಕ ಹೋಟೆಲ್‌ಗಳಲ್ಲಿ ಕೆಲವೇ ದಿನಕ್ಕೆ ಆಗುವಷ್ಟು ದಾಸ್ತಾನು ಇದ್ದು, ಪರಿಸ್ಥಿತಿ ಹೀಗೆ ಮುಂದುವರಿದಲ್ಲಿ ಇನ್ನೊಂದು ವಾರದಲ್ಲಿ ಹೋಟೆಲ್‌ಗಳು ಮುಚ್ಚುವ ಸ್ಥಿತಿ ಬರಬಹುದು ಎಂದು ಉದ್ಯಮಿದಾರರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಗೃಹ ಬಳಕೆ ಸಿಲಿಂಡರ್‌ಗಳ ಕಥೆಯೇನು?: ಜಿಲ್ಲೆಯಲ್ಲಿ ಸದ್ಯ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಹೆಚ್ಚು ವ್ಯತ್ಯಾಸ ಆಗಿಲ್ಲ. ಆದರೆ ಜನ ಗಾಬರಿಯಿಂದ ಹೆಚ್ಚುವರಿ ಖರೀದಿಗೆ ಮುಂದಾಗಿದ್ದು, ಇದು ಪೂರೈಕೆದಾರ ಏಜೆನ್ಸಿಗಳ ಮೇಲಿನ ಒತ್ತಡ ಹೆಚ್ಚಿಸಿದೆ.

ಈ ಮೊದಲು ಕಾಯ್ದಿರಿಸಿದ 2–3 ದಿನಗಳಲ್ಲಿ ಸಿಲಿಂಡರ್ ಮನೆ ಬಾಗಿಲಿಗೆ ಪೂರೈಕೆ ಆಗುತ್ತಿತ್ತು. ಈಗ ಸಾಕಷ್ಟು ಏಜೆನ್ಸಿಗಳಲ್ಲಿ ವಾರದವರೆಗೂ ಕಾಯಿಸಲಾಗುತ್ತಿದೆ. ಸದ್ಯ ಪೂರೈಕೆ ನಿಧಾನವಾಗುತ್ತಿದೆ. ಆದರೆ ನಿಂತಿಲ್ಲ. ಗೃಹ ಬಳಕೆ ಗ್ರಾಹಕರಿಗೆ ಸದ್ಯಕ್ಕೆ ತೊಂದರೆ ಆಗದು ಎಂದು ಗ್ಯಾಸ್ ವಿತರಕ ಏಜೆನ್ಸಿಯೊಂದರ ಪ್ರತಿನಿಧಿಗಳು ಹೇಳುತ್ತಾರೆ.

ಬಿಸಿಯೂಟಕ್ಕೂ ಬಿಸಿ?: ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿನ ಅಕ್ಷರ ದಾಸೋಹ ಯೋಜನೆ, ವಿದ್ಯಾರ್ಥಿನಿಲಯಗಳಿಗೆ ಸಿಲಿಂಡರ್ ಪೂರೈಕೆಯ ಬಿಸಿ ತಟ್ಟುವ ಸಾಧ್ಯತೆ ಇದೆ. ಸದ್ಯ ಕೆಲವು ವಾರಗಳಿಗೆ ಆಗುವಷ್ಟು ದಾಸ್ತಾನು ಇದೆ. ಪರೀಕ್ಷೆಗಳು ನಡೆದಿದ್ದು, ಇನ್ನೇನು ಶೈಕ್ಷಣಿಕ ವರ್ಷ ಮುಗಿಯಲಿದೆ. ಹೀಗಾಗಿ ಹೆಚ್ಚು ತೊಂದರೆ ಆಗುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

ಸಿಲಿಂಡರ್ ಸಮಸ್ಯೆ ಸರಿಪಡಿಸುವಂತೆ ಹೋಟೇಲ್ ಮಾಲೀಕರಿಂದ ಡಿಸಿಗೆ ಮನವಿ ಸಲ್ಲಿಕೆ



ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ವತಿಯಿಂದ ಚಾಮರಾಜನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ: ಎಲ್‌ಪಿಜಿ ಗ್ಯಾಸ್ ಸರಬರಾಜಿನಲ್ಲಿ ಆಗುತ್ತಿರುವ ತೊಂದರೆ ಸರಿಪಡಿಸಿ ಹೋಟೆಲ್ ಉದ್ಯಮ ನಡೆಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ಇತ್ತೀಚಿನ ದಿನಗಳಲ್ಲಿ ವಾಣಿಜ್ಯ ಬಳಕೆಗಾಗಿ ನೀಡಲಾಗುವ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಸರಬರಾಜಿನಲ್ಲಿ ಉಂಟಾಗುತ್ತಿರುವ ವ್ಯತ್ಯಯದಿಂದ ಹೋಟೆಲ್ ಉದ್ಯಮಕ್ಕೆ ಹಾಗೂ ಪರೋಕ್ಷವಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ. ಈ ಸೇವೆಯೂ ಅಗತ್ಯ ವಸ್ತುಗಳ ಕಾಯ್ದೆಯಡಿ ಬರುವುದರಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ, ಸಮರ್ಪಕವಾಗಿ ಪೂರೈಕೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ ಪ್ರತಾಪ್ ಎಸ್. ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷ ಪಾಪಣ್ಣ ಸಿಓ, ಸಹಕಾರ್ಯದರ್ಶಿ ಜಿ.ಅಂಕಶೆಟ್ಟಿ, ವೆಂಕಟೇಶ್ ಮಾಯಾ, ವಿಜಯ್ ಕುಲಾಲ್, ರಕ್ಷಿತ್, ಶಂಕರ್ ಹಾಜರಿದ್ದರು.

ಗುಂಡ್ಲುಪೇಟೆಯಲ್ಲಿ ಹಾಡಹಗಲೇ ಯುವಕನ ಭೀಕರ ಹತ್ಯೆ

ಚಾಮರಾಜನಗರ, ಮಾ.11– ಗಡಿ ಜಿಲ್ಲೆ ಚಾಮರಾಜನಗರದ ಗುಂಡ್ಲುಪೇಟೆ ಪಟ್ಟಣದಲ್ಲಿ ಬೆಳ್ಳಂಬೆಳಿಗ್ಗೆ ಭೀಕರ ಹತ್ಯೆ ಯೊಂದು ಬೆಳಕಿಗೆ ಬಂದಿದೆ. ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಬ್ಬನನ್ನು ದುಷ್ಕರ್ಮಿಗಳು ಕುತ್ತಿಗೆ ಕೊಯ್ದು ಭೀಕರವಾಗಿ ಹತ್ಯೆ ಮಾಡಿದ್ದು, ಈ ಘಟನೆ ಇಡೀ ಪಟ್ಟಣವನ್ನು ಬೆಚ್ಚಿಬೀಳಿಸಿದೆ.

ಏನಿದು ಘಟನೆ: ಗುಂಡ್ಲುಪೇಟೆ ಪಟ್ಟಣದ ಅಮಾನಿಕೆರೆ (ದೊಡ್ಡಕೆರೆ) ಏರಿ ಮಾರ್ಗದಲ್ಲಿ ಇಂದು ಯುವಕನ ಶವವೊಂದು ರಕ್ತದ ಮಡುವಿನಲ್ಲಿ ಪತ್ತೆಯಾಗಿದೆ. ಹಂತಕರು ಯುವಕನ ಕುತ್ತಿಗೆಯನ್ನು ಹರಿತವಾದ ಆಯುಧದಿಂದ ಕುಯ್ದು ಪರಾರಿಯಾಗಿದ್ದಾರೆ. ಮೃತ ಯುವಕನನ್ನು ತಾಲೂಕಿನ ಮೂಕಹಳ್ಳಿ ಗ್ರಾಮದ ನಂಜುಂಡಸ್ವಾಮಿ (24) ಎಂದು ಗುರುತಿಸಲಾಗಿದೆ.

ಹತ್ಯೆಯಾದ ನಂಜುಂಡಸ್ವಾಮಿ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಊರಿಗೆ ಬಂದಿದ್ದ ಸಮಯದಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದ್ದು, ಸಾವಿನ ಸುತ್ತ ಹಲವು ಅನುಮಾನಗಳು ಹುತ್ತಗಟ್ಟಿವೆ. ಶವ ಬಿದ್ದಿದ್ದ ಸ್ಥಳದ ಸಮೀಪದಲ್ಲೇ ನಂಜುಂಡಸ್ವಾಮಿ ಅವರ ಬೈಕ್ ಕೂಡ ಪತ್ತೆಯಾಗಿದ್ದು, ಪೊಲೀಸರು ಅದನ್ನು ವಶಕ್ಕೆ ಪಡೆದಿದ್ದಾರೆ. ನಂಜುಂಡಸ್ವಾಮಿ ಅವರ ಶವ ಬಿದ್ದಿದ್ದ ರೀತಿ ಮತ್ತು ಕುತ್ತಿಗೆಗೆ ಆಗಿರುವ ಗಾಯಗಳನ್ನು ನೋಡಿದರೆ, ಇದು ಪೂರ್ವನಿಯೋಜಿತ ಕೃತ್ಯ ಎಂಬ ಶಂಕೆ ವ್ಯಕ್ತವಾಗಿದೆ. ಯಾರೋ ಆತ್ಮೀಯರೇ ಕರೆದೊಯ್ದು ಈ ಕೃತ್ಯ ಎಸಗಿದ್ದಾರೆಯೇ ಅಥವಾ ಬೇರೆನಾದರೂ ದ್ವೇಷವಿತ್ತೇ ಎಂಬ ನಿಟ್ಟಿನಲ್ಲಿ ತನಿಖೆ ನಡೆಯಬೇಕಿದೆ. ಜನನಿಬಿಡ ಪ್ರದೇಶವಾದ ಕೆರೆಯ ಏರಿ ಮಾರ್ಗದಲ್ಲೇ ಈ ಘಟನೆ ನಡೆದಿರುವುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ಘಟನಾ ಸ್ಥಳಕ್ಕೆ ಗುಂಡ್ಲುಪೇಟೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಸ್ಥಳದಲ್ಲಿದ್ದ ಕುರುಹುಗಳನ್ನು ಸಂಗ್ರಹಿಸಲಾಗಿದೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹಂತಕರ ಪತ್ತೆಗಾಗಿ ಪೊಲೀಸರು ಜಾಲ ಬೀಸಿದ್ದಾರೆ. ಯುವಕನ ಅಕಾಲಿಕ ಮರಣದಿಂದ ಮೂಕಹಳ್ಳಿ ಗ್ರಾಮದಲ್ಲಿ ಶೋಕದ ಛಾಯೆ ಆವರಿಸಿದೆ ಹಂತಕರನ್ನು ಶೀಘ್ರವಾಗಿ ಬಂಧಿಸಿ ಕಠಿಣ ಶಿಕ್ಷೆ ನೀಡಬೇಕೆಂದು ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಚೆಸ್ಕಾಂ ಕಚೇರಿಯಲ್ಲಿ ಲೈನ್‌ಮ್ಯಾನ್ ದಿವಸ

ಚಾಮರಾಜನಗರ: ಲೈನ್‌ಮ್ಯಾನ್ ದಿವಸದ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ನಗರದ ಕೆಇಬಿ ಕಚೇರಿಯ ಆವರಣದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ನಿಯಮಿತ ಚಾಮರಾಜನಗರ ವಿಭಾಗ, ರೋಟರಿ ಸಂಸ್ಥೆ, ಜೆಎಸ್‌ಎಸ್ ಆಸ್ಪತ್ರೆ, ಅರವಿಂದ ಹಾಸ್ಪಿಟಲ್, ಚೈತನ್ಯ ನೆಟ್ ವರ್ಕ್ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ಶಿಬಿರದಲ್ಲಿ 200 ಮಂದಿ ತಪಾಸಣೆ ಮಾಡಿಸಿಕೊಂಡರು.

ಶಿಬಿರದಲ್ಲಿ ಅನಿಮೀಯ ತಡೆ ತಪಾಸಣೆ ನಡೆಯಿತು. ಅಗತ್ಯವಿರುವವರಿಗೆ ಉಚಿತ ಔಷಧ ವಿತರಿಸಲಾಯಿತು. 170 ಮಂದಿ ಇಸಿಜಿ ಮಾಡಿಕೊಂಡರು. ತೊಂದರೆ ಕಂಡು ಬಂದಂತಹ ಹೃದಯ ಸಮಸ್ಯೆ ರೋಗಿಗಳನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು.

ಕಾರ್ಯಕ್ರಮದಲ್ಲಿ ಚೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರದೀಪ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ಪ್ರಶಾಂತ್, ಧ್ರುಪದ್, ಮಹೇಶ್, ಸಂಧ್ಯಾ, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಸಹಾಯಕ ಎಂಜಿನಿಯರ್ ಪ್ರವೀಣ್ ಭಾಗವಹಿಸಿದ್ದರು.

ಸ್ವಚ್ಛತೆ ಇಲ್ಲ, ನೀರಿಲ್ಲ, ಇ–ಸ್ವತ್ತುಗಳು ಆಗುತ್ತಿಲ್ಲ

ಚಾ.ನಗರ ನಗರಸಭೆ ವಿರುದ್ಧ ಜಿಲ್ಲಾಧಿಕಾರಿಗೆ ಬಿಜೆಪಿ ಯುವ ಮೋರ್ಚಾ ದೂರು

ಚಾಮರಾಜನಗರ, ಮಾ.11– ನಗರಸಭೆಯ ಅವ್ಯವಸ್ಥೆಯನ್ನು ಸರಿಪಡಿಸಿ, ಸಾರ್ವಜನಿಕರ ಕಾರ್ಯಗಳು ನಡೆಯುವಂತೆ ಮಾಡಬೇಕು. ನಗರದ ಸ್ವಚ್ಛತೆ ಹಾಗೂ ಕುಡಿಯುವ ನೀರು ಸಮರ್ಪಕವಾಗಿ ಎಲ್ಲಾ ಬಡಾವಣೆಗಳಿಗೆ ಸರಬರಾಜು ಮಾಡಬೇಕೆಂದು ಒತ್ತಾಯಿಸಿ ಬಿಜೆಪಿ ಜಿಲ್ಲಾ ಯುವ ಮೋರ್ಚಾದಿಂದ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸೂರ್ಯ ಬಾಲರಾಜ್ ನೇತೃತ್ವದ ತಂಡ ಭೇಟಿ ನೀಡಿ, ನಗರಸಭೆ ಆಡಳಿತ ಯಂತ್ರ ಕುಸಿದಿರುವ ಬಗ್ಗೆ ಹಾಗೂ ನಗರಸಭಾ ಆಡಳಿತಾಧಿಕಾರಿಗಳಾಗಿರುವ ನಿಮ್ಮ ಭೇಟಿಗೂ ಸಹ ನಾಗರೀಕರು ಪರಿತಪಿಸುವಂತಾಗಿದೆ. ನಿಮ್ಮ ಕಚೇರಿಯ ಅಪ್ತ ಸಹಾಯಕ ಸಹ ಸರಿಯಾದ ಮಾಹಿತಿ ನೀಡುತ್ತಿಲ್ಲ. ಜಿಲ್ಲಾಧಿಕಾರಿಗಳಾದ ನಿಮ್ಮನ್ನು ಭೇಟಿ ಮಾಡಿ ಸರಿಯಾದ ಸಮಯ ನೀಡುತ್ತಿಲ್ಲ. ನಿಮ್ಮ ಕಚೇರಿಯಲ್ಲಿರುವ ಆಪ್ತ ಜೊತೆಗೆ ನಗರಸಭೆಯಲ್ಲಿ ದಿನನಿತ್ಯ ನರಕ ದರ್ಶನವಾಗಿದ್ದು, ಅಲ್ಲಿನ ಸಿಬ್ಬಂದಿಗಳು ಯಾವುದೇ ಕೆಲಸ ಕಾರ್ಯಗಳನ್ನು ನಿಗಧಿತ ಸಮಯದಲ್ಲಿ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಬೇಕೆಂದು ಒತ್ತಾಯಿಸಿದರು.



ಬಿಜೆಪಿ ಜಿಲ್ಲಾ ಯುವ ಮೋರ್ಚಾದಿಂದ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರಸಭೆ ವ್ಯಾಪ್ತಿಗೆ ಒಳಪಡುವ ಸ್ವತ್ತುಗಳಿಗೆ ಖಾತೆ ಬದಲಾವಣೆ ಮಾಡಲು ವಿಳಂಬ ಮಾಡಲಾಗುತ್ತಿದೆ. ಅಲ್ಲದೇ ಉದ್ದೇಶಪೂರ್ವಕವಾಗಿ ಸ್ವತ್ತುವಿನ ಚೆಕ್ ಬಂಧಿಯನ್ನು ಅದರಲ್ಲೂ ವಿಶೇಷವಾಗಿ ರಸ್ತೆ ಇರುವ ಕಡೆ ತಪ್ಪಾಗಿ ನಮೂದಿಸಿ ಖಾತೆ ಬದಲಾವಣೆ ಮಾಡಿ ಗಣಕೀಕೃತ ನಮೂನೆ–3ನ್ನು ಸಾರ್ವಜನಿಕರಿಗೆ ವಿತರಿಸಲಾಗಿದೆ. ಮತ್ತೆ ತಿದ್ದುಪಡಿಗಾಗಿ ನಗರಸಭೆಗೆ ಬಂದಂತಹ ಸಂದರ್ಭದಲ್ಲಿ ಹಣಕ್ಕಾಗಿ ಒತ್ತಾಯ ಮಾಡಲಾಗುತ್ತಿದೆ. ತಿದ್ದುಪಡಿಗೂ ಸಹ ಹಣ ಕೊಡದೇ ಯಾವುದೇ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಈ ಬಗ್ಗೆ ಅನೇಕ ಬಾರಿ ದೂರು ನೀಡಿದ್ದೇವೆ ಎಂದರು.

ನಗರದ ಕೋರ್ಟ್ ರಸ್ತೆ, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ಅಧಿಕಾರಿಗಳು ಹಾಗೂ ಶಾಸಕರ ನಿವಾಸದ ಮುಂದೆ ಬಿಟ್ಟರೆ ಉಳಿದ ಯಾವುದೇ ಬಡಾವಣೆಗಳು ಸ್ವಚ್ಛವಾಗುತ್ತಿಲ್ಲ. ಹಿಂದುಳಿದ ಉಪ್ಪಾರ ಬಡಾವಣೆಗಳು ಗಬ್ಬೆದ್ದು ನಾರುತ್ತಿದ್ದು, ಇತ್ತ ಕಡೆ ನೋಡುವವರೇ ಇಲ್ಲವಾಗಿದ್ದಾರೆ ಎಂದು ಆರೋಪಿಸಿದರು.

ಅಹೋರಾತ್ರಿ ಧರಣಿ ಎಚ್ಚರಿಕೆ: ನಗರಸಭೆ ಆಡಳಿತವನ್ನು ಸರಿಪಡಿಸಿ, ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಸಮರ್ಪಕವಾಗಬೇಕು. ಇ–ಸ್ವತ್ತುಗಳು ನಿಗಧಿತ ಅವಧಿಯಲ್ಲಿ ನೀಡುವಂತಾಗಬೇಕು ಇಲ್ಲದಿದ್ದರೆ ಬಿಜೆಪಿ ಯುವ ಮೋರ್ಚಾದಿಂದ ಜಿಲ್ಲಾಡಳಿತ ಭವನದ ಮುಂದೆ ಅಹೋರಾತ್ರಿ ಧರಣಿ ನಡೆಸಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ಸೋಮವಾರಪೇಟೆ ಗುರು, ಮಹೇಶ್, ನಗರ ಘಟಕದ ಮಾಜಿ ಅಧ್ಯಕ್ಷ ಹೌಸಿಂಗ್‌ಬೋರ್ಡ್ ರಾಜು, ನಗರ ಮಂಡಲದ ಯುವ ಮೋರ್ಚಾ ಅಧ್ಯಕ್ಷ ಪ್ರವೀಣ್‌ನಾಯಕ್ ಇತರರು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ

ಕಛೇರಿ ಸಹಾಯಕರಾಗಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ SSLC ಮತ್ತು ಮೇಲ್ಪಟ್ಟು ವಿದ್ಯಾರಣ್ಯಪುರಂ ರವರಿಗೆ ಆದ್ಯತೆ

9986540546
9535548111

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಕುವೆಂಪುನಗರದ ರೂಮ್‌ನಲ್ಲಿ ಕೆಲಸ ಮಾಡಲು ಅನುಭವ ಹೊಂದಿರುವ ರೂಮ್ ಬಾಯ್ ಬೇಕಾಗಿದ್ದಾರೆ.

7483534355

HIRING

SALES & MARKETING EXECUTIVE

Real Estate Office

* Earn salary + attractive incentives.
* Future growth opportunity.

For more details contact:

Mob: 9620461052

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ

ಸಿದ್ಧಾರ್ಥ ಲೇಔಟ್, ಆಲನಹಳ್ಳಿ, ಜೆ.ಪಿ.ನಗರ ಹಾಗೂ ಸುತ್ತಮುತ್ತ ಇರುವವರಿಗೆ ಆದ್ಯತೆ ಇರುತ್ತದೆ. ಪಿಎಫ್, ಇಎಸ್‌ಐ ಹಾಗೂ ವಸತಿ ಸೌಲಭ್ಯವಿರುತ್ತದೆ.

9901607889
9880794605

ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ

ಮಂಡ್ಯದಲ್ಲಿರುವ ವೃದ್ಧಾಶ್ರಮಕ್ಕೆ ನರ್ಸಿಂಗ್ ಕೆಲಸಕ್ಕೆ ಪುರುಷ ಅಥವಾ ಸ್ತ್ರೀ ಬೇಕಾಗಿದ್ದಾರೆ. 24 ಗಂಟೆ ಅಲ್ಲೇ ಇರಬೇಕು. ಸಂಬಳ; 18000, ಸಂಪರ್ಕಿಸಿ:

9380541232
9611599455

TV ಕೆಟ್ಟಿದೆಯೇ ?

LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.

Teju Electronics, ಅಗ್ರಹಾರ

Mob: 9342114069

HOUSE FOR SALE

30x40 West facing, North door, 8 years old house for sale at old R.T. Nagar (MUDA title deed), Dattagalli.

Contact: MYSORE ESTATES Vishwanath Gowda

Mob: 95909 11111

ಸುವರ್ಣ ಯಾತ್ರಾ

7 ದಿನಗಳ ಭೂತಾನ್ ಪ್ರವಾಸ 25/3/26
6 ದಿನಗಳ ವೇಟ್ನಾಮ್ ಪ್ರವಾಸ 11/4/26
11 ದಿನಗಳ ಥೈಲ್ಯಾಂಡ್, ಸಿಂಗಾಪೂರ್ ಮತ್ತು ಮಲೇಷಿಯಾ ಪ್ರವಾಸ 22/04/26

6360146483
9008381022

ಶ್ರೀ ಓಂಕಾರೇಶ್ವರ ಟೂರಿಸ್ಟ್

6 ದಿನ ಕೇರಳ ಪ್ರವಾಸ 25–3–2026

ಗುರುವಾಯೂರು, ತ್ರಿಶೂರು, ಆಲಪ್ಪಿ, ಮುನ್ನಾರ್, ವೈನಾಡ್, ಚೋಟಾಣಿಕೆರೆ, ಅನಂತಪದ್ಮನಾಭ ಕೋವಲಂ ಬೀಚ್, ಇತ್ಯಾದಿ,

7 ದಿನಗಳ ತಮಿಳುನಾಡು 15–4–2026, ಮಧುರೈ, ಕನ್ಯಾಕುಮಾರಿ, ರಾಮೇಶ್ವರ, ಶ್ರೀರಂಗ 9 ನವಗ್ರಹ, ತಿರುವಣಮಲೈ ಇತ್ಯಾದಿ

8618884805


DROP TAXI ONE WAY

Mysore to Bangalore
Bangalore to Mysore

Sedan 145 km (Limit) Rs. 2,099 + Toll
SUV 145 km (Limit) Rs. 2,999 + Toll

All State One way Drop & Round Trips Available at Low Cost

Mob: 70906-10995



Solar Water Heater SALES & SERVICE

BAJAJ FINSERV

SUNZONE SOLAR SYSTEM

VM Double Road, Kuvempunagar, Mysuru

9845175443

WANTED

ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ

ದ್ವಿಚಕ್ರ ವಾಹನ ಹೊಂದಿರುವವರಿಗೆ ಆದ್ಯತೆ

99011 63200
97435 65907

ವೃದ್ಧಾಶ್ರಮ

ಹಿರಿಯ ನಾಗರಿಕರು, ಹಾಸಿಗೆ ಹಿಡಿದವರು, ಅಂಗವಿಕಲರು ಮತ್ತು ಪಾರ್ಶ್ವವಾಯು ಪೀಡಿತ ರೋಗಿಗಳಿಗೆ. ವೈದ್ಯಕೀಯ ಸೌಲಭ್ಯಗಳೊಂದಿಗೆ ಸಹಾನುಭೂತಿಯ ಆರೈಕೆ, ಪೌಷ್ಠಿಕ ಆಹಾರ ಮತ್ತು ಮನೆಯ ವಾತಾವರಣವನ್ನು ನೀಡುತ್ತೇವೆ.

CALL : 9110455297/9591557126

Vacancy at reputed Hotel in Mysore

1) Counter Staff
2) Cashier / Receptionist
3) Cleaning Staff
4) Assistant Cook.

Mob: 8217737552

GURUKRUPA

The ultimate grace to excellence

SUMMER CAMP

ACTIVITIES WE PROVIDE

• Cursive Writing • Print Writing • Breathing Teachique • Ludia •Brain Excersises • Speed Writing,

April 1st-5th May, 10.30am-12.30pm morning, Join Now Fee : 3600/-

Location : 2784, 9th cross, Kalidasa Rd, beside ICICI bank, next to unbound escape room, Vani Vilas Mohalla, Mysuru, Karnataka 570002

7406553111

ವೇಯ್ಟರ್‌ಗಳು ಬೇಕಾಗಿದ್ದಾರೆ

ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ವೇಯ್ಟರ್‌ಗಳು ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯವಿದೆ. ಸ್ಥಳ : ಮೈಸೂರು, ದಟ್ಟಗಳ್ಳಿ, ಸಂಪರ್ಕಿಸಿ

9071268732

ಸಂಪು

ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob : 9535175624

ಬೇಕಾಗಿದ್ದಾರೆ

ಫುಟ್‌ವೇರ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಸೇಲ್ಸ್‌ಮೆನ್ಸ್ ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ.

Time : 11 AM - 9 PM

8762333676

ಸೈಟ್ ಮಾರಾಟಕ್ಕಿದೆ

30x50(ರೆವಿನ್ಯೂ) ವಿಜಯನಗರ 2ನೇ ಹಂತ (ವಿದ್ಯಾವರ್ಧಕ ಇಂಜಿನಿಯರ್ ಕಾಲೇಜು ಹಿಂಭಾಗ)

9886651605

ಸಂಪು ಮತ್ತು ಟ್ಯಾಂಕ್

ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 8861401315

ಹೆಲ್ತ್‌ಕೇರ್ ತರಬೇತಿ

SSLC/PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್‌ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು

9916908454

ಬೇಕಾಗಿದ್ದಾರೆ

* ಮಾರ್ಕೆಟಿಂಗ್ ಸೇಲ್ಸ್ ಎಕ್ಸಿಕ್ಯೂಟಿವ್ ಕೂಡಲೇ ಸಂಪರ್ಕಿಸಿ –

9743647484

* ಅಕೌಂಟ್ ಅಸಿಸ್ಟೆಂಟ್ (within 3 years experience) * ಡೇಟಾ ಎಂಟ್ರಿ ಆಪರೇಟರ್ (within 1 year experience) ಕೂಡಲೇ ಸಂಪರ್ಕಿಸಿ –

7892930047

ಬೇಕಾಗಿದ್ದಾರೆ

1) ಪ್ಯಾಕಿಂಗ್ ಮತ್ತು ಕ್ಲೀನಿಂಗ್ – ಮಹಿಳೆಯರು, 2) ಚಾಲಕರು – ಸರಕು ಸಾಗಣೆ ವಾಹನ, 3) ಚಾಲಕ ಸಹಿತ ವಾಹನ – ಸರಕು ಸಾಗಣೆ ವಾಹನ ಆಶೀರ್ವಾದ ದಿನಸಿ – ಯಾದವಗಿರಿ, ಮೈಸೂರು, ಸಂಪರ್ಕ ಸಂಖ್ಯೆ :

9845700612
7829668666

ಸಂಪು ಮತ್ತು ಟ್ಯಾಂಕ್

ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob : 9535361279

CHANGE OF NAME

I Martin Gerald Rodrigues, S/o Rodrigues J, aged 87 years, residing at 3914/2A. St Anne's Street, Gandhinagar, Mysuru-500007, swear that, my name is Martin Gerald Rodrigues, But in some of the documents my name is mentioned as M.G. Rodrigues, Gerald Rodrigues & Martin Gerald Rodrigues. Hence I affirm on oath that all the above 3 names belongs to me only, and are one and the same person, vide affidavit sworn before Venkatesh Patwardhan, Notary, Mysore on 10-03-2026.

Sd/- Martin Gerald Rodrigues

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.

ತರಬೇತಿಗಾಗಿ:

7406375196, 9880548596

DTCP SITES FOR SALE

THALUR CIRCLE, OFF SRIRAMPURA RING ROAD, HD KOTE RDAD, MYSURU.

₹1800/- per Sft.

9606966006

ಛತ್ರ ಖಾಲಿ ಇದೆ

ದಿನಾಂಕ : 10–05–2026 ಹಾಗೂ 11–05–2026

ಶಿವಣ್ಣ ಬಸಂತ್ ಕನ್ವೆನ್ಷನ್ ಸೆಂಟರ್ J.P. ನಗರ, ಮೈಸೂರು.

7483577721
9481160172

ಕೆಲಸಕ್ಕೆ ಬೇಕಾಗಿದ್ದಾರೆ

ಫರ್ನಿಚರ್ ಅಂಗಡಿಯಲ್ಲಿ ಡೆಲಿವರಿ ಕೆಲಸ ಮಾಡಲು ಡ್ರೈವರ್ಸ್ ಬೇಕಾಗಿದ್ದಾರೆ. ಮೈಸೂರಿನವರಿಗೆ ಆದ್ಯತೆ.

9902435523

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:

ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್

ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು–10

ಖರೀದಿಗೆ ಜಮೀನು ಬೇಕಾಗಿದೆ

ಮೈಸೂರಿನಿಂದ 15 ಕಿ.ಮೀ ಅಂತರದಲ್ಲಿ 1–3 ಎಕರೆ ಜಮೀನು ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ. ಸಂಪರ್ಕಿಸಿ:

Mob: 6364795551

ತಕ್ಷಣ ಬೇಕಾಗಿದ್ದಾರೆ

ಕುವೆಂಪುನಗರ, ಸರಸ್ವತಿಪುರಂ ಅಪೋಲೋ ಆಸ್ಪತ್ರೆ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ : 21,000/- ESI & PF ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.

9620777819
9620667819

ಜಮೀನು ಬೇಕಾಗಿದೆ

ಮೆಲ್ಲಹಳ್ಳಿ(ಬನ್ನೂರು ರೋಡ್)ನಲ್ಲಿ ಸುಮಾರು 10 ಗುಂಟೆಗಿಂತ ಕಡಿಮೆ ಬೇಕಾಗಿದೆ. ಬಜೆಟ್ ಅಂದಾಜು 28 ಲಕ್ಷ ಡೈರೆಕ್ಟ್ ರಿಜಿಸ್ಟ್ರೇಷನ್– ಓನರ್ ಫೋನ್ ಮಾಡಿ

9886647199

ಬೇಕಾಗಿದ್ದಾರೆ

ಹೆಬ್ಬಾಳು ಮೇಟಗಳ್ಳಿ ಹೂಟಗಳ್ಳಿ ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಹುಡುಗ ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾ ಅರ್ಹತೆ, Diploma mech. ITI, 8th To 2nd PUC ವರೆಗೆ. ಊಟ, ವಸತಿ, ವಾಹನ ಸೌಲಭ್ಯ ESI, PF ಸೌಲಭ್ಯ ಸಂಬಳ 13,500 ರಿಂದ 20,000 ಇರುತ್ತದೆ ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ

8951869646 / 9902645646

SITE FOR SALE

Muda approved Corporation Limit, Bogadi main road, Jatti undi, 30/40-,20/40 80% bank loan, Duplex House for sale 20/30 Dattagalli near Triveni supermarket

9738884777

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡುಗಳು

1) ಕೆಆರ್‌ಎಸ್ ರಸ್ತೆ(ರಾತ್ರಿ ಪಾಳಿ) 2) ವಿಜಯನಗರ 4ನೇ ಹಂತ 3) ಶಿವರಾಂ ಪೇಟೆ 4) ಗುಂಡ್ಲುಪೇಟೆ ಫೀಲ್ಡ್ ಸೂಪರ್‌ವೈಸರ್

9686566261
7259526261

Go Mysore Holidays

ತಿರುಪತಿ–ತಿರುಮಲ–ಕಾಳಹಸ್ತಿ ಪ್ಯಾಕೇಜ್

27th March 2026/1st April 2026 ಮತ್ತು 10th April 2026

ಹೊರಡುವುದು ಎರಡು ದಿನದ ಪ್ರವಾಸ, ಕೆ.ಡಿ. ಸರ್ಕಲ್, ವಿಜಯನಗರ, 2ನೇ ಹಂತ, ಮೈಸೂರು

9033154301
9448738617

ತಕ್ಷಣ ಬೇಕಾಗಿದ್ದಾರೆ

TVS ಫ್ಯಾಕ್ಟರಿ ಮತ್ತು ನಂಜನಗೂಡಿನ ಕಲ್ಲಹಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಸಂಬಳ : 18,000/-(26 days) ESI & PF ವಾರ್ಷಿಕ ಬೋನಸ್ ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.

9620667819
9620777819

ಹೆಸರು ಬದಲಾವಣೆ

ನಾನು, ಗ್ಲೆನ್ ಟೇಲರ್, ಲೇಟ್ ಟಿ.ಎ ಟೇಲರ್ ಅವರ ಮಗ, ನಂ. 1022, 14ನೇ ಕ್ರಾಸ್, 2ನೇ ಸ್ಟೇಜ್, ರಾಜೀವ್ ನಗರ, ಮೈಸೂರು – 570019 ಇಲ್ಲಿ ವಾಸವಾಗಿದ್ದು, ನನ್ನ ಹೆಸರನ್ನು ಗ್ಲೆನ್ ಕ್ರಿಸ್ಟೋಫರ್ ಟೇಲರ್ ನಿಂದ ಗ್ಲೆನ್ ಟೇಲರ್ ಎಂದು ಬದಲಾಯಿಸಿಕೊಂಡಿದ್ದೇನೆ. ಗ್ಲೆನ್ ಟೇಲರ್ ಮತ್ತು ಗ್ಲೆನ್ ಕ್ರಿಸ್ಟೋಫರ್ ಟೇಲರ್ ಎಂಬ ಎರಡೂ ಹೆಸರುಗಳು ಒಬ್ಬ ವ್ಯಕ್ತಿಗೆ ಅಂದರೆ ನನ್ನ ಹೆಸರಿಗೆ ಮಾತ್ರ ಸೇರಿವೆ. ಮೈಸೂರಿನ ನೋಟರಿ ಎಲ್.ಎನ್. ರಾಜೇಂದ್ರನ್ ಅವರ ಮುಂದೆ ದಿನಾಂಕ 14–02–2026 ರಂದು ಅಫಿಡವಿಟ್ ಮೂಲಕ ಪ್ರಮಾಣವಚನ ಸ್ವೀಕರಿಸಿರುತ್ತೇನೆ.

ಸಹಿ/– ಗ್ಲೆನ್ ಟೇಲರ್

ಕೆಲಸಕ್ಕೆ ಬೇಕಾಗಿದ್ದಾರೆ

ಸೀರೆ ಅಂಗಡಿಗೆ ಒಲಂಪಿಯ ಟಾಕೀಸ್ ಹತ್ತಿರ, ಮೈಸೂರು

9449794863

ತಕ್ಷಣ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ (SSLC Pass) 18,000 Rs ಮತ್ತು ಕಾರ್ಖಾನೆ ಸಹಾಯಕರು(Helpers) 14,000 Rs ESI ಮತ್ತು PF ಸೌಲಭ್ಯ, ಮೇಟಗಳ್ಳಿ ಮತ್ತು ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಸಂಪರ್ಕಿಸಿ

9035367085
6361548626

CHANGE OF NAME

I P.N. Ramesh Alias Purigali Nagesharao Ramesh R/a No. 05, 2nd Main Road, Vidyaranyapuram, Mysore-570008, have changed my name from P.N. Ramesha Alias Purigali Nagesharao Ramesha to P.N. Ramesh Alias Purigali Nagesharao Ramesh on my own free will in front of Notary M.V. Kamala vide Affidavit dated 07-03-2026 at Mysuru

Sd/- P.N. Ramesh Alias Purigali Nagesharao Ramesh

WANTED

Teaching staff for reputed institution (Experience Preferred) for all subjects.Transport facilities available. Drop your resume through WhatsApp Contact no:

8971577685
9980631121

ಸದ್ಗುರು ರಿಯಲ್ ಎಸ್ಟೇಟ್

ಸೈಟು, ಮನೆ, ಜಮೀನು, ಪ್ಲಾಟ್ ಮಾರುವವರು ಕೊಳ್ಳುವವರು ನೇರ ಸಂಪರ್ಕಿಸಿ

6361740552
9449408551

ದಾಖಲೆಗಳು ಕಳೆದಿದೆ

ಶ್ರೀಮತಿ ಲೀನಾ ಫಿಲೋಮಿನ ಎಸ್, #78, "ಪ್ರಾವಿಡೆನ್" 3ನೇ ಮೇನ್, ಬನ್ನಿಮಂಟಪ "ಎ" ಲೇಔಟ್, ಮೈಸೂರು ಇವರಿಗೆ ಸೇರಿದ ಮೈಸೂರು ನಗರದ ಹಂಚ್ಯಾ–ಸಾತಗಳ್ಳಿ "ಎ" ವಲಯ ಬಡಾವಣೆಯ ನಿವೇಶನ 680ಕ್ಕೆ ಸಂಬಂಧಿಸಿದ ದಾಖಲೆಗಳು ಕಳೆದು ಹೋಗಿರುತ್ತದೆ. ಆದ್ದರಿಂದ ಯಾರಿಗಾದರೂ ಸಿಕ್ಕಿದಲ್ಲಿ ದಯವಿಟ್ಟು ಹಿಂದಿರುಗಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

9886465657

ಪುರುಷರು ಬೇಕಾಗಿದ್ದಾರೆ

ಹೆಲ್ಪರ್ ಕೆಲಸಕ್ಕೆ ವಿದ್ಯಾರ್ಹತೆ ಬೇಕಿಲ್ಲ. ಸಂಬಳ 17,500 + ESI, PF ವಯಸ್ಸು 18 ರಿಂದ 45ರ ಒಳಗಿರಬೇಕು. 8hrs Duty, 3 Shifts, ಯಾವುದೇ Fee ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡತಕ್ಕದ್ದು. ಸ್ಥಳ : CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು

9986874574

ಸಂಪು

ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್

Mob: 9964733988

ಮೈಸೂರಿನಾದ್ಯಂತ ಕಂಪನಿಗಳಿಗೆ

ಮನೆಯಿಂದಲೇ ಕೆಲಸ ಡೇಟಾ ಎಂಟ್ರಿ, ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ 20,000 ದಿಂದ ಕೊರಿಯರ್ ಲಭ್ಯವಿದೆ.

9742133993,
9964322833

ವಧು ಬೇಕಾಗಿದೆ

ಬ್ರಾಹ್ಮಣ ಯುವಕ 37 ವರ್ಷದ ಯುವಕನಿಗೆ, ಒಳ್ಳೇ ಹುಡುಗ, ಯಾವುದೇ ದುರಭ್ಯಾಸಗಳಿಲ್ಲ. ಹುಡುಗಿ ಯಾವುದಾದರೂ ನೌಕರಿ ಮಾಡುತ್ತಿರಬೇಕು. ಒಂದು ವೇಳೆ ನೌಕರಿ ಇಲ್ಲದಿದ್ದರೂ ಪರವಾಗಿಲ್ಲ.

Mob: 9481530632

House for Rent

(3 BHK with garage, first floor), near Viveka-nandanagar (Circle). Vegetarian only. (Preference Brahmins & office staff).

9880582264, 9620209918

ಬಾಡಿಗೆಗೆ ಇದೆ

ಬ್ಯಾಂಕಿಗೆ, ಟ್ಯೂಷನ್ ಹಾಲ್‌ಗೆ, ಗೋಡೌನ್‌ಗೆ, ಎಲ್ಲಾ ತರಹದ ವ್ಯಾಪಾರಕ್ಕೆ ಸೂಕ್ತವಾಗಿದೆ. 30x50 s.ft, 1ನೇ ಮಹಡಿ, #158, ಸರ್ದಾರ್ ವಲ್ಲಭಭಾಯಿ ಪಟೇಲ್‌ನಗರ, ಪೊಲೀಸ್ ಲೇಔಟ್, 2ನೇ ಸ್ಟೇಜ್, ನಾಡನಹಳ್ಳಿ, ಮೈಸೂರು–ಟಿ.ನರಸೀಪುರ ಮೇನ್ ರೋಡ್‌ನಿಂದ 150 ಮೀ. ಸಂಪರ್ಕಿಸಿ:

9900159094, 9986512709

ಬೇಕಾಗಿದ್ದಾರೆ

ಫ್ಲೆಕ್ಸ್ ಪ್ರಿಂಟಿಂಗ್ ಮೆಷಿನ್ ಆಪ್‌ರೇಟರ್ ಮತ್ತು ಹೆಲ್ಪರ್ ಹುಡುಗರು ಬೇಕಾಗಿದ್ದಾರೆ

ಆಕರ್ಷಕ ಸಂಬಳ

ಅಶೋಕ ರೋಡ್, ಮೈಸೂರು

Call: 95382 22384
0821-4267800

ಅಂಜನ ಶಾಸ್ತ್ರದ ಮೂಲಕ ಪರಿಹಾರ

ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ

ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.

Mob: 9663466548

FOR SALE

20x40, 30x50 Sites@ Gurukula Lyt, JP Ngr

30x45 Corner Site@ Dattagalli

20X30, 40X60 NEW HOUSE NEAR HARIVIDYALAYA, BOGADI

30x40 New House @ JP Ngr Siddlingeshwara Lyt,

G+3 House @ Aravind Nagar

20x30 Duplex House @ Vijaya Ngr

PRAKRUTHI PROPERTIES

95386 90359, 90359 90359

FOR SALE

2 & 3 BHK New Apartments @ Ramakrishna Nagar.

20x30, 30x40 2,3 & 4 BHK New Construction as Per Your Plan Near Rainbow School, Bogadi

30x50 Sites Near RT Nagar Brahmins Lyt, 50ft & 60ft Road

PRAKRUTHI PROPERTIES

95386 90359, 90359 90359

ಅಡುಗೆಯವರು ಬೇಕಾಗಿದ್ದಾರೆ

ಕಾಲೇಜ್ ಹಾಸ್ಟೆಲ್‌ನಲ್ಲಿ ಕೇರಳ ಶೈಲಿಯಲ್ಲಿ ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ.

Wanted Kerala cooking chef for college hostel.

9342110613
8310846772

Site for Sale (Owner)

30x40 West face 35 Lakhs.
20x30 South Face 22 Lakhs.

KHB KENCHALGUD (Final Price)

9964311373, 6364671651

ಸೈಟು ಮಾರಾಟಕ್ಕಿದೆ

20x30, ಉತ್ತರ ದಿಕ್ಕು, ಆನಂದನಗರ.
20x30, ದಕ್ಷಿಣ ದಿಕ್ಕು, ಆನಂದ ನಗರ.
20x30, ದಕ್ಷಿಣ ದಿಕ್ಕು, BEML ಲೇಔಟ್, ಆಶ್ರಯ ಮನೆ, ಬೋಗಾದಿ.
20x30, ಪೂರ್ವ ದಿಕ್ಕು, BEML ಲೇಔಟ್, ಆಶ್ರಯ ಮನೆ, ಬೋಗಾದಿ.

Mob: 8050216683

ತಕ್ಷಣ ಬೇಕಾಗಿದ್ದಾರೆ

ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್, ಹಳೇ ಆರ್‌ಎಂಸಿ ಸರ್ಕಲ್, ಮೈಸೂರು. ಕ್ಯಾಷಿಯರ್ ಕೆಲಸಕ್ಕಾಗಿ. ವಯೋಮಿತಿ: 20 ರಿಂದ 40, ಪುರುಷ ಮತ್ತು ಮಹಿಳೆ.

9164777336
9902179776

ಮೈಸೂರು ಟೌನ್ ಅವರಿಗೆ ಮೊದಲ ಆದ್ಯತೆ

ಬೇಕಾಗಿದ್ದಾರೆ

ಹಿರಿಯ ದಂಪತಿಗಳ ಮನೆಗೆ ಮಧ್ಯ ವಯಸ್ಸಿನ ಬ್ರಾಹ್ಮಣ ಮಹಿಳೆ ಅಡುಗೆಯವರು. ಬೆಳಿಗ್ಗೆ 7 ಗಂಟೆಯಿಂದ 9 ಗಂಟೆಯವರೆಗೆ. ಆದ್ಯತೆ: ಕುವೆಂಪುನಗರ. ವಿಳಾಸ: #32, ಹೆಚ್ಐಜಿ, 2ನೇ ಮಹಡಿ, ಮೇನ್‌ಮೇ ಸ್ವೆಕ್ಟ್ರಾ ಅಪಾರ್ಟ್‌ಮೆಂಟ್‌ಗಳು, ಕುವೆಂಪುನಗರ, ಮೈಸೂರು–570 023.

Mob: 9986756866

Site for sale

ಲಲಿತಾದ್ರಿಪುರ ರಿಂಗ್ ರಸ್ತೆಯಿಂದ 2 ಕಿ.ಮೀ. ದೂರದಲ್ಲಿ

30x50, 30x40

ನಿವೇಶನಗಳು ಲಭ್ಯವಿದೆ.

Mob: 9448447035

ತಕ್ಷಣ ಬೇಕಾಗಿದ್ದಾರೆ

Sales Executive / Cashers

Full time and part time available. Education: Minimum SSLC. ESI+PF+Incentive etc.

ವಿಶಾಲ ಮೆಗಾ ಮಾರ್ಟ್, ಶಿವರಾಂಪೇಟೆ, ಮೈಸೂರು

8904713893
7996691010

ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ

ಮೈಸೂರಿನ ಇಸ್ಕಾನ್ ದೇವಸ್ಥಾನ ಹಾಗೂ ಗರ್ಲ್ಸ್ ಕ್ಲಬ್, ದೇವೇಗೌಡ ಸರ್ಕಲ್ ಸುತ್ತಮುತ್ತ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 50 ವರ್ಷದೊಳಗೆ ವಿದ್ಯಾಭ್ಯಾಸ 10ನೇ ತರಗತಿ ಪಾಸ್ ಅಥವಾ ಫೇಲ್. ಉತ್ತಮ ವೇತನ (Rs. 15000/–) ಹಾಗೂ ಪಿಎಫ್, ಇಎಸ್‌ಐ ಇರುತ್ತದೆ.

6361765969
8792815411

ಸೈಟು ಮಾರಾಟಕ್ಕಿದೆ

40x60, ಪೂರ್ವ ದಿಕ್ಕು, ದಟ್ಟಗಳ್ಳಿ ಜೋಡಿ ಬೇವಿನ ಮರದ ಹತ್ತಿರ.
40x60, ದಕ್ಷಿಣ ದಿಕ್ಕು, ವಾಸು ಲೇಔಟ್. ಕಿಂಗ್ಸ್ ಕಾಫಿ ಹೋಟೆಲ್ ಎದುರುಗಡೆ ರಸ್ತೆ, ದಟ್ಟಗಳ್ಳಿ.
40x60, ಪಶ್ಚಿಮ ದಿಕ್ಕು, ದಟ್ಟಗಳ್ಳಿ.

Mob: 8050216683

ಸೈಟು ಮಾರಾಟಕ್ಕಿದೆ

30x40, ಪಶ್ಚಿಮ ದಿಕ್ಕು, ಯುಬಿ ಸಿಟಿ, ಬೋಗಾದಿ.
30x40, ಪಶ್ಚಿಮ ದಿಕ್ಕು ರಾಮಕೃಷ್ಣ ನಗರ, ಪೊಲೀಸ್ ಸ್ಟೇಷನ್ ಹತ್ತಿರ, ಕಮರ್ಷಿಯಲ್ ಸೈಟು.

Mob: 8050216683

Sites Wanted

@ Mandakalli, Dadadahalli, Thalur, Sindhuvalli, Kadakola TVS factory road & Mysore surroundings.Quick Regn.

Mob: 9538839926

Shops for Rent

10x20

@ J.P. nagara Main Road Opp. Brigade Sparkle Apartment Road, Kavitha Bakery Road, Near Fish Booth, Mysore.

Mob: 8495957243

FOR SALE

40x60, MUDA Auction Site @ Vijayanagar 4th Stage, 1st Phase. 100x55 E/F @ Vijayangar 4th Stage, 2nd Phase, 80 Ft Road. 65x40 House for Sale at Yadavagiri 4th Cross. 10 Acres Land near Talakad

7411363509

ಬೇಕಾಗಿದ್ದಾರೆ

ಮೈಸೂರು ಕಾಫಿ

ಕಾಫಿ ತಯಾರಿಸುವವರು ಮತ್ತು ಜ್ಯೂಸ್ ಮಾಡುವವರು ಪೂರ್ಣ ಸಮಯ ಅಥವಾ ಅರೆಕಾಲಿಕ. ಫ್ರೆಷರ್‌ಗಳಿಗೆ ಆದ್ಯತೆ. ಸಂಪರ್ಕಿಸಿ:

Mob: 7259483181

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಬೇಕಾಗಿದ್ದಾರೆ

ಮನೆಗೆ ಅಡುಗೆ ಮಾಡಲು ಸಸ್ಯಾಹಾರಿ ಮತ್ತು ಮಾಂಸಹಾರಿ ಅಡುಗೆ ಮಾಡುವ ಮಹಿಳೆ ಬೇಕಾಗಿದ್ದಾರೆ. ಸ್ಥಳ: ವಿಜಯನಗರ 3ನೇ ಹಂತ, ಎ ಒನ್ ಬ್ಲಾಕ್ ಜಯಲಕ್ಷ್ಮೀಪುರಂ ಪೊಲೀಸ್ ಸ್ಟೇಷನ್ ಹತ್ತಿರ. ಸಂಪರ್ಕಿಸಿ:

8296981290

ಕಳೆದಿದೆ

ಚಿಕ್ಕಯ್ಯನ ಛತ್ರ ಗ್ರಾಮ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಇಲ್ಲಿ ವಾಸವಿರುವ ಇಂದ್ರಾಣಿ – ಲೇಟ್ ಸಿ.ಎನ್ ಮಹಾದೇವನಾಯ್ಕ ಇವರಿಗೆ ಸೇರಿದ ಮೈಸೂರು ನಗರ, ವಿಜಯನಗರ 4ನೇ ಹಂತ, 2ನೇ ಫೇಸ್, ನಿವೇಶನ ಸಂಖ್ಯೆ 41ರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನೀಡಿದ್ದ ಮೂಲ ಸ್ವಾಧೀನ ಪತ್ರ, ಮೈಸೂರಿನಲ್ಲಿ ಕಳೆದು ಹೋಗಿರುತ್ತದೆ. ಸಿಕ್ಕವರು ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ ಅಥವಾ ಕರೆಮಾಡಿ :

7411734177

ಬೇಕಾಗಿದ್ದಾರೆ

ರೂಂ ಬಾಯ್‌ಗಳು ಮತ್ತು ಹೌಸ್ ಕೀಪಿಂಗ್ ಕೆಲಸದ ಅನುಭವ ಇರುವವರು, ಮತ್ತು ಪಾರ್ಟ್ ಟೈಮ್ ವೇಟರ್‌ಗಳು. ಆಸಕ್ತರು ಈ ಕೆಳಕಂಡ ವಿಳಾಸವನ್ನು ಸಂಪರ್ಕಿಸಿ. ವಿಜಯನಗರ ಸ್ಪೋರ್ಟ್ಸ್ ಕ್ಲಬ್(ರಿ), CA-12, 2ನೇ ಹಂತ, ವಿಜಯನಗರ –570017.

ದೂರವಾಣಿ ಸಂಖ್ಯೆ:

0821-2514823

ಮನೆ ಬಾಡಿಗೆಗೆ

ರಾಮಾನುಜ ರಸ್ತೆ, 8ನೇ ಕ್ರಾಸ್ 780/1, ಮನೆ, ವಾಸಕ್ಕಾಗಿ (6) ಕಮರ್ಷಿಯಲ್ ಸ್ಟೋರ್‌ಗಾಗಿ ಉಪಯೋಗಿಸಬಹುದು. ಹಾಲಿ–ಆಯುರ್ವೇದ ನರ್ಸಿಂಗ್ ಇದೆ. ಅವರು ಖಾಲಿ ಮಾಡಲಿದ್ದಾರೆ. ನೋಡಿ ಸಂಪರ್ಕಿಸಿ : ಸಮಯ 11–01

9964616120
8618698023

MUDA/DTCP SITES

ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ

ಬನ್ನೂರು ಮೇನ್ ರೋಡ್ 24–30 ಲಕ್ಷ
ಹೊಸೂರು ರಸ್ತೆ, ಇಲವಾಲ 27–36 ಲಕ್ಷ
ಬೋಗಾದಿ ರಸ್ತೆ 32–54 ಲಕ್ಷ
ಲಲಿತಾದ್ರಿಪುರ ರಿಂಗ್ ರಸ್ತೆ 34–45.5 ಲಕ್ಷ
ಹೆಬ್ಬಾಳ ಇನ್ಫೋಸಿಸ್ ಹತ್ತಿರ 36–55 ಲಕ್ಷ

81230 75038
Broker Excuse

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಮೈಸೂರು ಮಿತ್ರ ಗುರುವಾರ 12 ಮಾರ್ಚ್ 2026

ಹೆಗ್ಗವಾಡಿಯಲ್ಲಿ ಆರ್.ಧ್ರುವನಾರಾಯಣ್ ಪುಣ್ಯಸ್ಮರಣೆ

ಸಮಾಧಿಗೆ ಶಾಸಕ ದರ್ಶನ್ ಸೇರಿದಂತೆ ಗಣ್ಯರಿಂದ ಪೂಜೆ



ಹೆಗ್ಗವಾಡಿಯಲ್ಲಿ ಆರ್.ಧ್ರುವನಾರಾಯಣ್ ಸಮಾಧಿಗೆ ಪುತ್ರ, ಶಾಸಕ ದರ್ಶನ್ ಧ್ರುವನಾರಾಯಣ ಪೂಜೆ ಸಲ್ಲಿಸಿದರು.

ನಂಜನಗೂಡು, ಮಾ.11– ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ 3ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಸ್ವಗ್ರಾಮ ಹೆಗ್ಗವಾಡಿಯಲ್ಲಿರುವ ಸಮಾಧಿಗೆ ಕುಟುಂಬ ಸಮೇತರಾಗಿ ಶಾಸಕ ದರ್ಶನ್ ಧ್ರುವನಾರಾಯಣ್ ಪೂಜೆ ಸಲ್ಲಿಸಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ನಮ್ಮ ತಂದೆಯವರ ಜೀವನವೇ ನಮಗೆ ಆದರ್ಶ. ಅವರ ಜನಪರ ಕಾಳಜಿ, ಸಾಮಾಜಿಕ ಕೊಡುಗೆ ನಮಗೆ ದಾರಿದೀಪ. ಅವರು ಇಂದಿಗೂ ನಮ್ಮ ಜೊತೆಯಲ್ಲಿದ್ದಾರೆ. ನನ್ನ ಪ್ರತಿ ಹೆಜ್ಜೆಯಲ್ಲೂ ತಂದೆಯವರು ನನ್ನ ಜೊತೆಯಲಿದ್ದಾರೆ ಎಂಬ ಭಾವನೆಯಿಂದ ನಾನು ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ನನ್ನ ಕಷ್ಟ ಕಾಲದಲ್ಲಿ ಜೊತೆಯಾಗಿ ನಿಂತವರು ಕ್ಷೇತ್ರದ ಜನತೆ. ಆದ್ದರಿಂದ ಕ್ಷೇತ್ರದ ಜನತೆಯಲ್ಲಿ ನನ್ನ ತಂದೆ–ತಾಯಿಯನ್ನು ಕಾಣುತ್ತಾ ಜನಸೇವೆಯಲ್ಲಿ ತೊಡಗಿಕೊಂಡಿದ್ದೇನೆ. ನನ್ನ ತಂದೆ ಧ್ರುವನಾರಾಯಣ್ ಅವರು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಜನರ ನಡುವೆ ರಾಜಕೀಯದ ಹೊರತಾಗಿ ಪ್ರೀತಿ ವಿಶ್ವಾಸ ಹೊಂದಿದ್ದರು. ಆದ್ದರಿಂದಲೇ ನನ್ನ ತಂದೆಯವರ ಪುಣ್ಯಸ್ಮರಣೆ ಅಂಗವಾಗಿ ಅವರ ಸಮಾಧಿಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಅನೇಕ ಮುಖಂಡರು ಹಿತೈಷಿಗಳು ಮತ್ತು ಅವರ ಅಭಿಮಾನಿಗಳು ಭೇಟಿ ನೀಡುತ್ತಿದ್ದಾರೆ. ಜನರ ಸಂಕಷ್ಟಗಳಿಗೆ ಸ್ಪಂದಿಸಿ ಅವರ ಹಾದಿಯಲ್ಲೇ ಜನಸೇವೆಯಲ್ಲಿ ನಿರತನಾಗುತ್ತೇನೆ ಎಂದರು.

ದಿ.ಆರ್.ಧ್ರುವನಾರಾಯಣ್ ಅವರ ಪುಣ್ಯಸ್ಮರಣೆ ಅಂಗವಾಗಿ ಶಾಸಕರಾದ ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್, ರವಿಶಂಕರ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ವಿಧಾನಸಭಾ ಉಸ್ತುವಾರಿ ಶ್ರೀಕಂಠು, ಕಾವೇರಪ್ಪ ಸೇರಿದಂತೆ ಚಾಮರಾಜನಗರ ಲೋಕಸಭಾ ಕ್ಷೇತ್ರದ ಅವರ ಅಭಿಮಾನಿಗಳು, ಬೆಂಬಲಿಗರು, ಹಿತೈಷಿಗಳು ಅವರ ಸ್ಮಾರಕದ ಬಳಿ ಪುಷ್ಪ ನಮನ ಸಲ್ಲಿಸಿದರು.

ಇದೇ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು, ನಂಜನಗೂಡು ವಿಧಾನಸಭಾ ಉಸ್ತುವಾರಿ ಹಿರೇಹಳ್ಳಿ ಸೋಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠ ನಾಯಕ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಕಾಂಗ್ರೆಸ್ ಅಲ್ಪಸಂಖ್ಯಾತ ವಿಭಾಗದ ರಾಜ್ಯ ಕಾರ್ಯದರ್ಶಿ ಅನ್ಸರ್ ಅಹಮದ್, ಮುಖಂಡರಾದ ಎನ್.ಎಂ.ಮಂಜುನಾಥ್, ಕಳಲೆ ರಾಜೇಶ್, ರಾಜು, ಜಿಪಂ ಮಾಜಿ ಸದಸ್ಯೆ ಲತಾ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಸೇರಿದಂತೆ ಹಲವರಿದ್ದರು.

ಹೆಡಿಯಾಲದಲ್ಲೂ ಪುಣ್ಯಸ್ಮರಣೆ



ಮಲ್ಕುಂಡಿ, ಮಾ.11– ಇಲ್ಲಿಗೆ ಸಮೀಪದ ಹೆಡಿಯಾಲದಲ್ಲಿ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ 3ನೇ ವರ್ಷದ ಪುಣ್ಯಸ್ಮರಣೆ ನಡೆಯಿತು.

ಗ್ರಾಪಂ ಮಾಜಿ ಸದಸ್ಯ ಗೋವಿಂದರಾಜು ಮಾತನಾಡಿ, ದಿ.ಆರ್.ಧ್ರುವನಾರಾಯಣ್ ಅವರು 2 ಬಾರಿ ಸಂಸದರಾಗಿ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರು ನಮ್ಮನ್ನು ಅಗಲಿ 3 ವರ್ಷ ಕಳೆದರೂ ಕ್ಷೇತ್ರದ ಜನರ ಮನಸ್ಸಿನಲ್ಲಿ ಉಳಿದಿದ್ದಾರೆ. ಹೀಗಾಗಿ ಅವರ ಹಾದಿಯಲ್ಲಿ ಕಾರ್ಯಕರ್ತರು ಸಾಗಬೇಕಿದೆ. ಒಬ್ಬ ರಾಜಕಾರಣಿಯಾಗಿ ಕ್ಷೇತ್ರದ ಅಭಿವೃದ್ಧಿ ಪಡಿಸಿ ಗ್ರಾಮೀಣ ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ಅಲ್ಲದೇ ಅವರು ಸಂಸದರಾಗಿ ಮಾಡಿರುವ ಕೆಲಸಗಳು ಶಾಶ್ವತವಾಗಿ ಉಳಿದಿವೆ ಎಂದರು.

ಈ ವೇಳೆ ತಾಪಂ ಮಾಜಿ ಸದಸ್ಯ ನಾಗರಾಜು, ರವಿ, ಸುಬ್ರಹ್ಮಣ್ಯ, ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ ಕಾರ್ಯದರ್ಶಿ ಮಹದೇವಸ್ವಾಮಿ, ಸಾದೀಕ್, ಕಾಳೇಗೌಡ, ಚಿನ್ನಸ್ವಾಮಿ, ಪ್ರಕಾಶ್, ಸೋಮಣ್ಣ, ಪಟೇಲ್, ಅನ್ಸರ್, ಹಾಲೇಗೌಡ, ನಾರಾಯಣ್, ಅನ್ಸರ್ ಪಾಷ, ಜಾಫರ್ ಬಾಬು, ಮಂಟೆಲಿಂಗೇಸ್ವಾಮಿ, ಹುಚ್ಚೇಗೌಡ, ವಿಠಲ್, ವೆಂಕಟಬೋವಿ, ನರಸಿಂಹಯ್ಯ, ನಂಜುಂಡ, ರಾಚಯ್ಯ, ಕೈಲಾಸೇಗೌಡ, ಸಿದ್ದರಾಜು ಇದ್ದರು.

ಮೊಳೆಯೂರು ಕಾವಲ್‌ನಲ್ಲಿ ಸಿದ್ದಪ್ಪಾಜಿ ದೇವಸ್ಥಾನ ಉದ್ಘಾಟನೆ



ಸರಗೂರು, ಮಾ.11– ತಾಲೂಕಿನ ಎಲ್ಲಾ ಸಮುದಾಯ ಭವನ ಹಾಗೂ ದೇವಾಲಯ ನಿರ್ಮಾಣಕ್ಕೆ ಅನುದಾನ ನೀಡುತ್ತಿದ್ದೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಮೊಳೆಯೂರು ಕಾವಲ್ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಸಿದ್ದಪ್ಪಾಜಿ ದೇವಸ್ಥಾನ ಉದ್ಘಾಟನೆ ಹಾಗೂ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇವರ ಕಾರ್ಯದ ಜೊತೆಗೆ ಮಕ್ಕಳ ಶಿಕ್ಷಣ ಮತ್ತು ಆರೋಗ್ಯದ ಕಡೆಗೆ ಹೆಚ್ಚು ಒತ್ತು ನೀಡಬೇಕು. ಪೋಷಕರು ಸಹ ಈ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದ ಅವರು ಸಿದ್ದಪ್ಪಾಜಿ, ರಾಚಪ್ಪಾಜಿ ಪವಾಡ ಪುರುಷರು. ಅವರು ನಡೆದು ಬಂದ ಹಾದಿಯನ್ನು ತಿಳಿಯಬೇಕು. ನಾನು ಕೂಡ ಪ್ರತಿ ವರ್ಷ ಕಪ್ಪಡಿ ಸಿದ್ದಪ್ಪಾಜಿ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸುತ್ತೇನೆ ಎಂದರು.

ಪವಾಡ ಪುರುಷ ಸಿದ್ದಪ್ಪಾಜಿ ಬಗ್ಗೆ ಹೆಚ್ಚು ತಿಳಿದುಕೊಂಡಿರುವವರನ್ನು ಕರೆಸಿ ಅವರ ತತ್ವಾದರ್ಶಗಳನ್ನು ಇಂದಿನ ಪೀಳಿಗೆಗೆ ತಿಳಿಸಬೇಕು. ನನ್ನನು ತಾಲೂಕಿನ ಜನತೆ ಎರಡು ಬಾರಿ ಶಾಸಕರಾಗಿ ಆಯ್ಕೆ ಮಾಡಿದ್ದಾರೆ. ನಮ್ಮ ಕುಟುಂಬಕ್ಕೆ 3 ಅವಕಾಶ ಕಲ್ಪಿಸಿದ್ದೀರಿ. ನಾನು 7 ವರ್ಷಗಳಿಂದ ಶಾಸಕನಾಗಿದ್ದು, ಇಲ್ಲಿವರೆಗೆ ರಾಜಕಾರಣ ಮಾಡಿಲ್ಲ. ಬದಲಿಗೆ ಜನರ ಸೇವೆ ಮಾಡಿಕೊಂಡು ಬರುತ್ತಿದ್ದೇನೆ, ಮುಂದೆಯೂ ನಿಮ್ಮ ಆಶೀರ್ವಾದ ಹೀಗೆ ಇರಲಿ ಎಂದರು.

ದೇವಾಲಯ ಉದ್ಘಾಟನೆ ಹಿನ್ನೆಲೆಯಲ್ಲಿ ಮುಂಜಾನೆ ಸಿದ್ದಪ್ಪಾಜಿ ಕಂಡಾಯಗಳನ್ನು ಕೆರೆಯಲ್ಲಿ ಶುಚಿಗೊಳಿಸಿ ವಿವಿಧ ಹೂವಿನ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ನಂತರ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಕಳಸ ಹೊತ್ತ 101 ಮಕ್ಕಳು, ವೀರಗಾಸೆ, ಮಂಗಳವಾದ್ಯ, ನಂದಿ ಧ್ವಜ ಕುಣಿತ ಮೆರವಣಿಗೆಯಲ್ಲಿ ಸಾಗಿದವು. ಸಂಜೆ ಅರಳಿಕಟ್ಟೆ ಮಹದೇವಸ್ವಾಮಿ ಅವರಿಂದ ಶ್ರೀಸಿದ್ದಪ್ಪಾಜಿ ಕಥೆ ನಡೆಯಿತು. ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಜಿಪಂ ಮಾಜಿ ಸದಸ್ಯ ಪಿ.ರವಿ, ಮಾದಿಗ ಸಮಾಜದ ಮಾಜಿ ಅಧ್ಯಕ್ಷ ಪಿ.ನಾಗರಾಜು, ಎಂಸಿಡಿಸಿಸಿ ಬ್ಯಾಂಕ್ ಸದಸ್ಯ ಪರಶಿವಮೂರ್ತಿ, ಬೆಟ್ಟಸ್ವಾಮಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಆನಂದ್, ಮುಖಂಡರಾದ ಅಣ್ಣಯ್ಯಸ್ವಾಮಿ, ಗ್ರಾಪಂ ಅಧ್ಯಕ್ಷ ದೇವದಾಸ್, ಮಾಜಿ ತಾಪಂ ಸದಸ್ಯ ವೈಕುಂಠಯ್ಯ, ತಾಪಂ ಮಾಜಿ ಅಧ್ಯಕ್ಷ ಹನು, ಯಜಮಾನ ನಿಂಗರಾಜು, ಗುಡಿಗೌಡರ ನಾಗರಾಜು ಇನ್ನಿತರರಿದ್ದರು.

ಮಳೆ ಆಶ್ರಿತ ಬೇಸಾಯಕ್ಕೆ ಪ್ರೋತ್ಸಾಹ ನೀಡದೆ

ಬೀಜ ಮಸೂದೆ ಜಾರಿಗೆ ಮುಂದಾದ ಸರ್ಕಾರಗಳು

ಕೃಷಿ ಸಂಶೋಧಕ ಎಲ್.ಸಿ.ಚನ್ನರಾಜು ಆಕ್ರೋಶ



ಸುದ್ದಿಗೋಷ್ಠಿಯಲ್ಲಿ ಕೃಷಿ ಸಂಶೋಧಕ ಎಲ್.ಸಿ.ಚನ್ನರಾಜು ಮಾತನಾಡಿದರು.

ಹೆಚ್.ಡಿ.ಕೋಟೆ, ಮಾ.11– ಭಾರತೀಯ ಕೃಷಿಗೆ ತನ್ನದೇ ಆದ ಪರಂಪರೆ ಇದ್ದು, ಜಾಗತೀಕರಣ ಮತ್ತು ಹವಾಮಾನ ಸಾಮಾಜಿಕ ಬದಲಾವಣೆ ಸನ್ನಿವೇಶದಲ್ಲಿ ಮಳೆ ಆಶ್ರಿತ ಬೇಸಾಯಕ್ಕೆ ಪ್ರೋತ್ಸಾಹ ನೀಡುವ ಮೂಲಕ ಬೀಜ ಸಂಪತ್ತನ್ನು ಕಾಪಾಡಬೇಕಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಾಂತ್ರಿಕ ವಿಷಯಗಳನ್ನು ಹೇರಿ ರೈತರ ಬೀಜ ಸಂಪತ್ತಿನ ಮೇಲೆ ನಿಯಂತ್ರಣ ಹೇರಲು 2025ರ ಬೀಜ ಮಸೂದೆ ಜಾರಿಗೆ ಮುಂದಾಗಿದೆ ಎಂದು ಸೆಂಟರ್ ಫಾರ್ ಹ್ಯೂಮನ್ ಡೆವಲಪ್ಮೆಂಟ್ ಆಂಡ್ ಸೋಷಿಯಲ್ ಚೇಂಜ್ ಸಂಸ್ಥೆಯ ಕೃಷಿ ಸಂಶೋಧಕ ಎಲ್.ಸಿ.ಚನ್ನರಾಜು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2025ರ ಮಸೂದೆಯಲ್ಲಿ ಅನೇಕ ತಿದ್ದುಪಡಿ ಅವಶ್ಯಕತೆ ಇದೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಹು ರಾಷ್ಟ್ರೀಯ ಕಂಪನಿಗಳ ಕೈಗೊಂಬೆಯಾಗಿದ್ದು, ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಮಸೂದೆ ಜಾರಿಯಾದರೆ ರೈತರ ಪಾಲಿಗೆ ಮರಣ ಶಾಸನವಾಗಿ ರೈತರ ಸಾಂಪ್ರದಾಯಿಕ ಬೀಜದ ಮೇಲಿನ ಪರಂಪರೆಗೆ ಹೊಡೆತ ಬೀಳಲಿದೆ ಎಂದರು.

ದೇಶದಲ್ಲಿ ಸಾವಿರಾರು ಬೀಜದ ತಳಿಗಳಿದ್ದರೂ, ಎಲ್ಲಾ ಹವಾಮಾನಕ್ಕೆ ಹೊಂದಾಣಿಕೆ ಆಗಲ್ಲ. ದೇಶಿಯ ತಳಿ ರೈತನ ಸಂಪತ್ತು. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದೇ ಬಹು ರಾಷ್ಟ್ರೀಯ ಕಂಪನಿಗಳ ಪ್ರಭಾವಕ್ಕೆ ಮಣಿಯದೆ ರೈತರ ಬೀಜದ ಹಕ್ಕನ್ನು ಕಾಪಾಡುವ ನಿಟ್ಟಿನಲ್ಲಿ 2025ರ ಬೀಜ ಮಸೂದೆಗೆ ಸರಿಯಾದ ತಿದ್ದುಪಡಿ ತಂದು ಜಾರಿಗೊಳಿಸುವಂತೆ ಒತ್ತಾಯಿಸಿದರು.

ಸಂಸ್ಥೆಯ ವಿಜಯಲಕ್ಷ್ಮಿ ಮಾತನಾಡಿ, ಸೆಂಟರ್ ಫಾರ್ ಹ್ಯೂಮನ್ ಡೆವಲಪ್ಮೆಂಟ್ ಆಂಡ್ ಸೋಷಿಯಲ್ ಚೇಂಜ್ ಸಂಸ್ಥೆ ಬಂದಾಗಿನಿಂದ ಕೃಷಿ ವಲಯಗಳನ್ನು ಮಾಡಿ ಬೀಜ ವಲಯ ಬಲಪಡಿಸುವ ನಿಟ್ಟಿನಲ್ಲಿ ಸೂಕ್ತ ತರಬೇತಿ ನೀಡಿದ್ದರ ಫಲವಾಗಿ ಇಂದು ನಾವೇ ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಂಡು ಬೀಜ ಸಂರಕ್ಷಣೆ ಮಾಡಿ ರೈತರಿಗೆ ಹಂಚುವ ಕೆಲಸ ಮಾಡುತ್ತಿದ್ದೇವೆ. ಸರ್ಕಾರ ಹೆಚ್ಚಿನ ಉತ್ತೇಜನ ಕೊಟ್ಟು ಬೆಂಬಲ ನೀಡಿದರೆ ಹೆಚ್ಚು ತಳಿಗಳ ಬೀಜ ಬ್ಯಾಂಕ್ ಮಾಡಿ ನಮ್ಮ ರೈತರಿಗೆ ನಾವೇ ಹಂಚುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಕೃಷಿ ಸಂಚಾಲಕರಾದ ಡ್ಯಾನಿಯಲ್, ಲತಾ, ಅಶ್ವಿನಿ, ಪೂಜಾ, ರೂಪ, ಗೀತಾ, ಜಯಲಕ್ಷ್ಮಿ, ವಿಜಯಲಕ್ಷ್ಮಿ, ನಾಗರತ್ನಮ್ಮ ಇನ್ನಿತರರಿದ್ದರು.

ಅನುದಾನ ಹಂಚಿಕೆಯಲ್ಲಿ ತಾರತಮ್ಯ

ಅಧಿವೇಶನದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಅಸಮಾಧಾನ



ಹುಣಸೂರು, ಮಾ.11– ಪ್ರಗತಿ ಕಾಲೋನಿ ಅಭಿವೃದ್ಧಿ ಯೋಜನೆಯಡಿ ಅನುದಾನ ಹಂಚಿಕೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆ ಅಧಿವೇಶನದಲ್ಲಿ ಬುಧವಾರ ಶಾಸಕ ಜಿ.ಡಿ.ಹರೀಶ್‌ಗೌಡರು ಚುಕ್ಕಿ ಪ್ರಶ್ನೆಯಡಿ ಅನುದಾನ ನೀಡಲು ಇಲಾಖೆ ಹೇಗೆ ತಾರತಮ್ಯ ಮಾಡುತ್ತಿದೆ ಎಂದು ಎಳೆ ಎಳೆಯಾಗಿ ಸಭೆಯ ಮುಂದಿಟ್ಟರು.

2023–24ರಲ್ಲಿ ಪ್ರಗತಿ ಕಾಲೋನಿ ಅಭಿವೃದ್ಧಿ ಯೋಜನೆಯಡಿ ತಾಲೂಕಿಗೆ ನಯಾಪೈಸೆಯನ್ನು ಇಲಾಖೆ ನೀಡಿಲ್ಲ. 2024–25ರಲ್ಲಿ 1 ಕೋಟಿ ರೂ. ಅನುದಾನ ನೀಡಿದ್ದು, ಅದರಲ್ಲಿ 33 ಲಕ್ಷ ರೂ. ಮಾತ್ರ ಬಿಡುಗಡೆಯಾಗಿದೆ. ಮೈಸೂರು ಜಿಲ್ಲೆಯ ಇನ್ನಿತರ ತಾಲೂಕುಗಳಿಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ ಎನ್ನುವ ತಮ್ಮ ಪ್ರಶ್ನೆಗೆ ಸಚಿವರು ಉತ್ತರಿಸಿಲ್ಲ. ಆದರೆ ಕಳೆದ ವಿಧಾನಸಭೆ ಅಧಿವೇಶನದಲ್ಲಿ (2025ರ ಆ.20) ನಾನು ಕೇಳಿದ್ದ ಚುಕ್ಕಿ ಇಲ್ಲದ ಪ್ರಶ್ನೆಗೆ ಉತ್ತರ ನೀಡಿದ್ದು, ಅದರಂತೆ ಜಿಲ್ಲೆಗೆ ಪ್ರಗತಿ ಕಾಲೋನಿ ಯೋಜನೆಯಡಿ ಒಟ್ಟು 70 ಕೋಟಿ ರೂ. ಅನುದಾನ ನೀಡಲಾಗಿದೆ. ಈ ಪೈಕಿ ವರುಣ ಕ್ಷೇತ್ರಕ್ಕೆ 14.25 ಕೋಟಿ ರೂ., ಪಿರಿಯಾಪಟ್ಟಣಕ್ಕೆ 9.65 ಕೋಟಿ ರೂ., ಕೆ.ಆರ್. ನಗರಕ್ಕೆ 7 ಕೋಟಿ ರೂ., ಹೆಚ್.ಡಿ. ಕೋಟೆ 8.45 ಕೋಟಿ ರೂ., ನಂಜನಗೂಡು 7 ಕೋಟಿ, ಚಾಮುಂಡೇಶ್ವರಿ 3.50 ಕೋಟಿ ರೂ., ತಿ.ನರಸೀಪುರಕ್ಕೆ 8.85 ಕೋಟಿ ರೂ., ಚಾಮರಾಜ ಕ್ಷೇತ್ರಕ್ಕೆ 5 ಕೋಟಿ, ನರಸಿಂಹರಾಜ ಕ್ಷೇತ್ರ 4 ಕೋಟಿ ರೂ. ಅನುದಾನ ನೀಡಲಾಗಿದೆ. ಆದರೆ, ಹುಣಸೂರು ಹಾಗೂ ಕೃಷ್ಣರಾಜ ಕ್ಷೇತ್ರಕ್ಕೆ ತಲಾ ಒಂದೊಂದು ಕೋಟಿ ಅನುದಾನ ನೀಡಲಾಗಿದೆ. ಯಾವ ಮಾನದಂಡದಡಿ ಅನುದಾನ ವಿತರಿಸಿದ್ದೀರಿ ಎನ್ನುವುದರ ಕುರಿತು ಸಚಿವರು ಮಾಹಿತಿ ನೀಡಿಲ್ಲ ಎಂದು ಬೇಸರಿಸಿದರು.

ತಾರತಮ್ಯ ನೀತಿ ಅನುಸರಿಸಿಲ್ಲ: ಹೆಚ್‌ಸಿಎಂ



ಶಾಸಕ ಹರೀಶ್‌ಗೌಡರ ಪ್ರಶ್ನೆಗೆ ಉತ್ತರಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪ್ರಗತಿ ಕಾಲೋನಿ ಯೋಜನೆಯಡಿ ಹುಣಸೂರಿಗೆ ಒಂದು ಕೋಟಿ ರೂ. ನೀಡಲಾಗಿದ್ದು, ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಭವನ ನಿರ್ಮಾಣಕ್ಕೆ 270 ಲಕ್ಷ ರೂ. (9 ಕಾಮಗಾರಿಗಳು) ಅನುದಾನ ನೀಡಲಾಗಿದೆ. ಈ ಪೈಕಿ 7 ಕಾಮಗಾರಿಗಳು ಪ್ರಗತಿಯಲ್ಲಿದ್ದು, 2 ಕಾಮಗಾರಿ ಆರಂಭಿಸಬೇಕಿದೆ. ಅನುದಾನ ಹಂಚಿಕೆಯಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ. ಈ ಹಿಂದೆ ತಾವು ಲೋಕೋಪಯೋಗಿ ಸಚಿವರಾಗಿದ್ದ ವೇಳೆ ನೂರಾರು ಕೋಟಿ ರೂ. ಅನುದಾನದಡಿ ತಾಲೂಕಿನಾದ್ಯಂತ ಪ.ಜಾತಿ, ಜನಾಂಗಗಳ ಕಾಲೋನಿಯನ್ನು ಕಾಂಕ್ರೀಟೀಕರಣ ಮಾಡಲಾಗಿದೆ. ತಾರತಮ್ಯ ಮಾಡುವ ಉದ್ದೇಶವೂ ಇಲ್ಲ, ಮಾಡುವುದೂ ಇಲ್ಲ ಎಂದರು.

ಹಳ್ಳಿಗೆ 15 ಸಾವಿರ: ಹುಣಸೂರು ಶೇ.70ರಷ್ಟು ಪ.ಜಾತಿ, ಪ.ಪಂಗಡ, ಅಲ್ಪಸಂಖ್ಯಾತರು ಮತ್ತು ಹಿಂದುಳಿದವರು ಇರುವ ತಾಲೂಕು ಆಗಿದೆ. ಸರ್ಕಾರ ಇದೀಗ ನೀಡಿರುವ ಅನುದಾನ ಒಟ್ಟು ಜನಸಂಖ್ಯೆಯ ಶೇ.20ರಷ್ಟಿರುವ ಪ.ಜಾತಿ, ಶೇ.15ರಷ್ಟಿರುವ ಪ.ಪಂಗಡದ ಜನರ ಕಾಲೋನಿಗಳಿಗೆ ಹಂಚಲು ಸಾಧ್ಯವೇ? 200ಕ್ಕೂ ಹೆಚ್ಚು ಹಳ್ಳಿಗಳನ್ನು ಹೊಂದಿರುವ ತಾಲೂಕಿಗೆ 1 ಕೋಟಿ ರೂ. ಹಂಚಿದರೆ 1ರಿಂದ 2 ಮೀಟರ್ ಚರಂಡಿ ನಿರ್ಮಿಸಬಹುದಷ್ಟೆ, ರಾಜ್ಯ ಸರ್ಕಾರ ಅನುದಾನ ಹಂಚಿಕೆಯಲ್ಲಿ ತಾರತಮ್ಯ ನೀತಿ ಅನುಸರಿಸಿದಂತೆ ತೋರುತ್ತಿದೆ. ಪ.ಪಂಗಡಕ್ಕಂತೂ ಅನುದಾನವೇ ಇಲ್ಲ. ಜಿಲ್ಲೆಗೆ 70 ಕೋಟಿ ಹಂಚಿಕೆ ಮಾಡಿದ್ದು, ಹುಣಸೂರಿಗೆ ಕೇವಲ ಒಂದು ಕೋಟಿ ರೂ. ಹಂಚಿಕೆ ಆಗಿದೆ ಅಂದರೆ ಏನರ್ಥ ಎಂದು ಬೇಸರಿಸಿದರು.

ಕ್ರೀಡಾಂಗಣ ಕೈಬಿಟ್ಟ ಸರ್ಕಾರದ ನಿರ್ಧಾರಕ್ಕೆ ಸ್ವಾಗತ



ತಿ.ನರಸೀಪುರ, ಮಾ.11– ಪಟ್ಟಣದ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಕೈಬಿಟ್ಟ ಸರ್ಕಾರದ ನಿರ್ಧಾರವನ್ನು ಕನ್ನಡಸೇನೆ–ಕರ್ನಾಟಕ ಸಂಘಟನೆ ತಾಲೂಕು ಅಧ್ಯಕ್ಷ ಕೆ.ರಾಜು ಸ್ವಾಗತಿಸಿದ್ದಾರೆ.

ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಹಲವು ಸಂಘಟನೆಗಳು, ರಾಜಕೀಯ ಮುಖಂಡರು ಹಾಗೂ ಕಾರ್ಮಿಕರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಹೋರಾಟಗಾರರ ಪ್ರತಿಭಟನೆ ಪರಿಗಣಿಸಿ ಸದನದಲ್ಲಿ ಕ್ರೀಡಾಂಗಣ ನಿರ್ಮಾಣ ಕೈ ಬಿಟ್ಟಿರುವ ಬಗ್ಗೆ ಹೇಳಿಕೆ ನೀಡಿರುವುದು ನಿಜಕ್ಕೂ ಸಂತಸ ತಂದಿದ್ದು, ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ ಎಂದರು.

15 ದಿನಗಳ ಕಾಲ ಕಾರ್ಖಾನೆ ಎದುರು ನಡೆದ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ನಡೆಯುತ್ತಿದ್ದ ಪ್ರತಿಭಟನೆಯಲ್ಲಿ ನಮ್ಮ ಕನ್ನಡ ಸೇನೆ–ಕರ್ನಾಟಕ ಸೇನೆ ಸದಸ್ಯರು ಕೂಡ ಭಾಗವಹಿಸಿ ಪ್ರತಿಭಟನೆಗೆ ಬೆಂಬಲ ಸೂಚಿಸಿ ಕ್ರೀಡಾಂಗಣ ನಿರ್ಮಾಣ ಕೈ ಬಿಡುವಂತೆ ಒತ್ತಾಯಿಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದ್ದೇವು. ಅಲ್ಲಿ ಕ್ರೀಡಾಂಗಣ ನಿರ್ಮಿಸುವುದರಿಂದ ಪರಿಸರಕ್ಕೆ ಧಕ್ಕೆ ಉಂಟಾಗುವ ಜೊತೆಗೆ ಕಾರ್ಮಿಕರಿಗೂ ತೊಂದರೆಯಾಗಲಿದೆ. ಕ್ರೀಡಾಂಗಣ ನಿರ್ಮಿಸುವುದಾದರೆ ಕಾರ್ಖಾನೆ ಆವರಣ ಬಿಟ್ಟು ಬೇರೆಡೆ ನಿರ್ಮಿಸುವಂತೆ ಒತ್ತಾಯಿಸಲಾಗಿತ್ತು. ಈಗ ಸದನದಲ್ಲಿ ಉದ್ದೇಶಿತ ಸ್ಥಳದಲ್ಲಿ ಕ್ರೀಡಾಂಗಣ ನಿರ್ಮಿಸುವುದಿಲ್ಲ ಎಂದು ತೀರ್ಮಾನಿಸಿರುವುದರಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿತವಾದ ಕಾರ್ಖಾನೆ ತನ್ನ ಅಸ್ತಿತ್ವ ಉಳಿಸಿಕೊಂಡಂತಾಗಿದ್ದು, ಕಾರ್ಮಿಕರು ಕೂಡ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಹಾಗಾಗಿ ಪ್ರತಿಭಟನೆಯಲ್ಲಿ ಭಾಗವಹಿಸಿ ಕಾರ್ಖಾನೆ ಉಳಿವಿಗಾಗಿ ಹಾಗೂ ಕಾರ್ಮಿಕರ ಪರ ಧ್ವನಿ ಎತ್ತಿದ ಎಲ್ಲಾ ರೈತಪರ ಸಂಘಟನೆಗಳು, ಪರಿಸರ ಸಂಘಟನೆಗಳು ಹಾಗೂ ಪ್ರಮುಖವಾಗಿ ಕ್ರೀಡಾಂಗಣ ನಿರ್ಮಾಣದಿಂದ ಹಿಂದೆ ಸರಿದು ಕೆಎಸ್‌ಐಸಿ ಉಳಿವಿಗೆ ಸಹಕರಿಸಿದ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ವಿದ್ಯುತ್ ಸ್ಪರ್ಶ: ಸ್ಥಳದಲ್ಲೇ ಲೈನ್‌ಮನ್ ಸಾವು



ಬೆಟ್ಟದಪುರ, ಮಾ.11– ವಿದ್ಯುತ್ ಸ್ಪರ್ಶದಿಂದ ಲೈನ್‌ಮನ್ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ವಡೆಯರ ಹೊಸಳ್ಳಿ ಗ್ರಾಮದಲ್ಲಿ ಬುಧವಾರ ನಡೆದಿದೆ.

ಬೆಟ್ಟದಪುರ ವಿದ್ಯುತ್ ಉಪ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬಾಲಕೃಷ್ಣ(38) ಸಾವನ್ನಪ್ಪಿದವರು. ಈತ ಇಂದು ಬೆಳಗ್ಗೆ 10 ಗಂಟೆ ಸಮಯದಲ್ಲಿ ಟ್ರಾನ್ಸ್ ಫಾರ್ಮರ್ ದುರಸ್ಥಿಗೊಳಿಸಿ ಕೆಳಗಿಳಿಯುವ ವೇಳೆ ವಿದ್ಯುತ್ ಸ್ಪರ್ಶಗೊಂಡ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಟ್ಟದಪುರ ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಶವವನ್ನು ಪಿರಿಯಾಪಟ್ಟಣ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಬೆಟ್ಟದಪುರ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿಜೃಂಭಣೆಯ ಶ್ರೀಮರುಡೇಶ್ವರಸ್ವಾಮಿ ರಥೋತ್ಸವ




ತಲಕಾಡು, ಮಾ.11– ತಿ.ನರಸೀಪುರ ತಾಲೂಕಿನ ಮಾದಾಪುರ ಗ್ರಾಮದಲ್ಲಿ ಶ್ರೀಮರುಡೇಶ್ವರಸ್ವಾಮಿ ರಥೋತ್ಸವ ಬುಧವಾರ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮಹೋತ್ಸವ ಅಂಗವಾಗಿ ಮುಂಜಾನೆಯಿಂದಲೇ ದೇವಸ್ಥಾನದಲ್ಲಿ ದೇವರಿಗೆ ರುದ್ರಾಭಿಷೇಕ ನಡೆದು ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಬಳಿಕ ಭಕ್ತರು ದೇವರ ದರ್ಶನ ಪಡೆದರು. ರಥೋತ್ಸವಕ್ಕೆ ಮಧ್ಯಾಹ್ನ 2 ಗಂಟೆಗೆ ಚಾಲನೆ ನೀಡಲಾಯಿತು. ಬಳಿಕ ಶ್ರೀಗಣಪತಿ, ಶ್ರೀಸುಬ್ರಹ್ಮಣೇಶ್ವರ ಹಾಗೂ ಶ್ರೀಮರುಡೇಶ್ವರ ಬ್ರಹ್ಮ ರಥೋತ್ಸವ ದೇವಸ್ಥಾನದ ಮುಂಭಾಗದ ರಥದ ಬೀದಿಯಲ್ಲಿ ಸಾವಿರಾರು ಭಕ್ತರ ಜೈಕಾರದೊಡನೆ ಮಂಗಳವಾದ್ಯ, ವೀರಭದ್ರನ ಕುಣಿತ ಸೇರಿದಂತೆ ವಿವಿಧ ಕಲಾ ತಂಡಗಳೊಂದಿಗೆ ಸಾಂಗವಾಗಿ ಸಾಗಿತು. ಸುಡುಬಿಸಿಲನ್ನು ಲೆಕ್ಕಿಸದೆ ಆಗಮಿಸಿದ್ದ ಸಾವಿರಾರು ಭಕ್ತರು ರಥಗಳಿಗೆ ಹಣ್ಣು ಜವನ ಎಸೆದು ಭಕ್ತಿ ಸಮರ್ಪಿಸಿದರು. ಸೇವಾರ್ಥದಾರರು ಅರವಟ್ಟಿಗೆಯಲ್ಲಿ ಮಜ್ಜಿಗೆ, ಪಾನಕ ಹಾಗೂ ಕೋಸಂಬರಿ ವಿತರಿಸಿದರು.

ಖಾತೆ ಮಾಡಿಕೊಡದ ಹಿನ್ನೆಲೆ: ಸಾಲಿಗ್ರಾಮ ನಾಡಕಚೇರಿ ಎದುರು

ಕ್ರಿಮಿನಾಶಕ ಸೇವಿಸಿ ರೈತ ಆತ್ಮಹತ್ಯೆಗೆ ಯತ್ನ



ರಂಗೇಗೌಡ

ಭೇರ್ಯ, ಮಾ.11– ಅಧಿಕಾರಿಗಳು ತನ್ನ ಜಮೀನಿಗೆ ಖಾತೆ ಮಾಡಿ ಕೊಡದೆ ಸತಾಯಿಸುತ್ತಿದ್ದಾರೆ ಎಂದು ಆರೋಪಿಸಿ ರೈತ ನೋರ್ವ ಸಾಲಿಗ್ರಾಮ ನಾಡಕಚೇರಿ ಎದುರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಬುಧವಾರ ನಡೆದಿದೆ.

ಸಾಲಿಗ್ರಾಮ ತಾಲೂಕಿನ ಚಿಕ್ಕನಾಯಕನಹಳ್ಳಿ ಗ್ರಾಮದ ರಂಗೇಗೌಡ(70) ಆತ್ಮಹತ್ಯೆಗೆ ಯತ್ನಿಸಿದವರು. ಈತ ತನ್ನ ಜಮೀನಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡಿ ಖಾತೆ ಮಾಡಿ ಕೊಡುವಂತೆ ಸಾಲಿಗ್ರಾಮ ನಾಡಕಚೇರಿಗೆ ಕಳೆದ 2 ವರ್ಷಗಳ ಹಿಂದೆ ಅರ್ಜಿ ಸಲ್ಲಿಸಿದ್ದರು. ಆದರೆ ಇಲ್ಲಿವರೆಗೂ ಖಾತೆ ಮಾಡಿಕೊಡದೇ ರಂಗೇಗೌಡರನ್ನು ಸಂಬಂಧಪಟ್ಟ ಅಧಿಕಾರಿಗಳು ಕಚೇರಿಗೆ ಅಲೆದಾಡಿಸಿದ್ದರು. ಈ ವಿಚಾರವನ್ನು ತಹಸೀಲ್ದಾರ್ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗದ ಹಿನ್ನೆಲೆಯಲ್ಲಿ ಮನನೊಂದಿದ್ದ ಅವರು ಬುಧವಾರ ಸಾಲಿಗ್ರಾಮ ನಾಡಕಚೇರಿ ಎದುರು ಸಾರ್ವಜನಿಕರ ಎದುರು ಕ್ರಿಮಿನಾಶಕ ಸೇವಿಸಿದರು. ಇದನ್ನು ಗಮನಿಸಿದ ಮುಖಂಡರೊಬ್ಬರು ಸ್ಥಳೀಯರ ಸಹಕಾರದೊಂದಿಗೆ ರಂಗೇಗೌಡರನ್ನು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸಾವು ಬದುಕಿನ ಹೋರಾಟ ನಡೆಸುತ್ತಿದ್ದಾರೆ.

ಖಂಡನೆ: ಸಾಲಿಗ್ರಾಮ ತಾಲೂಕು ಕೇಂದ್ರವಾದರೂ ಜಮೀನಿನ ದಾಖಲೆ ಅಥವಾ ಖಾತೆ ಮತ್ತು ಜನನ, ಮರಣ ಪ್ರಮಾಣ ಪತ್ರಕ್ಕಾಗಿ ರೈತರು ಹಾಗೂ ಸಾರ್ವಜನಿಕರ ಅಲೆದಾಟ ತಪ್ಪಿಲ್ಲ. ತಾಲೂಕು ಆಡಳಿತ ಸೌಧದ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ಸೇರಿದಂತೆ ಎಲ್ಲರೂ ದಾಖಲೆಗಳನ್ನು ನೀಡಲು ಹಿಂದೇಟು ಹಾಕುತ್ತಾರೆ. ಸಾಲಿಗ್ರಾಮ ತಾಲೂಕು ಆಡಳಿತ ವ್ಯವಸ್ಥೆ ಹದಗೆಟ್ಟಿದೆ. ಈ ಬಗ್ಗೆ ಸಾಕಷ್ಟು ಬಾರಿ ಶಾಸಕರು, ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ರೈತ ಮುಖಂಡರು ಆರೋಪಿಸಿದರು.

ಬನ್ನಹಳ್ಳಿ ಬಳಿ ಸರ್ಕಾರಿ ಜಮೀನಲ್ಲಿ ಕ್ರೀಡಾಂಗಣ ನಿರ್ಮಿಸಿ

ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಸಂತೃಪ್ತಿ ಕುಮಾರ್ ಮಾತನಾಡಿದರು.

ತಿ.ನರಸೀಪುರ, ಮಾ.11– ತಾಲೂಕಿನಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಕೆಎಸ್‌ಐಸಿ ಆವರಣ ಹೊರತುಪಡಿಸಿ ಬೇರೆ ಸ್ಥಳವಿಲ್ಲ ಎಂಬ ಅಧಿಕಾರಿಗಳ ವರದಿ ನಡುವೆ ಬನ್ನಹಳ್ಳಿ ಗ್ರಾಮದಲ್ಲಿರುವ 23.15 ಎಕರೆ ಬಿ.ಖರಾಬಿನಲ್ಲಿ ಕ್ರೀಡಾಂಗಣ ನಿರ್ಮಿಸುವಂತೆ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್ ಒತ್ತಾಯಿಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸಲು 23.15 ಎಕರೆ ವಿಶಾಲವಾದ ಜಾಗವಿದ್ದು ಅಧಿಕಾರಿಗಳು ಸ್ಥಳ ಪರಿಶೀಲಿಸಿ ಕ್ರೀಡಾಂಗಣ ನಿರ್ಮಿಸಲು ಜಾಗ ಸೂಕ್ತವಾಗಿದೆಯೇ ಎಂಬ ಬಗ್ಗೆ ಸರ್ಕಾರಕ್ಕೆ ವರದಿ ನೀಡಬೇಕು ಎಂದು ಮನವಿ ಮಾಡಿದರು.

ಈ ಹಿಂದೆ ಅಧಿಕಾರಿಗಳು ಕೆಎಸ್‌ಐಸಿ ಆವರಣ ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತವಾಗಿದೆ ಎಂದು ಸರ್ಕಾರಕ್ಕೆ ವರದಿ ನೀಡಿದ್ದ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ, ಎಂಎಲ್‌ಸಿ ಡಾ.ಯತೀಂದ್ರ ಸೇರಿದಂತೆ ಸರ್ಕಾರ ಅಲ್ಲೇ ಕ್ರೀಡಾಂಗಣ ನಿರ್ಮಿಸಲು ಮುಂದಾಗಿತ್ತು. ಆದರೆ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವುದು ಬೇಡ ಎಂದು ವಿಪಕ್ಷಗಳು, ಪರಿಸರವಾದಿಗಳು, ಕಾರ್ಮಿಕರು ಪ್ರತಿಭಟಿಸಿದ ಹಿನ್ನೆಲೆಯಲ್ಲಿ ಸರ್ಕಾರ ಕ್ರೀಡಾಂಗಣ ನಿರ್ಮಾಣ ಕೈಬಿಟ್ಟಿರುವುದಾಗಿ ಅಧಿವೇಶನದಲ್ಲೇ ಪ್ರಕಟಿಸಿತ್ತು. ಆದರೆ ತಾಲೂಕಿನಲ್ಲಿ ನಿರ್ಮಾಣವಾಗಬೇಕಿರುವ ಕ್ರೀಡಾಂಗಣ ಬೇರೆ ತಾಲೂಕಿಗೆ ಹೋಗಲಿದೆ ಎಂದು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಹಾಗಾಗಿ ಕ್ರೀಡಾಂಗಣ ನಮ್ಮ ತಾಲೂಕಿನಲ್ಲೇ ಆಗಬೇಕು ಎಂಬುದು ನಮ್ಮ ಒತ್ತಾಯವಾಗಿದೆ ಎಂದರು.

ಕ್ರೀಡಾಂಗಣ ಈಗ ಆದರೆ ಆದಂತೆ: ಕ್ರೀಡಾಂಗಣಕ್ಕೆ ಬನ್ನಹಳ್ಳಿ ಬಳಿಯ 23.15 ಎಕರೆ ಜಾಗ ಸೂಕ್ತ ಎಂಬುದು ಸಾರ್ವಜನಿಕರ ಅಭಿಪ್ರಾಯ. ತಿ.ನರಸೀಪುರ ಪಟ್ಟಣ ನಂಜನಗೂಡು ರಸ್ತೆ ಕಡೆಗೆ ಬೆಳೆಯುತ್ತಿದೆ. ಹೀಗಾಗಿ ಇದೇ ಜಾಗ ಕ್ರೀಡಾಂಗಣಕ್ಕೆ ಸೂಕ್ತವಾಗಿದೆ. ಅಲ್ಲದೇ ಸಿಎಂ ಸಿದ್ದರಾಮಯ್ಯ ಕೂಡ ಇದೇ ಕ್ಷೇತ್ರದವರಾದ್ದರಿಂದ ಅವರ ಅವಧಿಯಲ್ಲಿ ಕ್ರೀಡಾಂಗಣ ಆಗಬೇಕು. ಇಲ್ಲದಿದ್ದರೇ ಮುಂದೆ ಕ್ರೀಡಾಂಗಣದ ಆಸೆಯನ್ನು ತಾಲೂಕಿನ ಜನತೆ ಕೈ ಬಿಡಬೇಕಾಗುತ್ತದೆ. ಅಧಿಕಾರಿಗಳು ಸ್ಥಳ ಪರಿಶೀಲಿಸಿ ಸರಿಯಾದ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.


2013ರಲ್ಲೇ ಅನುದಾನ ಬಿಡುಗಡೆಯಾಗಿತ್ತು: ತಿ.ನರಸೀಪುರ ತಾಲೂಕಿಗೆ ಕ್ರೀಡಾಂಗಣ ಬೇಕು ಎಂಬ ಸಾರ್ವಜನಿಕರ ಹಲವಾರು ವರ್ಷಗಳ ಒತ್ತಾಯದ ಮೇರೆಗೆ 2013–2018ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು 50 ಲಕ್ಷ ರೂ. ಅನುದಾನ ನೀಡಿದ್ದರು. ಆದರೆ ಅದನ್ನು ಸದುಪಯೋಗ ಪಡಿಸಿಕೊಳ್ಳಲು ತಾಲೂಕಿನ ಅಧಿಕಾರಿಗಳು, ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ವಿಫಲರಾಗಿದ್ದರು. ಆದರೆ ಈಗ ಜಾಗದ ಸಮಸ್ಯೆ ಮುಂದಿಟ್ಟು ಮತ್ತೆ ಕ್ರೀಡಾಂಗಣದ ಕನಸು ಭಗ್ನಗೊಳ್ಳುವುದು ಬೇಡ. ತಾಲೂಕಿನಲ್ಲಿ ಲಭ್ಯವಿರುವ ಜಾಗದ ಮಾಹಿತಿಯನ್ನು ಅಧಿಕಾರಿಗಳು ಸರ್ಕಾರದ ಗಮನಕ್ಕೆ ತರುವ ಮೂಲಕ ತಾಲೂಕಿನಲ್ಲಿ ಕ್ರೀಡಾಂಗಣ ನಿರ್ಮಾಣವಾಗಲು ಸಹಕರಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಗೋವಿಂದರಾಜು, ಪುಟ್ಟಸ್ವಾಮಿ, ರೇವಣ್ಣ, ರಮೇಶ್, ನಿತಿನ್ ಕಲ್ಯಾಣ ಮಂಟಪದ ಮಾಲೀಕ ಸುರೇಶ್ ಹಾಜರಿದ್ದರು.

ಕ್ರೀಡಾಂಗಣಕ್ಕೆ ಸಾಕಷ್ಟು ಸ್ಥಳವಿದೆ

ತಾಲೂಕಿನ ಅಧಿಕಾರಿಗಳು ಕ್ರೀಡಾಂಗಣ ನಿರ್ಮಾಣಕ್ಕೆ ಜಾಗದ ಸಮಸ್ಯೆ ಇದೆ ಎಂದು ಹೇಳುತ್ತಿದ್ದಾರೆ. ಆದರೆ ತಾಲೂಕಿನಲ್ಲಿ ವಿಶಾಲವಾದ ಕ್ರೀಡಾಂಗಣ ನಿರ್ಮಾಣಕ್ಕೆ ಸಾಕಷ್ಟು ಸ್ಥಳವಿದೆ. ತಾಲೂಕಿನ ಬನ್ನಳ್ಳಿ ಗ್ರಾಮದ ವಸಂತ್ ರೈಸ್‌ಮಿಲ್ ಹಿಂಭಾಗದ ಸರ್ವೇ ನಂ.92ರಲ್ಲಿ 64.16 ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಇದ್ದು, ಈ ಪೈಕಿ 41.01 ಎಕರೆ ಭೂಮಿ ಖಾತೆದಾರರ ಹೆಸರಿನಲ್ಲಿದೆ. ಅದನ್ನು ಹೊರತುಪಡಿಸಿ 23.15 ಎಕರೆ ಬಿ.ಖರಾಬು ಎಂದು ಆರ್‌ಟಿಸಿಯಲ್ಲಿ ನಮೂದಾಗಿದ್ದು, ತಿ.ನರಸೀಪುರಕ್ಕೆ 4 ಕಿಮೀ ದೂರದಲ್ಲಿರುವ ಈ ಜಾಗವನ್ನು ಕ್ರೀಡಾಂಗಣಕ್ಕೆ ಬಳಸಿಕೊಳ್ಳಬಹುದಾಗಿದೆ. ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತವಾಗಿದ್ದಲ್ಲಿ ಸರ್ಕಾರಕ್ಕೆ ವರದಿ ನೀಡಬೇಕು. – ಸಂತೃಪ್ತಿ ಕುಮಾರ್.

ಸಿ.ಎನ್.ದೊಡ್ಡಲಿಂಗೇಗೌಡ ನಿಧನ



ತಿ.ನರಸೀಪುರ, ಮಾ.11– ಪಟ್ಟಣದ ಹಿರಿಯ ವಕೀಲ ಸಿ.ಎನ್.ದೊಡ್ಡಲಿಂಗೇಗೌಡ(90) ಬುಧವಾರ ಮುಂಜಾನೆ ನಿಧನರಾದರು.

ಮೂಲತಃ ತಾಲೂಕಿನ ಚಿದರಹಳ್ಳಿ ಗ್ರಾಮದ ನಿವಾಸಿ ದೊಡ್ಡಲಿಂಗೇಗೌಡರು ತಾಲೂಕಿನ ಹಿರಿಯ ವಕೀಲರಾಗಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ, ಮೈಸೂರು ಪೇಂಟ್ಸ್ ಹಾಗೂ ವಾರ್ನಿಶ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಮೃತರು ಪತ್ನಿ, ಪುತ್ರರಾದ ಜಗದೀಶ್, ಸಿ.ಡಿ.ಕೃಷ್ಣ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರ್ತಿ



ಹುಣಸೂರು, ಮಾ.11– ನಗರದ ಕಲ್ಕುಣಿಕೆ ಅರಳಿಮರದ ಪಕ್ಕದ ನಿವಾಸಿ ಮೂರ್ತಿ(55) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ನಗರದ ಜೆಎಸ್‌ಎಸ್ ವಿದ್ಯಾಸಂಸ್ಥೆ ಹಿಂಭಾಗದಲ್ಲಿರುವ ವಿಶ್ವಕರ್ಮ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರಿಯಮ್ಮ



ಹುಣಸೂರು, ಮಾ.11– ತಾಲೂಕಿನ ಮುದಗನೂರು ಗ್ರಾಮದ ನಿವಾಸಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಸದಸ್ಯೆ ಮರಿಯಮ್ಮ(85) ಮಂಗಳವಾರ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲೋಕಸಭಾ ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸೋಲು!

ರಾಹುಲ್ ಗಾಂಧಿ ವಿರುದ್ಧ ಅಮಿತ್ ಶಾ ಗುಡುಗು

ನವದೆಹಲಿ: ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರ ಕಾರ್ಯಚಟುವಟಿಕೆಗಳು ಸದನದಲ್ಲಿ ನಿಷ್ಪಕ್ಷಪಾತತೆಯಿಂದ ಕೂಡಿಲ್ಲ ಎನ್ನುತ್ತಾ, ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸುವಂತೆ ಕೋರಿ ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವು ತಿರಸ್ಕಾರವಾಗಿದೆ. ಇನ್ನು ಮತದಾನದ ನಂತರ, ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಗಿದ್ದು, ನಾಳೆ ಬೆಳಿಗ್ಗೆ 11 ಗಂಟೆಗೆ ಸದನ ಮತ್ತೆ ಸಭೆ ಸೇರಲಿದೆ.

ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ದುರದೃಷ್ಟಕರ: ಸಂಸತ್ತಿನಲ್ಲಿ ನಡೆದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಸ್ಪೀಕರ್ ಅವರು ಆಡಳಿತ ಮತ್ತು ವಿರೋಧ ಪಕ್ಷ ಎರಡನ್ನೂ ಪ್ರತಿನಿಧಿಸುವ ತಟಸ್ಥ ಪಾಲಕರಾಗಿ ಸದನದ ಸೇವೆ ಸಲ್ಲಿಸುತ್ತಾರೆ ಎಂದರು. ಈ ಸದನದ ಸ್ಥಾಪಿತ ಇತಿಹಾಸದ ಪ್ರಕಾರ, ಅದರ ಕಲಾಪಗಳು ಪರಸ್ಪರ ನಂಬಿಕೆಯ ಆಧಾರದ ಮೇಲೆ ನಡೆಯುತ್ತವೆ. ಅದರಂತೆ, ಸ್ಪೀಕರ್ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡನ್ನೂ ಪ್ರತಿನಿಧಿಸುವ ತಟಸ್ಥ ಪಾಲಕರಾಗಿ ಸೇವೆ ಸಲ್ಲಿಸುತ್ತಾರೆ. ಸ್ಪೀಕರ್ ಪದಚ್ಯುತಿಗೆ ನಿರ್ಣಯ ಬಂದಿರುವುದು ಸಂಸದೀಯ ರಾಜಕೀಯಕ್ಕೆ ದುರದೃಷ್ಟಕರ ಎಂದು ಅವರು ಹೇಳಿದರು.

ಮುಂದುವರೆದು, ಭಾರತದ ಸಂಸದೀಯ ಇತಿಹಾಸದಲ್ಲಿ ಲೋಕಸಭಾ ಸ್ಪೀಕರ್ ವಿರುದ್ಧ ಇಂತಹ ನಿರ್ಣಯಗಳು ಅತ್ಯಂತ ಅಪರೂಪ ಎಂದ ಶಾ, ಅಂತಹ ಕೊನೆಯ ಪ್ರಯತ್ನದ ಸುಮಾರು ನಾಲ್ಕು ದಶಕಗಳ ನಂತರ ಪ್ರಸ್ತುತ ನಿರ್ಣಯ ಬಂದಿದೆ ಎಂದರು. ಇದರೊಂದಿಗೆ, ಬಿಜೆಪಿ ಹಲವು ವರ್ಷಗಳ ಕಾಲ ವಿರೋಧ ಪಕ್ಷದಲ್ಲಿತ್ತು ಆದರೆ ಸ್ಪೀಕರ್ ವಿರುದ್ಧ ಎಂದಿಗೂ ಅವಿಶ್ವಾಸ ನಿರ್ಣಯ ಮಂಡಿಸಿರಲಿಲ್ಲ ಎನ್ನುವ ಮೂಲಕ ಸದನದ ಗಮನಸೆಳೆದರು.

ಸದನಕ್ಕೆ ಆಬ್ಸೆಂಟ್ ಆಗೋದ್ರಲ್ಲಿ ರಾಹುಲ್ ಎತ್ತಿದ ಕೈ: ಕಾಂಗ್ರೆಸ್ ವರಿಷ್ಠ ಹಾಗೂ ವಿಪಕ್ಷ ನಾಯಕ ರಾಹುಲ್ ಗಾಂಧಿಯವರ ಹಳೆಯ ವರ್ತನೆಗಳನ್ನು ಉಲ್ಲೇಖಿಸಿ ಟೀಕಿಸಿದ ಗೃಹ ಸಚಿವ ಅಮಿತ್ ಶಾ ಅವರು, ಪಕ್ಷದ ಉದ್ದೇಶಗಳಿಗಾಗಿ ಮತ್ತು ಪ್ರಚಾರಕ್ಕಾಗಿ ರಾಹುಲ್ ಗಾಂಧಿ ವಿವಿಧ ಸ್ಥಳಗಳಿಗೆ ಪ್ರಯಾಣಿಸುತ್ತಾರೆ. ಆದರೆ ಸದನಕ್ಕೆ ಮಾತ್ರ ಗೈರು ಹಾಜರಾಗುತ್ತಾರೆ ಎನ್ನುತ್ತಾ, 17ನೇ ಲೋಕಸಭೆಯಲ್ಲಿ ರಾಹುಲ್ ಗಾಂಧಿಯವರ ಹಾಜರಾತಿ 51% ರಷ್ಟಿದ್ದರೆ, ಸದನದ ಸರಾಸರಿ 66% ರಷ್ಟಿತ್ತು; 16 ನೇ ಲೋಕಸಭೆಯಲ್ಲಿ ಅವರ ಹಾಜರಾತಿ 52% ರಷ್ಟಿತ್ತು, ಆದರೆ ಸರಾಸರಿ 80% ರಷ್ಟಿತ್ತು ಎಂದರು.

ಬಂದ್ರೂ ಕಣ್ಣು ಮಿಟುಕಿಸಿ, ಫ್ಲೈಯಿಂಗ್ ಕಿಸ್ ನೀಡುತ್ತಾರೆ: ಮುಂದುವರೆದು, ರಾಹುಲ್ ಸದನಕ್ಕೆ ಬಂದರೂ ಕೆಲವೊಮ್ಮೆ ಸದಸ್ಯರ ಕಡೆ ಕಣ್ಣು ಹೊಡೆಯುತ್ತಾರೆ, ಇನ್ನೂ ಕೆಲವೊಮ್ಮೆ ಫ್ಲೈಯಿಂಗ್ ಕಿಸ್ ನೀಡುತ್ತಾರೆ, ಮತ್ತೆ ಕೆಲವೊಮ್ಮೆ ಹೋಗಿ ಪ್ರಧಾನಿಯವರನ್ನು ತಬ್ಬಿಕೊಳ್ಳುತ್ತಾರೆ ಎನ್ನುವ ಮೂಲಕ ರಾಹುಲ್ ಗಾಂಧಿಯವರ ಸಂಸದೀಯ ನಡವಳಿಕೆಯನ್ನು ಪ್ರಶ್ನಿಸಿದರು. ಈ ಸದನವು ದೇಶದ ಕೋಟ್ಯಂತರ ಜನರ ಭವಿಷ್ಯವನ್ನು ನಿರ್ಧರಿಸುವ ಪವಿತ್ರ ಸ್ಥಳವಾಗಿದೆ. ಆದರೆ ಇಲ್ಲಿ ಕೆಲವರು ಗಂಭೀರ ಚರ್ಚೆ ಬಿಟ್ಟು ನಾಟಕೀಯ ವರ್ತನೆಗಳನ್ನು ಮಾಡುತ್ತಿದ್ದಾರೆ. ಇದು ಸಂಸತ್ತಿನ ಘನತೆಗೆ ತಕ್ಕುದಲ್ಲ ಎಂದು ಕುಟುಕಿದರು.



ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸುವಂತೆ ಕೋರಿ ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವು ತಿರಸ್ಕಾರವಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಒಡಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಮೆಜೆಸ್ಟಿಕ್–2 (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓರಿಯೋ (ಕ) + ಜಯಕೃಷ್ಣ (ಕ)	2+2 ಪ್ರದರ್ಶನಗಳು

ಪರಿಷತ್ತು ಖಾಲಿ... ಖಾಲಿ...: ಸಭಾಪತಿ ಬಸವರಾಜ ಹೊರಟ್ಟಿ ಗರಂ

ಬೆಂಗಳೂರು: ವಿಧಾನ ಪರಿಷತ್ತಿನ ಬುಧವಾರದ ಕಲಾಪದ ವೇಳೆ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಇದ್ದರು. ಎರಡೂ ಕಡೆಯ ಕುರ್ಚಿಗಳು ಖಾಲಿ ಇರುವುದನ್ನು ಗಮನಿಸಿದ ಸಭಾಪತಿ ಬಸವರಾಜ ಹೊರಟ್ಟಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಮಧ್ಯಾಹ್ನ 3.15ಕ್ಕೆ ಆರಂಭವಾಗಬೇಕಿದ್ದ ಕಲಾಪವು, ಕೋರಂ ಕೊರತೆಯಿಂದ 3.40ಕ್ಕೆ ಆರಂಭವಾಯಿತು. ಕಲಾಪ ಕೊನೆಯಾಗುವ ಹೊತ್ತಿಗೆ ಆಡಳಿತ ಮತ್ತು ವಿರೋಧ ಪಕ್ಷಗಳ ಬೆರಳೆಣಿಕೆಯ ಸದಸ್ಯರಷ್ಟೇ ಇದ್ದರು.

ಸಭಾನಾಯಕ ಎಸ್.ಎನ್.ಬೋಸರಾಜು, ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರನ್ನು ನಿಲ್ಲಿಸಿದ ಹೊರಟ್ಟಿ ಅವರು, ಸದನ ಯಾರಿಗಾಗಿ ನಡೆಸಬೇಕು ಎಂದು ಪ್ರಶ್ನಿಸಿದರು. ಸದಸ್ಯರು ಕಲಾಪಕ್ಕೆ ಬರುವಂತೆ ನೋಡಿಕೊಳ್ಳುವುದು ನಿಮ್ಮೆಲ್ಲರ ಜವಾಬ್ದಾರಿ ಎಂದು ತಾಕೀತು ಮಾಡಿದರು.

ಜೀರ್ಣೋದ್ಧಾರ ಕಾರ್ಯಕ್ರಮ



ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಕಸುವಿನಹಳ್ಳಿ ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ಪುರಾತನ ಶ್ರೀ ನಾರಾಯಣಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮ ಶ್ರೀ ನಾರಾಯಣಸ್ವಾಮಿ ಜೀರ್ಣೋದ್ಧಾರ ಸಮಿತಿ, ಗ್ರಾಮದ ಮುಖ್ಯಸ್ಥರು, ಅಕ್ಕಪಕ್ಕದ ಗ್ರಾಮಸ್ಥರು ಹಾಗೂ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ಜರುಗಿತು. ಈ ಸಂದರ್ಭದಲ್ಲಿ ನೂತನ ವಿಮಾನ ಗೋಪುರದ ಕುಂಭಾಭಿಷೇಕ, ಕಳಸರೋಹಣ, ಉತ್ಸವಗಳು ಹಾಗೂ ಧಾರ್ಮಿಕ ಕೈಂಕರ್ಯಗಳು ಶ್ರದ್ಧಾ ಭಕ್ತಿಯಿಂದ ನಡೆದವು. ಆಗಮಿಸಿದ ಭಕ್ತರಿಗೆಲ್ಲರಿಗೂ ಅಚ್ಚುಕಟ್ಟಾದ ಪ್ರಸಾದ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತು.

ಕೇಂದ್ರ ಸರ್ಕಾರದ ನಿಯೋಗದಿಂದ ಕೆಇಎ ಪರೀಕ್ಷಾ ವ್ಯವಸ್ಥೆ ಅಧ್ಯಯನ

ಬೆಂಗಳೂರು, ಮಾ.11– ವೆಬ್ ಕಾಸ್ಟಿಂಗ್ ಹಾಗೂ ಮುಖ ಚಹರೆ ಪತ್ತೆ ತಂತ್ರಜ್ಞಾನ ಬಳಸಿ ಕೊಂಡು ಅತ್ಯಂತ ಪಾರದರ್ಶಕವಾಗಿ ವಿವಿಧ ಪರೀಕ್ಷೆಗಳನ್ನು ನಡೆಸುತ್ತಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಇಲ್ಲಿನ ಕಚೇರಿಗೆ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳ ನಿಯೋಗ ಬುಧವಾರ ಭೇಟಿ ನೀಡಿ ಸಮಗ್ರ ಪರೀಕ್ಷಾ ವ್ಯವಸ್ಥೆ ಬಗ್ಗೆ ಮಾಹಿತಿ ಪಡೆಯಿತು.



ಭಾರತ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳಾದ ರಮಣ್ ಕುಮಾರ್ ಮತ್ತು ಕೆ.ಮನೋಜ್ ಅವರ ನಿಯೋಗದ ಜೊತೆ ಚಿತ್ರದುರ್ಗ ಜಿಪಂ ಸಿಇಒ ಡಾ.ಆಕಾಶ್ ಕೂಡ ಹಾಜರಿದ್ದರು.

ಆಧುನಿಕ ತಂತ್ರಜ್ಞಾನ ಬಳಸಿ ಕೊಂಡು ಪರೀಕ್ಷಾ ಅಕ್ರಮಗಳಿಗೆ ಹೇಗೆ ಕಡಿವಾಣ ಹಾಕಲಾಗಿದೆ ಎಂಬುದರ ಬಗ್ಗೆ ನಿಯೋಗಕ್ಕೆ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಅವರು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು.

ವೆಬ್ ಕಾಸ್ಟಿಂಗ್, ಅಭ್ಯರ್ಥಿಯು ಪರೀಕ್ಷಾ ಕೇಂದ್ರಕ್ಕೆ ಬಂದ ನಂತರ ನಡೆಸುವ ತಪಾಸಣೆ, ಮುಖ ಚಹರೆ ಪತ್ತೆ ಮೂಲಕ ಅಭ್ಯರ್ಥಿಯ ನೈಜತೆ ತಿಳಿಯುವುದು, ಹಾಜರಾತಿ, ಪರೀಕ್ಷೆ ಮುಗಿದ ತಕ್ಷಣ ಉತ್ತರ ಪತ್ರಿಕೆಗಳ ಸ್ಕ್ಯಾನಿಂಗ್ ಹಾಗೂ ಫಲಿತಾಂಶ ಪ್ರಕಟಣೆ– ಇಷ್ಟೂ ಹಂತಗಳ ಬಗ್ಗೆ ಮಾಹಿತಿ ನೀಡಲಾಯಿತು.

ಕೇಂದ್ರದ ನಿಯೋಗವು ವಿವಿಧ ರಾಜ್ಯಗಳ ಪರೀಕ್ಷಾ ವ್ಯವಸ್ಥೆಯನ್ನು ಅಧ್ಯಯನ ಮಾಡುತ್ತಿದ್ದು, ಉತ್ತಮ ಕಾರ್ಯವಿಧಾನಗಳನ್ನು ರಾಷ್ಟ್ರ ಮಟ್ಟದಲ್ಲಿ ನೀತಿ ನಿಯಮ ರೂಪಿಸುವ ಸಂದರ್ಭದಲ್ಲಿ ಅಳವಡಿಸಿಕೊಳ್ಳುವ ಉದ್ದೇಶದಿಂದ ಈ ಭೇಟಿ ಮಾಡಿದೆ ಎಂದು ಇಸ್ಲಾವುದ್ದೀನ್ ಗದ್ಯಾಳ ಅವರು ತಿಳಿಸಿದರು.

ಪ್ರಾಧಿಕಾರ ಅಳವಡಿಸಿಕೊಂಡಿರುವ ಆಧುನಿಕ ಪರೀಕ್ಷಾ ವಿಧಾನಗಳ ಬಗ್ಗೆ ನಿಯೋಗವು ಮೆಚ್ಚುಗೆ ವ್ಯಕ್ತಪಡಿಸಿತು ಎಂದು ಅವರು ಹೇಳಿದ್ದಾರೆ.

ಯುಗಾದಿ ಹಬ್ಬದ ಅಂಗವಾಗಿ

ಒಂಟಿಕೊಪ್ಪಲ್ ಪಂಚಾಂಗ ವಿತರಣೆ



ಪಂಚಾಂಗ ವಿತರಣಾ ಕಾರ್ಯಕ್ರಮಕ್ಕೆ ಶೆಲ್ವಪಿಳ್ಳೈ ಅಯ್ಯಂಗಾರ್ ಚಾಲನೆ ನೀಡಿದರು.

ಮೈಸೂರು, ಮಾ.11– ಇಂದಿನ ಯುವ ಪೀಳಿಗೆ ಹೆಚ್ಚಾಗಿ ಪಂಚಾಂಗ ಓದಿ ಸನಾತನ ಧರ್ಮದ ಮಹತ್ವ ತಿಳಿದುಕೊಳ್ಳಬೇಕು ಎಂದು ಇತಿಹಾಸ ತಜ್ಞರಾದ ಶೆಲ್ವಪಿಳ್ಳೈ ಅಯ್ಯಂಗಾರ್ ತಿಳಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಗಣಪತಿ ದೇವಸ್ಥಾನದಲ್ಲಿ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಪರಿಷತ್ ಹಾಗೂ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಚಾಂದ್ರಮಾನ ಯುಗಾದಿ ಹಬ್ಬದ ಅಂಗವಾಗಿ ಒಂಟಿಕೊಪ್ಪಲ್ ಪಂಚಾಂಗಕ್ಕೆ ಪೂಜೆ ಸಲ್ಲಿಸಿ ನಂತರ ಪಂಚಾಂಗ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಭೂಮಿಯಲ್ಲಿ ನಡೆಯುವ ಪ್ರತಿಯೊಂದು ಆಚರಣೆಗಳು ಬೆಳವಣಿಗೆಗಳ ಬಗ್ಗೆ ಮೊದಲೇ ಕಾಲನಿರ್ಣಯ ಪ್ರಕಾರವಾಗಿ ಪಂಚಾಂಗದಲ್ಲಿ ಉಲ್ಲೇಖಿತವಾಗಿರುತ್ತದೆ. ಪಂಚಾಂಗದಲ್ಲಿ ಮಾಸ,ಪಕ್ಷ,ತಿಥಿ, ನಕ್ಷತ್ರಗಳಿಗೆ ಕಾಲನಿರ್ಣಯದಂತೆ ಹಿಂದೂಗಳು ಪಾಲಿಸುವಂತಾಗಬೇಕಿದೆ ನಮ್ಮ ಹಿಂದೂ ಸನಾತನ ಸಂಪ್ರದಾಯದಲ್ಲಿ ಪಂಚಾಂಗ ಶ್ರವಣ ಮತ್ತು ಪಂಚಾಂಗದಂತೆ ಮುಹೂರ್ತ ಪಾಲಿಸುವುದಕ್ಕೆ ರಾಮಾಯಣ ಮಹಾಭಾರತ ಕಾಲದಿಂದಲೂ ಸಹ ಸಾವಿರಾರು ವರ್ಷಗಳ ಇತಿಹಾಸವಿದೆ. ಇಂದಿನ ಯುವ ಪೀಳಿಗೆ ಹೆಚ್ಚಾಗಿ ಪಂಚಾಂಗ ಓದಿ ಸನಾತನ ಧರ್ಮದ ಮಹತ್ವ ತಿಳಿದುಕೊಳ್ಳಬೇಕು ಎಂದರು.

ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ ಮಾತನಾಡಿ, ಸೂರ್ಯಮಂಡಲದಲ್ಲಿ ನಡೆಯುವ ಗ್ರಹಣ ಮತ್ತು ಪ್ರವಾಹಗಳು ಯುದ್ಧದ ಬಗ್ಗೆಯು ಸಹ ಪಂಚಾಂಗದಲ್ಲಿ ಮೊದಲೇ ಬರೆದಿರುತ್ತಾರೆ ಎಂದರೆ ಇದರಲ್ಲಿರುವ ಜ್ಯೋತಿಷ್ಯ ವಿಜ್ಞಾನದ ಶಕ್ತಿ, ಒಂಟಿಕೊಪ್ಪಲ್ ಪಂಚಾಂಗಕ್ಕೆ ವಿದೇಶದಲ್ಲೂ ಸಹ ಭಾರಿ ಬೇಡಿಕೆಯಿದ್ದು ಗ್ರಾಮದೇವರ ಜಾತ್ರೆಯಿಂದ ಶಾಂತಿ ಮಂತ್ರದವರೆಗೂ ಮಾಹಿತಿಗಳಿವೆ ಸಮಸ್ಥ ಜೀವಸಂಕುಲಕ್ಕೂ ಪಂಚಾಂಗ ಉಪಯುಕ್ತವಾಗಿದೆ ಎಂದರು.

ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ಕಡಕೊಳ ಜಗದೀಶ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಜತ್ತಿ ಪ್ರಸಾದ್, ಪುರೋಹಿತರಾದ ಸೋಮಶೇಖರ್, ರಾಧಾಕೃಷ್ಣ, ಗುರುಪ್ರಸಾದ್, ಉದಯ್, ಇನ್ನಿತರರು ಇದ್ದರು.

ಜಾನಪದ ಎಂದರೆ ಗಿಳಿಪಾಠವಲ್ಲ; ನೋಡಿ ಕಲಿಯುವಂಥದ್ದು

ಪದ ಜನಪದ ಕಾರ್ಯಾಗಾರ ಸಮಾರೋಪ, ಸಾಧಕರಿಗೆ ಸ್ತ್ರೀರತ್ನ ಪ್ರಶಸ್ತಿ ಪ್ರದಾನ

ಮೈಸೂರು, ಮಾ.11– ಜಾನಪದ ಎಂದರೆ ಗಿಳಿಪಾಠವಲ್ಲ, ನೋಡಿ ಕಲಿಯುವಂಥದ್ದು ಎಂದು ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಮೈಸೂರು ಗುರುರಾಜ್ ಹೇಳಿದರು.

ನಾಟ್ಯ ಪ್ರದರ್ಶಕ ಕಲೆಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರವು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಬುಧವಾರ ಏರ್ಪಡಿಸಿದ್ದ ಪದ ಜನಪದ– ಉಚಿತ ಜಾನಪದ ಗೀತೆ, ನೃತ್ಯ ಮತ್ತು ವಾದ್ಯ ಕಲಿಕೆ ಕಾರ್ಯಾಗಾರ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶಾಸ್ತ್ರ ಹೇಳುವವನಿಗೆ ಗಿಳಿ ಯಾವುದೋ ಒಂದು ಕಾರ್ಡ್ ಎತ್ತಿಕೊಡುತ್ತದೆ. ನಂತರ ಅಲ್ಲಿರುವ ವ್ಯಕ್ತಿ ತನಗೆ ತೋಚಿದ್ದನ್ನು ಹೇಳುತ್ತಾನೆ. ಅದೇ ರೀತಿ ಜಾನಪದವನ್ನು ತರಗತಿಯಲ್ಲಿ ಕುಳಿತು ಕಲಿಯುವಂಥದ್ದಲ್ಲ. ಬದಲಿಗೆ ನೋಡಿ ಕಲಿಯುವಂಥದ್ದು ಎಂದರು.

ನಮ್ಮ ಜಾನಪದ ಬಾಯಿಂದ ಬಾಯಿಗೆ ಹರಡಿ, ಬೆಳೆದು ಬಂದಿದೆ. ಬಾಲ್ಯದಿಂದಲೇ ನಾವು ನೋಡಿ ಕಲಿಯುವಂಥದ್ದು, ಅದನ್ನು ಉಳಿಸಿ, ಬೆಳೆಸಬೇಕು ಎಂದ ಅವರು, ನಾಟ್ಯ ಸಂಸ್ಥೆಯು ಯಾವುದೇ ಶುಲ್ಕ ಪಡೆಯದೇ ಜಾನಪದವನ್ನು ಉಚಿತವಾಗಿ ಕಲಿಸಿದ್ದನ್ನು ಕೇಳಿ ಸಂತಸವಾಯಿತು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಆಯುರ್ ಮಟಮ್ ಮುಖ್ಯಸ್ಥ ಡಾ. ಮನು ಬಿ.ಮೆನನ್ ಮುಖ್ಯಅತಿಥಿಗಳಾಗಿದ್ದರು. ನಾಟ್ಯ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಸಂತೋಷ್ ಕಲಾವಿದ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷೆ ಎನ್. ಪವಿತ್ರಾ, ಖ್ಯಾತ ಗಾಯಕರಾದ ಲಕ್ಷ್ಮೀರಾಂ ನಾಡಪ್ಪನಹಳ್ಳಿ, ಅಮ್ಮ ರಾಮಚಂದ್ರ, ದೇವಾನಂದ ವರಪ್ರಸಾದ್, ಸಿ. ಸುಂದರೇಶ್ ಉಪಸ್ಥಿತರಿದ್ದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಿರ್ಮಲಾ–ಶಿಕ್ಷಣ, ಸೌಮ್ಯಾ –ಸಮಾಜಸೇವೆ, ಎನ್.ಆರ್. ರೂಪಶ್ರೀ– ಸಾಹಿತ್ಯ, ಶಾಂಭವಿ ಸ್ವಾಮಿ– ಭರತನಾಟ್ಯ, ಆಶಾ– ವೈದ್ಯಕೀಯ ಕ್ಷೇತ್ರ ಅವರಿಗೆ ಸ್ತ್ರೀರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಾಟ್ಯ ಸಂಸ್ಥೆಯು ಆಶಾ. ಎನ್.ಆರ್. ರೂಪಶ್ರೀ, ಸೌಮ್ಯಾ ಹಾಗೂ ನಿರ್ಮಲಾ ಅವರಿಗೆ ಸ್ತ್ರೀರತ್ನ ಪ್ರಶಸ್ತಿ ಪ್ರದಾನ ಮಾಡಿತು.

30,366 ಲೀಟರ್ ಬಿಯರ್ ನಾಶ



ಕೆ.ಎಸ್.ಬಿ.ಸಿ.ಎಲ್. ಮೈಸೂರು ಡಿಪೋ–1 ಹಾಗೂ ಕೆ.ಎಸ್.ಬಿ.ಸಿ.ಎಲ್. ಮೈಸೂರು ಡಿಪೋ–2 ನಲ್ಲಿ ಮಾರಾಟವಾಗದೇ ಉಳಿದಿದ್ದ ವಿವಿಧ ಮಾದರಿಯ ಒಟ್ಟು 30,366 ಲೀಟರ್ ಬಿಯರನ್ನು ಕೂರ್ಗಳ್ಳಿ ಡಿಪೋನಲ್ಲಿ ಮೈಸೂರು ನಗರ ಅಬಕಾರಿ ಉಪ ಅಧೀಕ್ಷಕರ ಆದೇಶದ ಮೇರೆಗೆ ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಹೆಚ್.ಕೆ.ರಮೇಶ್ ನೇತೃತ್ವದಲ್ಲಿ ನಾಶಪಡಿಸಲಾಯಿತು. ಈ ಸಂದರ್ಭದಲ್ಲಿ ಕೆ.ಎಸ್.ಬಿ.ಸಿ.ಎಲ್. ಮೈಸೂರು ಡಿಪೋ–1 ಹಾಗೂ 2 ರ ವ್ಯವಸ್ಥಾಪಕರು, ಅಬಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.


ಮಕ್ಕಳ ಅಶ್ಲೀಲ ಚಿತ್ರವು ಮೊಬೈಲ್ ಸ್ಟೋರೇಜ್ ಬಾಕ್ಸ್‌ನಲ್ಲಿದ್ದರೂ ಅಪರಾಧ: ಹೈಕೋರ್ಟ್

ಬೆಂಗಳೂರು, ಮಾ.11– ನನ್ನ ಮೊಬೈಲ್‌ನಲ್ಲಿರುವ ಮಕ್ಕಳ ಅಶ್ಲೀಲ ಚಿತ್ರ ಮತ್ತು ವೀಡಿಯೊಗಳನ್ನು ನಾನು ಯಾರಿಗೂ ಫಾರ್ವರ್ಡ್ ಮಾಡಿಲ್ಲ. ಹಾಗೇ ಸ್ಟೋರೇಜ್ ಬಾಕ್ಸ್‌ನಲ್ಲಿ ಉಳಿಸಿಕೊಂಡಿದ್ದೇನೆ ಎಂದು ಹೇಳಿದರೆ ಪ್ರಯೋಜನವಿಲ್ಲ ನಿಮ್ಮ ಮೊಬೈಲ್ ಫೋನ್‌ನಲ್ಲಿ ಅಥವಾ ಇನ್ನಾವುದೇ ಎಲೆಕ್ಟ್ರಾನಿಕ್ ರೂಪದಲ್ಲಿ ಮಕ್ಕಳನ್ನು ಅಶ್ಲೀಲ, ಅಸಭ್ಯ ಅಥವಾ ಲೈಂಗಿಕ ರೀತಿಯಲ್ಲಿ ಚಿತ್ರಿಸಿರುವುದು ಉಳಿದುಕೊಂಡಿದ್ದರೂ ಜೈಲಿಗೆ ಹೋಗುವುದು ಖಚಿತ..!

ತಮ್ಮ ಮೊಬೈಲ್‌ನಲ್ಲಿ ಹೇರಳವಾಗಿ ಮಕ್ಕಳ ಅಶ್ಲೀಲ ಚಿತ್ರ ಮತ್ತು ವೀಡಿಯೊಗಳನ್ನು ಸಂಗ್ರಹಿಸಿದ್ದ ವ್ಯಕ್ತಿಯೊಬ್ಬರ ವಿರುದ್ಧದ ವಿಚಾರಣೆ ರದ್ದುಗೊಳಿಸಲು ನಿರಾಕರಿಸಿರುವ ಹೈಕೋರ್ಟ್, ಈ ವಿಷಯದಲ್ಲಿ ವಿನಾಯಿತಿ ನೀಡಲು ಸುತರಾಂ ಸಾಧ್ಯವಿಲ್ಲ ಎಂದು ನುಡಿದಿದೆ.

ನನ್ನ ವಿರುದ್ಧ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ತ್ವರಿತಗತಿ ನ್ಯಾಯಿಕ ಪ್ರಕ್ರಿಯೆಯ ವಿಶೇಷ ಕೋರ್ಟ್–1ರಲ್ಲಿರುವ (ಎಫ್‌ಟಿಎಸ್‌ಸಿ) ಕ್ರಿಮಿನಲ್ ಪ್ರಕರಣದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಕೇರಳದ ತ್ರಿಶೂರು ಜಿಲ್ಲೆಯ ಚೊಟ್ಟೂರು ಪುರ ಕಿಲ್ಲನೂರಿನ ಪಿ.ಜೆ.ಬಿನೋಜ್ (38) ಕರ್ನಾಟಕ ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕ ಸದಸ್ಯ ನ್ಯಾಯಪೀಠ, 2004ರ ಸುಪ್ರೀಂ ಕೋರ್ಟ್‌ನ ಜಸ್ಟ್ ರೈಟ್ಸ್ ಫಾರ್ ಚಿಲ್ಡ್ರನ್ ಅಲೈಯನ್ಸ್ ವರ್ಸಸ್ ಎಸ್.ಹರೀಶ್ ಪ್ರಕರಣದ ತೀರ್ಪು ಉಲ್ಲೇಖಿಸುವ ಮೂಲಕ, ಯಾವುದೇ ವ್ಯಕ್ತಿ ತನ್ನ ಮೊಬೈಲ್‌ನಲ್ಲಿ ಮಕ್ಕಳ ಅಶ್ಲೀಲ ಚಿತ್ರ ಅಥವಾ ವೀಡಿಯೊಗಳನ್ನು ಹೊಂದಿದ್ದು ಅವುಗಳನ್ನು ಪ್ರಸಾರ ಮಾಡಿಲ್ಲ ಎಂಬುದಕ್ಕೆ ಪುರಾವೆ ಇದೆ ಎಂದಾದರೆ ಅದು ನಿಶ್ಚಿತವಾಗಿ ಅಪರಾಧ ಎಂಬ ಶಾಸನದ ನಿಬಂಧನೆಗೆ ಮುದ್ರೆ ಒತ್ತಿದೆ.



ನನ್ನ ಮೊಬೈಲ್‌ನಲ್ಲಿ ಸಂಗ್ರಹಿಸಿರುವ ಚಿತ್ರಗಳನ್ನು ನಾನು ಯಾರೊಂದಿಗೂ ಹಂಚಿಕೊಂಡಿಲ್ಲ ಎಂಬ ಅರ್ಜಿದಾರರ ವಾದವನ್ನು ನ್ಯಾಯಪೀಠ ಸಾರಾಸಗಟಾಗಿ ತಳ್ಳಿ ಹಾಕಿದೆ.

ಅರ್ಜಿದಾರರ ವಿರುದ್ಧದ ಆರೋಪಗಳಿಗೆ ಪ್ರಾಸಿಕ್ಯೂಷನ್ ಪೂರಕ ಸಾಕ್ಷ್ಯಗಳನ್ನು ಮಂಡಿಸಿದೆ. ದಾಖಲೆಗಳು, ಆಪಾದಿತರು ಎಸಗಿರುವ ಅಪರಾಧ ದೃಢೀಕರಿಸುವ ಅಗತ್ಯ ಅಂಶಗಳನ್ನು ಬಹಿರಂಗಪಡಿಸಿವೆ. ಆದ್ದರಿಂದ, ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯಲ್ಲಿ ಅದೂ ಈ ಹಂತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಪ್ರಕರಣವೇನು: ಅಪರಾಧ ಪ್ರಕರಣವೊಂದರಲ್ಲಿ ಸಿಲುಕಿಕೊಂಡ ಅರ್ಜಿದಾರರ ಮೊಬೈಲ್ ಫೋನ್ ಅನ್ನು ಪೊಲೀಸರು ತನಿಖೆಯ ವೇಳೆ ವಶಕ್ಕೆ ಪಡೆದಿದ್ದರು. ಅದನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಿದಾಗ ಅದರ ಸ್ಟೋರೇಜ್ ಬಾಕ್ಸ್‌ನಲ್ಲಿ ಮಕ್ಕಳ ಅಶ್ಲೀಲ ಚಿತ್ರ ಮತ್ತು ವೀಡಿಯೊಗಳು ವಿಪುಲವಾಗಿ ಇದ್ದದ್ದು ಪತ್ತೆಯಾಗಿತ್ತು.

ಈ ಹಿನ್ನೆಲೆಯಲ್ಲಿ ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು, ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ (ಐಟಿ) ಕಲಂ 67(ಬಿ) ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012ರ (ಪೋಕ್ಸೊ) ಕಲಂ 15ರ ಅನ್ವಯ; ಮಕ್ಕಳ ಅಶ್ಲೀಲ ಚಿತ್ರಗಳ ರಚನೆ, ಬ್ರೌಸಿಂಗ್, ಸಂಗ್ರಹಣೆ ಮತ್ತು ಪ್ರಸರಣ ಶಿಕ್ಷಾರ್ಹ ಅಪರಾಧ ಎಂಬ ಅಂಶಗಳ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಿಸಿದ್ದರು.

ಈ ಕುರಿತಾದ ಅಧೀನ ನ್ಯಾಯಾಲಯದ ವಿಚಾರಣೆ ರದ್ದುಪಡಿಸುವಂತೆ ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಾಸಿಕ್ಯೂಷನ್ ಪರ ವಿನಯ್ ಮಹದೇವಯ್ಯ ವಾದ ಮಂಡಿಸಿದ್ದರು.

ಐಟಿ ಕಲಂ 67 ಬಿ ಏನು ಹೇಳುತ್ತದೆ: ಎಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ ವಿಷಯವನ್ನು ಪ್ರಕಟಿಸುವುದು, ರವಾನಿಸುವುದು; ಅದರಲ್ಲೂ ಮಕ್ಕಳಿಗೆ ಸಂಬಂಧಿಸಿದಂತೆ ಅಶ್ಲೀಲ ಪಠ್ಯ ಅಥವಾ ಡಿಜಿಟಲ್ ಚಿತ್ರಗಳನ್ನು ರಚಿಸುವುದು, ಸಂಗ್ರಹಿಸುವುದು, ಹುಡುಕುವುದು, ಬ್ರೌಸ್ ಮಾಡುವುದು, ಡೌನ್‌ಲೋಡ್ ಮಾಡುವುದು, ಜಾಹೀರುಗೊಳಿಸುವುದು, ಪ್ರಚಾರ ಮಾಡುವುದು, ವಿನಿಮಯ ಮಾಡಿಕೊಳ್ಳುವುದು ಅಪರಾಧ. ಇಂತಹ ಪ್ರಕರಣಗಳಲ್ಲಿ ವಿವಿಧ ಸ್ತರಗಳ ಅಪರಾಧ ಸ್ವರೂಪಕ್ಕೆ 5 ಸಾವಿರದಿಂದ 1 ಲಕ್ಷದವರೆಗೆ ದಂಡ ಮತ್ತು 3ರಿಂದ 7 ವರ್ಷಗಳವರೆಗೆ ವಿಸ್ತರಿಸಿದ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

ಹಿರಿಯ ಪತ್ರಕರ್ತ ಕೆಜೆ.ಕುಮಾರ್ ನಿಧನ



ಮೈಸೂರು,ಮಾ.11–ಮೈಸೂರಿನ ಹಿರಿಯ ಪತ್ರಕರ್ತ ಕೆ.ಜೆ.ಕುಮಾರ್ ಬುಧವಾರ ಸಂಜೆ ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 74 ವರ್ಷ ವಯಸ್ಸಾಗಿತ್ತು.

ಉಡುಪಿ ಜಿಲ್ಲೆ ಕೊರಂದರ ಪಾಳ್ಯದಲ್ಲಿ ರಘುರಾಮ್ ಶೆಟ್ಟಿ ಮತ್ತು ಶಾರದಾ ಅವರ ಜ್ಯೇಷ್ಠ ಪುತ್ರರಾಗಿ 1952, ನವಂಬರ್ 6ರಂದು ಜನಿಸಿದರು. ಸುಮಾರು 56 ವರ್ಷಗಳಿಂದ ಮೈಸೂರಿನ ಪ್ರಮುಖ ಪತ್ರಿಕಾ ವಿತರಕರಾಗಿ ಹಾಗೂ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿದ್ದರು.

1969ರಲ್ಲಿ ಸೋದರ ಮಾವ ಮಾಜಿ ವಿಧಾನಪರಿಷತ್ ಸದಸ್ಯ ಹಾಗೂ ಸ್ವತಂತ್ರ ಹೋರಾಟಗಾರ ಎ.ರಾಮಣ್ಣ ಸಂಪಾದಕತ್ವದ 'ವಿಜಯ' ದಿನ ಪತ್ರಿಕೆಯಲ್ಲಿ ಪತ್ರಕರ್ತರಾಗಿ ವೃತ್ತಿ ಬದುಕು ಆರಂಭಿಸಿದರು. ನಂತರ ವಿಜಯ ದಿನ ಪತ್ರಿಕೆ ಪ್ರಕಾಶಕ–ಮುದ್ರಕರಾಗಿದ್ದರು.

ನಂತರ ಅವರು ಸಿನಿಮಾ ಪತ್ರಕರ್ತರಾಗಿ 'ಸುಧಾ' ವಾರ ಪತ್ರಿಕೆ, ವಿಜಯ ಚಿತ್ರ ಸಿನಿಮಾ ಮಾಸ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ ನಂತರ, 1978ರಿಂದ 'ರೂಪತಾರಾ' ಸಿನಿಮಾ ಮಾಸಪತ್ರಿಕೆಗೆ ಮೂರೂ ದಶಕಗಳ ಕಾಲ ಪತ್ರಕರ್ತರಾಗಿ ಸೇವೆ ಸಲ್ಲಿಸಿದರು. 1993ರಲ್ಲಿ 'ಉದಯ ವಾಣಿ' ದಿನಪತ್ರಿಕೆ ಬೆಂಗಳೂರು ಆವೃತ್ತಿ ಆರಂಭವಾದಾಗ ಮೈಸೂರಿನ ಪ್ರತಿನಿಧಿಯಾಗಿ ಸುಮಾರು ಒಂದೂವರೆ ದಶಕಗಳ ಕಾಲ ಸೇವೆ ಸಲ್ಲಿಸಿದರು. ಕಳೆದ ಒಂದೂವರೆ ದಶಕಗಳಿಂದ 'ಹೊಸ ದಿಗಂತ' ದಿನಪತ್ರಿಕೆ ಸಿನಿಮಾ ವಿಭಾಗ ನೋಡಿಕೊಳ್ಳುತ್ತಿದ್ದರು. ಪತ್ರಿಕಾ ಕ್ಷೇತ್ರವಲ್ಲದೆ ಹೋಟೆಲ್ ಉದ್ಯಮದಲ್ಲೂ ತೊಡಗಿಸಿಕೊಂಡಿದ್ದ ಅವರು ಮೈಸೂರಿನ ಸರಸ್ವತಿಪುರಂನಲ್ಲಿ 'ಕುಠಿರ ಮನೆ' ಎಂಬ ಹೋಟೆಲ್ ಸ್ಥಾಪಿಸಿದ್ದರು.

ಕನ್ನಡ ಚಿತ್ರೋದ್ಯಮದಲ್ಲಿ ಪತ್ರಕರ್ತರಾಗಿ ಹೆಸರಾಗಿದ್ದ ಕೆ.ಜೆ.ಕುಮಾರ್, ಕನ್ನಡ ಚಿತ್ರರಂಗದ ದಿಗ್ಗಜರಾದ ಡಾ.ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಷ್, ರಜನಿ ಕಾಂತ್, ಶಶಿಕುಮಾರ್, ನಿರ್ಮಾಪಕರಾದ ದ್ವಾರಕೀಶ್, ವೀರಸ್ವಾಮಿ, ನಿರ್ದೇಶಕರಾದ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರೊಂದಿಗೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದರು.

ಶ್ರೀ ಯುತರು ಪತ್ನಿ ಉಷಾ, ಪುತ್ರಿ ಸುನಯ ಶೆಟ್ಟಿ, ಸೋದರಿ ಮಾಜಿ ನಗರ ಪಾಲಿಕೆ ಸದಸ್ಯೆ ಶ್ರೀಮತಿ ಪ್ರಮೀಳಾ ಪ್ರಕಾಶ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ನಾಳೆ ಮಧ್ಯಾಹ್ನ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

8ನೇ ವರ್ಷದ ಸವಿನೆನಪು



ಪೋಲೀಸ್ ನಾಗೇಗೌಡ (ASI)

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ಸವಿ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ: ಶ್ರೀಮತಿ ಬಸಮ್ಮ, ಸಹೋದರ: ಚಿಕ್ಕ ಬುದ್ದಿಗೌಡ, ಮಕ್ಕಳು, ಅಳಿಯಂದಿರು ಹಾಗೂ ಕುಟುಂಬವರ್ಗದವರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಜನನ 9-12-1980 ಮರಣ 12-3-2025

ಶ್ರೀ ಲೋಕೇಶ್ .ಬಿ

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನಮನಸ್ಸಿನಲ್ಲಿದೆ

ದುಃಖತಪ್ತರು:
ತಾಯಿ: ನಾಗರತ್ನಮ್ಮ, ಹೆಂಡತಿ: ನಿರ್ಮಲ ಬಿ.
ಮಕ್ಕಳು : ಪೃಥ್ವಿ, ಪ್ರೀತಮ್,ತಂಗಿ ಮತ್ತು ತಮ್ಮಂದಿರು
ಕುಟುಂಬವರ್ಗದವರು, ವಾಜಮಂಗಲ, ಮೈಸೂರು



NOT GETTING YOUR
STAR OF MYSORE
&
ಮೈಸೂರು ಮಿತ್ರ
Call:
98452-96447
99003-82840

PUBLIC NOTICE

Notice is hereby issued to the General Public that Sri. R. KUMARA, S/o. Sri. Ramashetty, Residing at # 848, Panchamantra Main Road, E & F Block, Kuvempunagar, Mysuru -570 023 has agreed to sell the schedule Property to my client/s. Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within TEN (10) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF THE LAND BEARING SURVEY NO. 779/3 MEASURING 08 GUNTAS, SITUATED AT HAROHALLI VILLAGE, VARUNA HOBLI, MYSURU TALUIC AND BOUNDED ON
EAST BY : LA. SA. No. 780 & Raja Kaluve
WEST BY : LA. SA. No. 728 & Road
NORTH BY : LA. HI. No. 779/2 & Property Belonging to Ganapathi Sachchidananda Ashram
SOUTH BY : LA. HI. No. 779/4 & Property belonging to N. Hemalatha

Sd/-M. Sanjay Jain,
B.B.M., LL.B. CCL, CMJFS
Advocate
No. L-50/2A, 1st Floor, Ashoka road,
Mysuru-570 001. Cell: 93414-64636
E-mail: msj186@yahoo.co.in
Date: 7.3.2026, Place: Mysuru

PUBLIC NOTICE

Notice is hereby issued to the General Public that M/S Sri. LAKSHMI INDUSTRIES, Rep by its Proprietor, Sri. R. KUMARA, S/o. Sri. Ramashetty, Residing at # 848, Panchamantra Main Road, E & F Block, Kuvempunagar, Mysuru — 570 023 has agreed to Sell the Schedule Property to my client/s. Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within TEN (10) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF THE LAND MEASURING TO THE EXTENT OF (01 ACRE 12 GUNTAS IN SY. NO. 782/1) i.e., ADMEASURING 5219.71 SQUARE METERS ALONG WITH SHED MEASURING 222.97 SQUARE METERS, SITUATED AT HAROHALLI (MELLAHALLI) VILLAGE, VARUNA HOBLI, MYSURU TALLUK AND THE RURAL DEVELOPMENT AND PANCHAYATI RAJ DEPARTMENT HAS ISSUED FORM NO. 09 & 11A VIDE UNIQUE NO. 152200410063000556 & CONVERTED FOR INDUSTRIAL PURPOSE VIDE ALIENATION ORDER NO. LCCP100435/2019 DATED 14/11/2019 ISSUED BY THE OFFICE OF DEPUTY COMMISSIONER, MYSORE DISTRICT, MYSORE & BOUNDED ON :-
EAST BY : Property Bearing Sy. No. 781
WEST BY : Road & Nala & Property Bearing Sy.No.787
NORTH BY : Property Bearing Sy.No.779/4 & 780
SOUTH BY : Property bearing Sy.No. 782/2

Sd/-M. Sanjay Jain,
B.B.M., LL.B. CCL, CMJFS
Advocate
No. L-50/2A, 1st Floor, Ashoka road,
Mysuru-570 001. Cell: 93414-64636
E-mail: msj186@yahoo.co.in
Date: 7.3.2026, Place: Mysuru

PUBLIC NOTICE

Notice is hereby issued to the General Public that Sri. P. V. SATHYA NARAYANA SETTY, S/o. Late. Puttu Venkataramana Setty, Residing at # 100-101, New No. L-298, Ashoka Road, Lashkar Mohalla, Mysuru – 570 001 has agreed to Sell the Schedule Property to my client/s.
Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within TEN (10) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF PROPERTY BEARING NO. 100, 101, 102 NEW NO. L-298, L-298/1, PID NO. 83385, MEASURING EAST TO WEST 115½ FEET (35.234 MTS) AND NORTH TO SOUTH 15½ FEET (4.75 MTS), COMPRISING OF MADRAS TARSI ROOFING RED OXIDE FLOORING BUILDING ON GROUND & FIRST FLOOR, SITUATED AT ASHOKA ROAD, LASHKAR MOHALLA, MYSURU & BOUNDED ON:
EAST BY : Conservancy Galli
WEST BY : Ashoka Road
NORTH BY : Private Property
SOUTH BY : Private Property

Sd/-M. Sanjay Jain,
B.B.M., LL.B. CCL, CMJFS
Advocate
No. L-50/2A, 1st Floor, Ashoka road,
Mysuru-570 001. Cell: 93414-64636
E-mail: msj186@yahoo.co.in
Date: 7.3.2026, Place: Mysuru

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



SHUBHAYATRA HOLIDAYS
Mysore Branch
CHARDHAM YATRA for 13 Days by Air
Booking Started
Mob: 74833-73991

WANTED
B.A./B.Sc./BCA
(D.Ed. / B.Ed. Mandatory)
SUNANDHA ACADEMY SCHOOL
Whatsapp: +91 99007 72235

G9 projects – Designing your Dreams | Vee2 Developers
POORVA SHELTERS
PHASE - I, II & III
Behind Marvel PU College
PRICE STARTS WITH ₹ 2,299/-SQ.FT
8055-004-400

PUBLIC NOTICE

Notice is hereby issued to the General Public that M/S DHANALAKSHMI INDUSTRIES, Rep by its Proprietrix Smt. N. HEMALATHA, W/o. Sri. R. Kumara, Residing at # 848, Panchamantra Main Road, E & F Block, Kuvempunagar, Mysuru - 570 023 has agreed to sell the schedule Property to my client/s.
Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within TEN (10) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF THE LAND MEASURING TO THE EXTENT OF (01 ACRE IN SY. NO. 779/4, 16 GUNTAS IN SY. NO. 782/2 AND 12 GUNTAS IN SY. NO. 782/5 {OLD SY. NO. 782/3}) i.e., ADMEASURING 6951.28 SQUARE METERS ALONG WITH SHED MEASURING 27.87 SQUARE METERS, SITUATED AT HAROHALLI (MELLAHALLI) VILLAGE, VARUNA HOBLI, MYSURU TALUK AND THE RURAL DEVELOPMENT AND PANCHAYATI RAJ DEPARTMENT HAS ISSUED FORM NO. 11B VIDE UNIQUE NO. 152200410063000549 & CONVERTED FOR INDUSTRIAL PURPOSE VIDE ALIENATION ORDER NO. ALN(3) C.R.27/2009-10 DATED 05/09/2009 ISSUED BY THE OFFICE OF DEPUTY COMMISSIONER, MYSORE DISTRICT, MYSORE & BOUNDED ON :-
EAST BY : Property Bearing Sy. No. 780
WEST BY : Road & Property Bearing Sy.No.787
NORTH BY : Property Bearing Sy.No.779/3
SOUTH BY : Property bearing Sy.No. 782/1

Sd/-M. Sanjay Jain,
B.B.M., LL.B. CCL, CMJFS
Advocate
No. L-50/2A, 1st Floor, Ashoka road,
Mysuru-570 001. Cell: 93414-64636
E-mail: msj186@yahoo.co.in
Date: 7.3.2026, Place: Mysuru

PUBLIC NOTICE

Notice is hereby issued to the General Public that (1) Sri. R. KUMARA, S/o. Sri. Ramashetty, Residing at # 848, Panchamantra Main Road, E & F Block, Kuvempunagar, Mysuru - 570 023 and (2) Sri. S. RAMESH, S/o. Late. K. Siddegowda, Residing at # 144, Mavinahalli, Siddappaji Devasthana Road, Jayapura Hobli, Mysuru Taluk have agreed to Sell the Schedule Property to my client/s. Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within TEN (10) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF THE LAND BEARING SURVEY NO. 93/1 (OLD SY. NO. 781/1) MEASURING 13 GUNTAS. SITUATED AT HAROHALLI VILLAGE, VARUNA HOBLI, MYSURU TALUK AND BOUNDED ON
EAST BY : Harohalli Channel Road
WEST BY : Water Flowing Stream
NORTH BY : Private Property
SOUTH BY : Water Flowing Stream

Sd/-M. Sanjay Jain,
B.B.M., LL.B. CCL, CMJFS
Advocate
No. L-50/2A, 1st Floor, Ashoka road,
Mysuru-570 001. Cell: 93414-64636
E-mail: msj186@yahoo.co.in
Date: 7.3.2026, Place: Mysuru



10,000 ಕ್ಕಿಂತ ಹೆಚ್ಚು ರೋಗಿಗಳ ವಿಶ್ವಾಸ

MEGAVIN Vascular Care
ನಿಮ್ಮ ವೆರಿಕೋಸ್ ವೇನ್‌ಗಳಿಗಾಗಿ
ನಮ್ಮ ಬಳಿ ಸುರಕ್ಷಿತ ಮತ್ತು ವಿಶ್ವಾಸಾರ್ಹ ಚಿಕಿತ್ಸೆ!

ಕಾಲುಗಳಲ್ಲಿ ನೋವು, ಸೆಳತ, ತುರಿಕೆ, ಊತ, ಚರ್ಮದ ಬಣ್ಣ ಕಪ್ಪಾಗುವುದು, ಕಾಲಿನ ಗಾಯಗಳು

ಮಿನಿಮಲ್ ಇನ್ ವೇಸಿವ್ (ಓಪನ್ ಸರ್ಜರಿ ಇಲ್ಲ)

ಸಂದರ್ಶನ ಪ್ರತಿ ಶುಕ್ರವಾರ
13, 20, 27ನೇ ಮಾರ್ಚ್ 2026

ರಾಮಕೃಷ್ಣ ಆಸ್ಪತ್ರೆ
ವಿದ್ಯಾರಣ್ಯಪುರಂ, ಮೈಸೂರು
ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ

ಮಾನಸ ಅರ್ಥೋಪೆಡಿಕ್ ಆಸ್ಪತ್ರೆ
ಟಿ.ಕೆ. ಬಡಾವಣೆ, ಮೈ ಸೂರು
ಸಂಜೆ 3 ರ ನಂತರ



ಡಾ. ವಿನಯ್ ನ್ಯಾಪತಿ
ಕ್ಲಿನಿಕಲ್ & ವ್ಯಾಸ್ಕುಲಾರ್ ಇಂಟರ್‌ವೆನ್ಷನಲ್ ರೇಡಿಯಾಲಜಿಸ್ಟ್

9035223471 – 9880462229

ಮೊದಲ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಮೋನಿಕಾ H.S & ನಿಖಿಲೇಶ್ ಕುಮಾರ್ N.P

ವರ್ಷಗಳು ಕಳೆದರೂ ನಿಮ್ಮ ನಡುವಿನ ಪ್ರೀತಿ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿ. ಜೀವಂತ ಪರ್ಯಂತ ಖುಷಿಯಾಗಿರಿ ಎಂದು ಹಾರೈಸುತ್ತೇವೆ.

ನಿಮ್ಮ ಪ್ರೀತಿಯ ತಂದೆ : ನಿಂಗಪ್ಪ ಗೌಡ ಎನ್ ವಿ
ಟೌನ್ ಟೆನ್ನಿಸ್ ಕ್ಲಬ್ ಮಾಜಿ ಅಧ್ಯಕ್ಷರು,
ನಂಜನಗೂಡು, ತಾಯಿ : ಪ್ರೇಮ ನಿಂಗಪ್ಪಗೌಡ,
ತಂಗಿ : ನಿಸರ್ಗ ಎನ್ ಪಿ, B.E.
ಹಾಗೂ ಕುಟುಂಬವರ್ಗದವರು, ಮೈಸೂರು.

WANTED
1) Architect
(D.Arch / B.Arch)
2) Civil Engineers
(BE/Diploma) with Experience
Call: 9945621188

MAHATHMA GANDHI B.ED COLLEGE
KSRTC Bus Depot, Sathagalli, Mysuru
Academic Year: 2025-2026
ADMISSION FOR
B.Ed (Last Few Seats Left)
Contact No:
0821-2513349 93438 28203
Office: Mahathma Gandhi Trust, (Inside Geethanjali International Global School) #CA-7, BEML Layout, 2nd Stage, Srirampura, Mysore. Email: mahatmagandhitrust@gmail.com

INVEST WHERE THE CITY IS GROWING
Premium Plotted Development Near Mysore Airport
Located on NH-766 Highway Approach, ensuring seamless connectivity to key city hubs.
MUDA & RERA APPROVED
- 500 m from Toll Plaza • High-Growth Investment Corridor
- Ready-to-Build Residential Plots • World-Class Infrastructure & Amenities • Wide Roads | Green Environment • Excellent Planned Layout

Available Sizes: 30 × 40 | 40 × 60 | 50 × 80
Exclusive Inaugural Offer
Limited number of sites
Book Now.
Call: 9606907153 / 63663 84517

इंडियन बैंक Indian Bank इलाहाबाद ALLAHABAD
Mysore Branch,I Floor, Vinoba Road, Gandhi Square VINOBA ROAD MYSORE,570001

APPENDIX- IV-A" [See proviso to rule 8 (6)]
Sale notice for sale of immovable properties

E-Auction Sale Notice for Sale of Immovable Assets under the Securitisation and Reconstruction of Financial Assets and Enforcement of Security Interest Act, 2002 read with proviso to Rule 8 (6) of the Security Interest (Enforcement) Rules, 2002


Notice is hereby given to the public in general and in particular to the Borrower (s) and Guarantor (s) that the below described immovable property mortgaged/charged to the Secured Creditor, the **Symbolic** possession of which has been taken by the Authorised Officer of Indian Bank, Mysuru branch, Secured Creditor, will be sold on "As is where is", "As is what is", and "Whatever there is" on **14.08.2025** for recovery of **Rs.1,54,06,952/- (Rupees One Crore Fifty Four Lakhs Six thousand Nine hundred and Fifty Two only) as on 06.12.2023** plus interest and charges thereon due to the Indian Bank, Mysuru Main branch, Secured Creditor, **Mr Ayub Khan (Borrower and Mortgagor), Mrs. Sayeda Tabassum (Borrower),Mr Mubarak Khan (Borrower) and Ms. Mushkhan Khanun (Guarantor)** residing at #House No 49 situated at SBM Colony Mahadevapura main road, Udayagiri, Nazarbad Mohalla, Mysuru
The specific details of the property intended to be brought to sale through e-auction mode are enumerated below:

Detailed description of the Property	Residential property belonging to Mr Ayub Khan bearing House No 49 measuring East to West (64+60) / 2ft, North to South (65+83)/2ft, with total area of land measuring 4588.00 Sqft, situated at SBM Colony Mahadevapura main road, Udayagiri, Nazarbad Mohalla, Mysuru Boundaries East: Road West: Property no 48 North: Road South: Property no 50
Encumbrances on property	NIL
Reserve Price	Rs 6,21,78,498/-
EMD Amount	Rs 62,17,850/-
Bid incremental amount	Rs. 50,000/-
Date and time of e-auction	**16.04.2026 10.00 AM to 05.00 PM**
Property ID No.	IDIB6942577369

Bidders are advised to visit the website (https://www.ebkray.in) of our e auction service provider PSB Alliance Pvt.Ltd. to participate in online bid. For Technical Assistance Please call 8291220220. For Registration status and for EMD status please email to support.ebkray@psballiance.com.For property details and photograph of the property and auction terms and conditions please visit: https://www.ebkray.in and for clarifications related to this portal, please contact PSB Alliance Pvt. Ltd, Contact No. 8291220220. **Bidders are advised to use Property ID Number** mentioned above while searching for the property in the website with **https://www.ebkray.in**.

Date: 11.03.2026
Place: MYSURU
Sd/-,
Authorised Officer

❀ ಶ್ರದ್ಧಾಂಜಲಿ ❀



ದಿವಂಗತ ಭಾಗ್ಯಶಿಲ್ಪಿ ಶ್ರೀ ಕೆ. ಎನ್. ಶಿವಲಿಂಗಯ್ಯನವರು
ಜನನ : 23–11–1924 ನಿಧನ : 12–03–1999

ಗೌರವ ಕಾರ್ಯದರ್ಶಿಗಳು 1963–1991
ಕಾರ್ಯನಿರ್ವಾಹಕ ಅಧ್ಯಕ್ಷರು 1991–1999

ನೀವು ನಮ್ಮನ್ನು ಅಗಲಿ ಇಂದಿಗೆ 27 ವರ್ಷಗಳಾದವು,
ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ.
ನೀವು ಹಾಕಿಕೊಟ್ಟ ಮಾರ್ಗವೇ ನಮಗೆ ದಾರಿದೀಪವಾಗಿದೆ
ನಿಮ್ಮ ಆಶೀರ್ವಾದವೇ ನಮ್ಮೆಲ್ಲರಿಗೂ ಶ್ರೀರಕ್ಷೆ

ಪ್ರಾಂಶುಪಾಲರು, ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿವೃಂದ,
ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು

ಶ್ರೀ ಶಂಭುಲಿಂಗೇಶ್ವರ
ಶಿಕ್ಷಣ ಮಹಾವಿದ್ಯಾಲಯ
ಬಿ.ಇಡಿ ದಾಖಲಾತಿ ಪ್ರಕಟಣೆ 2026
B.Ed



ವಿದ್ಯಾರ್ಹತೆ: ಯಾವುದಾದರು ಪದವಿ
ದಾಖಲಾತಿಗೆ ಕೊನೆಯ ದಿ: 16/3/2026.
360° ಸಮಗ್ರ ಕಲಿಕಾ ವಿಧಾನ | ಉತ್ಕೃಷ್ಟ ಮೂಲಸೌಕರ್ಯಗಳು | ಪರಿಣಿತ ಅಧ್ಯಾಪಕರು
ಪಾಂಡವಪುರ ತಾ, ಮಂಡ್ಯ ಜಿಲ್ಲೆ, ದೂ: 7338138083

HIRING !!
WE ARE LOOKING FOR :
- OUTLET STORE MANAGER - 01 No.
 (Qualified persons with a Minimum of 4 to 5 Years of Experience for the above).
- STORE MANAGER - 01 No.
 (Qualified persons with a Minimum of 4 to 5 Years of Experience for the above)
- PACKAGING EXECUTIVE - 02 Nos.
- QUALITY INSPECTORS - 02 Nos.
- COUNTER SALESMAN - 10 Nos.
- CASHIER - 04 Nos.
- SALES & MARKETING EXECUTIVE - 01No.
- KITCHEN STAFF - 10
 (With a course completed in Pastry & Bakery)
 Qualified person with a minimum experience of 1 to 2 years.
- OFFICE BOY - 01 No.
 Freshers can apply as well.

Send your Resume to :
shwetha.hariswitiventure@gmail.com
Call : 63648 95028

ನಗರಸಭಾ ಕಾರ್ಯಾಲಯ, ಹುಣಸೂರು ಮೈಸೂರು ಜಿಲ್ಲೆ – 571105
CITY MUNICIPAL COUNCIL, HUNSUR MYSORE DIST.,-571105.
ಈ–ಮೇಲ್ : ka.hunsur.cmc@gmail.com ಫ್ಯಾಕ್ಸ್: 08222-252250 ಕಛೇರಿ ಫೋನ್ : 252048
E-mail: ka.hunsur.cmc@gmail.com Fax:08222-252250 Office Phone : 252048

ಸಂಖ್ಯೆ: ಹುನಕಾ/ಜೆ.ಇ(ವಿ)/ನೀಸವಿ/ಏ.ಕೊ.ದು./57/2025–26 ದಿನಾಂಕ: 11–03–2026

ಸಾರ್ವಜನಿಕ ಪ್ರಕಟಣೆ

ಹುಣಸೂರು ನಗರದ ಮೂಲಕ ಹಾದುಹೋಗುತ್ತಿರುವ ಬಂಟ್ವಾಳ–ಮೈಸೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಲಕ್ಷ್ಮಣ ತೀರ್ಥ ನದಿಗೆ ಅಡ್ಡಲಾಗಿ ನಾಲ್ಕು ಪಥದ ಸೇತುವೆ ಮರುನಿರ್ಮಾಣ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕೈಗೊಂಡಿದ್ದು, ಈ ಕಾಮಗಾರಿಗೆ ಕಾವೇರಿ ನದಿಯಿಂದ ಹುಣಸೂರು ನಗರಕ್ಕೆ ಶುದ್ಧ ಕುಡಿಯುವ ನೀರನ್ನು ಪೂರೈಸುತ್ತಿರುವ 506 ಎಂ.ಎಂ. ವ್ಯಾಸದ ಎಂ.ಎಸ್. ಏರು ಕೊಳವೆಯು ಅಡಚಣೆಯಾಗುತ್ತಿದ್ದು, ಈ ಕೊಳವೆಯನ್ನು ಕಡಿತಗೊಳಿಸಿ ಸ್ಥಳಾಂತರಿಸಬೇಕಿರುವ ಕಾರಣ, ನೀರುಸರಬರಾಜು ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿಕೊಡುವಂತೆ ಸದರಿ ಕಾಮಗಾರಿಯನ್ನು ಕೈಗೊಂಡಿರುವ ಸಂಸ್ಥೆಯವರು ನಗರಸಭೆಯನ್ನು ಕೋರಿರುತ್ತಾರೆ. ಪ್ರಯುಕ್ತ ಹೆದ್ದಾರಿ ಕಾಮಗಾರಿಯ ತುರ್ತು ಅವಶ್ಯಕತೆಗಾಗಿ ದಿನಾಂಕ:13–03–2026 ಮತ್ತು 14–03–2026 ರಂದು ಲಕ್ಷ್ಮಣ ತೀರ್ಥ ನದಿಗೆ ಅಡ್ಡಲಾಗಿರುವ ಎಂ.ಎಸ್.ಏರುಕೊಳವೆಯನ್ನು ಸ್ಥಳಾಂತರಿಸುವ ಕೆಲಸವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಿರುತ್ತಾರೆ ಮತ್ತು ಅದೇ ಸಮಯದಲ್ಲಿ ಛಾಯಾದೇವಿ ಪೆಟ್ರೋಲ್ ಬಂಕ್ ಮುಂಭಾಗಲ್ಲಿಯೂ ಸಹಾ ಎಂ.ಎಸ್. ಏರುಕೊಳವೆಯ ಲೀಕೇಜ್ ಇದ್ದು ಸದರಿ ಕೊಳವೆಯನ್ನೂ ಕೂಡಾ ದುರಸ್ತಿಪಡಿಸಬೇಕಿರುವ ಕಾರಣ ಹುಣಸೂರು ನಗರಕ್ಕೆ ಕಾವೇರಿ ನದಿ ಮೂಲದಿಂದ ನೀರಿನ ಪಂಪಿಂಗ್ ಸ್ಥಗಿತಗೊಳಿಸಬೇಕಾದ ಅನಿವಾರ್ಯತೆಯಿರುತ್ತದೆ. ಪ್ರಯುಕ್ತ ದಿನಾಂಕ:13–03–2026 ಮತ್ತು ದಿನಾಂಕ:14–03–2026 ರಂದು ಹುಣಸೂರು ನಗರಸಭೆಯ ವ್ಯಾಪ್ತಿಯಲ್ಲಿ ಕಾವೇರಿ ಕುಡಿಯುವ ನೀರು ಸರಬರಾಜುವಿನಲ್ಲಿ ವ್ಯತ್ಯಯವಾಗಲಿದ್ದು, ಅಡಚಣೆಗಾಗಿ ವಿಷಾದ ವ್ಯಕ್ತಪಡಿಸುತ್ತಾ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಈ ಮೂಲಕ ಕೋರಲಾಗಿದೆ.

ಸಹಿ/– ಪೌರಾಯುಕ್ತರು
ನಗರಸಭೆ, ಹುಣಸೂರು

ಜಿಲ್ಲಾಧಿಕಾರಿಗಳು ನ್ಯಾಯಾಲಯ ಮೈಸೂರು ಜಿಲ್ಲೆ, ಮೈಸೂರು
ಪ್ರಕರಣ ಸಂಖ್ಯೆ. M.A.G/L.T.A-59/2025

ವಾದಿ: ಕಾರ್ಯನಿರ್ವಾಹಕರು ಅಭಿಯಂತರು ಎಲೆಕ್ಟ್ರಿಕಲ್ ಕೆ.ಪಿ.ಟಿ.ಸಿ.ಎಲ್.ಮೇಜರ್ ವರ್ಕ್ಸ್ ವಿಭಾಗ ಮೈಸೂರು ಎಫ್.ಟಿ.ಎಸ್. ಕಾಂಪೌಂಡ್. ಎನ್.ಆರ್.ಮೊಹಲ್ಲಾ, ಮೈಸೂರು. ವಿರುದ್ಧ
ಪ್ರತಿವಾದಿಗಳು :– ಶ್ರೀಮತಿ. ಸಿದ್ದಮ್ಮ ಕೋಂ ಲೇಟ್ ರಂಗನಾಯ್ಕ ಇವರ ಮತ್ತು ಇವರ ಮಕ್ಕಳು ಶ್ರೀಮತಿ ಜಯಮ್ಮ, ಶ್ರೀಮತಿ ಶಿವಮ್ಮ, ಶ್ರೀಮತಿ ಸುವಿತ್ರ ಮತ್ತು ಶ್ರೀ ರಂಗಸ್ವಾಮಿ ಹೆಜ್ಜಿಗೆ ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ–571302

ಸಾರ್ವಜನಿಕ ಪ್ರಕಟಣೆ

ನ್ಯಾಯಾಲಯ ಸಮನ್ಸ್ ಪ್ರತಿಕಾ ಪ್ರಕಟಣೆ ಮೂಲಕ

ವಿಷಯ:– ಮೇಲ್ಕಂಡ ನ್ಯಾಯಾಲಯದಲ್ಲಿ ವಾದಿಯ ಪ್ರತಿವಾದಿಗಳು ವಿರುದ್ಧ ಉಪಬಂಧ ಭಾರತೀಯ ಟೆಲಿಗ್ರಾಂ ಕಾಯ್ದೆ 1885 ರ ಕಲಂ 10 ರಿಂದ 16 ರಡಿಯಲ್ಲಿ ಮತ್ತು ಭಾರತೀಯ ಎಲೆಕ್ಟ್ರಿಸಿಟಿ ಕಾಯ್ದೆ 2003 ಕಲಂ 164 ಅಡಿಯಲ್ಲಿ ಪ್ರತಿವಾದಿಗಳ ವಿರುದ್ಧ ಅರ್ಜಿ ದಾಖಲಿಸಿರುತ್ತಾರೆ ಪ್ರತಿವಾದಿಗಳ ವಾಸ ಸ್ಥಳ ಹೆಜ್ಜಿಗೆ ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ–571302 ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಹೆಜ್ಜಿಗೆ ಗ್ರಾಮದ ಸರ್ವೆ ನಂ.135 ಒಟ್ಟು ವಿಸ್ತೀರ್ಣದಲ್ಲಿ 1 ಎಕರೆ 0–23 ಗುಂಟೆ ಜಮೀನಲ್ಲಿ ವಿದ್ಯುತ್ ಸರಬರಾಜು ಮಾಡಲು ಗೋಪುರ ನಿರ್ಮಾಣದ ಯೋಜನೆ ಸಂಬಂಧಪಟ್ಟಂತೆ 1 ರಿಂದ 5ನೇ ಎದುರುದಾರರು ಪ್ರತಿಬಂಧಕಾಜ್ಞೆ ಕೋರಿ ಅರ್ಜಿ ದಾಖಲಿಸಿದ್ದು, ಈ ಸಂಬಂಧ ನ್ಯಾಯಾಲಯದ ನೋಟೀಸ್‌ನ್ನು ಜಾರಿಗೊಳಿಸುವುದನ್ನು ನಿರಾಕರಿಸುತ್ತಿದ್ದು ಉದ್ದೇಶಪೂರ್ವಕವಾಗಿ ನೋಟಿಸ್ ಅನ್ನು ಮೇಲ್ಕಂಡ ಎದುರುದಾರರುಗಳಿಗೆ ಈ ಮೂಲಕ ನೋಟೀಸ್ ಜಾರಿಗೊಳಿಸಲು ಆದೇಶಿಸಿದ್ದು, ಪ್ರತಿವಾದಿಯು ಇದನ್ನು ನೋಟೀಸ್ ಎಂದು ಪರಿಗಣಿಸಿ ನ್ಯಾಯಾಲಯಕ್ಕೆ ಹಾಜರಾಗಲು ಹಾಗೂ ತರಕಾರರು ಇದ್ದು ಪಕ್ಷದಲ್ಲಿ ಸಲ್ಲಿಸಲು ತಿಳಿಸಲಾಗಿದೆ.
ಮೇಲ್ಕಂಡ ನ್ಯಾಯಾಲಯಕ್ಕೆ ದಿನಾಂಕ: 24/03/2026 ರಂದು ಮಧ್ಯಾಹ್ನ 03ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಘನ ನ್ಯಾಯಾಲಯವು ಲಭ್ಯ ದಾಖಲೆಗಳ ಆಧಾರದ ಮೇಲೆ ತೀರ್ಮಾನಿಸುತ್ತದೆ.

ಮೇಲ್ಮನವಿದಾರರ ಪರ ವಕೀಲರು
ಸಹಿ/– ಆರ್. ಜಗದೀಶ್ ಕುಮಾರ್
ವಕೀಲರು #355, ಗುರುಕಾರ್‌ದೇವಣ್ಣ ರಸ್ತೆ,
ಅಗ್ರಹಾರ ಫೋರ್ಟ್ ಮೊಹಲ್ಲಾ, ಮೈಸೂರು–04
ಮೊ: 9481953440

ಜಿಲ್ಲಾಧಿಕಾರಿಗಳ ಪರವಾಗಿ
ಸಹಿ/– ಪೀಠಾಧಿಕಾರಿಗಳು
ಜಿಲ್ಲಾಧಿಕಾರಿಗಳ ನ್ಯಾಯಾಲಯ ಮೈಸೂರು
ಮೈಸೂರು ಜಿಲ್ಲೆ, ಮೈಸೂರು

ದಿನಾಂಕ: 10–03–2026, ಸ್ಥಳ: ಮೈಸೂರು

Mega Walk-in Drive

rProcess Works. For You.

rProcess is hiring for Physical AI project

Role Overview: Turn your daily tasks into Earnings, Do simple Household tasks! Record high-quality data to powers AI systems.

How it works: You'll record simple household activity videos (we provide the setup instructions - head gear, phone mount, card reader). Tasks include cooking, dishwashing, appliance loading, laundry etc., Earn attractive perks for accepted video
Attractive earnings: **Rs. 20,000 - 30,000 per month ++**

Who can Apply:
- Are you familiar / comfortable using simple camera and smartphone?
- Age limit – 18+ only
- Completely work from home Opportunity
- Flexible work hours / Shift

Walk-in with all Documents:
12th March 2026 till 14th March 2026 (9AM to 3 PM)
WALK-IN VENUE:
1. Gunamba towers No. 579/2, D Subbaiah Road, Lakshmipuram, Mysuru - 04
2. "Meghna Haven", T N Pura Main Rd, Nadanahalli, Mysuru-28
Contact for more info - 99800 07732 / 78295 73628 / 79753 64055
Apply to Email: careers@rprocess.net
www.rprocess.ai